ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 26 ಜೂನ್ 26, 2005 ಬೆಲೆ ರೂ. 3.00



ಕಾಫಿ : ಬಂಡವಾಳಿಗರಿಗೆ ಮಣೆ ಬೆಳೆಗಾರರಿಗೆ ಬವಣೆ



ಮೆಟ್ರೋ-ಮೋನೋ ಕದನ

ಭೂಮಿ-ಆಹಾರ ಉದ್ಯೋಗಕ್ಕಾಗಿ ರಾಷ್ಟ್ರವ್ಯಾಪಿ ಆಂದೋಲನ

ಕೋಮುವಾದಿ ಬಿಜೆಪಿಯ ಕಾಲು ಮುರಿದ ಮತದಾರರು

ಗೋಧ್ರಾ : ನ್ಯಾಯ ಇನ್ನೂ ದೂರ!

- ಕದಂಬ ನೌಕಾನೆಲೆ - ಮೊಸಳೆ ಕಣ್ಣೀರು
- ಐಸೆಕ್ ಸಮಿತಿಯೆಂಬ ಪರ್ವತ ಪ್ರಸವ
- ಶಿಕ್ಷಣ : ಯುಪಿಎ ಸರ್ಕಾರದ ನೀತಿ - ಏನು-ಎತ್ತ?
- ನೆಲ್ಲಿಕಾರು : ಬಜರಂಗ ದಳದ ಗೂಂಡಾಗಿರಿ

ಕದಂಬ ನೌಕಾನೆಲೆ ರಾಷ್ಟ್ರಕ್ಕೆ : ಬಿಜೆಪಿ ಮೊಸಳೆ ಕಣ್ಣೀರು :

ವಿಠ್ಠಲ ಬಂಡಾರಿ

ಅಭಿವೃದ್ಧಿ ಯೋಜನೆಗಳ ಜಾರಿಗೆ ತೋರುವ ಉತ್ಸಾಹವನ್ನು ಅದರಿಂದ ನೆಲೆತಪ್ಪಿದವರ, ನಿರುದ್ಯೋಗಿಗಳ ಪುನರ್‌ವಸತಿ-ಪರಿಹಾರಕ್ಕೆ ತೋರುತ್ತಿಲ್ಲ. ನೆನೆಗುದಿಗೆ ಬಿದ್ದ ಈ ಪ್ರಶ್ನೆ ಜೀವಂತವಾಗಿ ಉತ್ತರಕನ್ನಡ ಜಿಲ್ಲೆಯ ಜನತೆಯನ್ನು ದಹಿಸುತ್ತಿದೆ. ಕದಂಬ ನೌಕಾನೆಲೆಯ ಉದ್ಘಾಟನೆ ಬಗ್ಗೆ ವಿರೋಧದ ಖ್ಯಾತೆ ತೆಗೆದ ಬಿಜೆಪಿಗೂ ಮೂಲಪ್ರಶ್ನೆಗಳು ಬೇಕಿಲ್ಲ. ಅಂದಹಾಗೆ ಆರು ವರುಷ ಕೇಂದ್ರದಲ್ಲಿ ಅಧಿಕಾರ ನಡೆಸಿದ್ದ ಇವರು ಆಗ ಮಾಡದೇ ಬಿಟ್ಟು ಈಗ ತಕರಾರು ಎತ್ತುವ ಉದ್ದೇಶವಾದರೂ ಏನು? ನೌಕಾನೆಲೆಯ ಉದ್ಘಾಟನೆಯ ಸುತ್ತಮುತ್ತಲಿನ ವಿದ್ಯಮಾನಗಳತ್ತ ಗಮನ ಹರಿಸಿದ ಲೇಖನವಿಲ್ಲಿದೆ.

ಬಹುನಿರೀಕ್ಷೆಯ 'ಕದಂಬ' ನೌಕಾನೆಲೆಯನ್ನು ಇತ್ತೀಚೆಗೆ ರಕ್ಷಣಾ ಸಚಿವ ಪ್ರಣಬ ಮುಖರ್ಜಿ ಅವರು ರಾಷ್ಟ್ರಕ್ಕೆ ಅರ್ಪಿಸಿದರು. ಏಷ್ಯಾಖಂಡದಲ್ಲಿಯೇ ಅತಿ ದೊಡ್ಡದಾದ ಮತ್ತು ಅತ್ಯಾಧುನಿಕ ವಾದ ರಕ್ಷಣಾವ್ಯೂಹವಾಗಿದೆ ಎಂದು ಹೇಳಲಾಗಿದೆ. ಉತ್ತರಕನ್ನಡ ಜಿಲ್ಲೆಯ ಪ್ರಥಮ ರಾಜಮನೆತನವಾದ ಕದಂಬ ವಂಶದ ನೆನಪಿಗಾಗಿ ಈ ನೌಕಾನೆಲೆಗೆ 'ಕದಂಬ' ಎಂದು ಹೆಸರಿಡಲಾಗಿದೆ.

'ಕದಂಬ' ಎಂದು ನಾಮಕರಣ ಮಾಡಿರುವುದೇ ಒಂದು ಹೆಮ್ಮೆಯ ಸಂಗತಿಯಾಗಿ ಉತ್ತರಕನ್ನಡ ಜಿಲ್ಲೆಯ ಅನೇಕರಿಗೆ ಪುಳಕ ಹುಟ್ಟಿಸಿದ್ದನ್ನು ಬಿಟ್ಟರೆ ಜಿಲ್ಲೆಗೆ ಈವರೆಗೆ ಹೇಳಿಕೊಳ್ಳುವಂತಹ ಪ್ರಯೋಜನವೇನೂ ಆಗಿಲ್ಲ. ಮುಂದೆ ನೋಡಬೇಕಷ್ಟೇ. ಆದರೆ ಸಮೃದ್ಧ ಮೀನಿನ ರಾಶಿಯೇ ಇರುವ ಕರಾವಳಿಯನ್ನು ಮೀನುಗಾರರು ಕಳೆದುಕೊಂಡಿದ್ದಕ್ಕೆ ಹೋಲಿಸಿದರೆ ಪ್ರತಿಫಲವಾಗಿ ಬಂದ ಪ್ರಯೋಜನ ಅಷ್ಟಕ್ಕಷ್ಟೆ.

ಸಮಸ್ಯೆ ನೀಗದ ಯೋಜನೆಗಳು

ಉತ್ತರಕನ್ನಡಕ್ಕೆ ಬಂದ ಬಹುತೇಕ ಯೋಜನೆಗಳು ಜಿಲ್ಲೆಯಲ್ಲಿ ನಿರಾಶ್ರಿತರ/ ನಿರುದ್ಯೋಗಿಗಳ ಬವಣೆಯನ್ನು ನೀಗಿಸಲಿಲ್ಲ. ಬೆಳೆಯುತ್ತಿರುವ ನಿರುದ್ಯೋಗಕ್ಕೆ ಹೋಲಿಸಿದರೆ ಸೃಷ್ಟಿಗೊಂಡ ಉದ್ಯೋಗಗಳು ತೀರಾ ಕಡಿಮೆ. ಕೈಗಾ, ಕೊಂಕಣರೈಲ್ವೆ.. ಈಗ ಸೀಬರ್ಡ್ ಯೋಜನೆ. ಈ ಯೋಜನೆಗಾಗಿ ಕೆಲವು ಜನ ಪುಳಕಿತರಾದರೆ ಭೂಮಿ-ಮನೆ ಕಳೆದುಕೊಂಡ ಜನರ ಗೋಳು ಹೇಳತೀರದು. ಕೆಲವರು ಸಂಪೂರ್ಣ ನಿರ್ಗತಿಕರಾಗಿದ್ದಾರೆ. ಕೆಲವರು ಕಾರವಾರದ ಬೀದಿಯಲ್ಲಿ ಭಿಕ್ಷಾಟಣೆ ಕೂಡ ಮಾಡುತ್ತಿರುವುದಾಗಿ ಪತ್ರಿಕೆ ವರದಿ ಮಾಡಿತ್ತು. ಭೂಮಿ ಕಳೆದುಕೊಂಡವರಿಗೆ ಕಡ್ಡಾಯವಾಗಿ ಪರ್ಯಾಯ ಭೂಮಿಯನ್ನೋ ಅಥವಾ ಯೋಜನೆಯಲ್ಲಿ ನೌಕರಿಯನ್ನೋ ಕೊಡಲು ಸರ್ಕಾರ ನಿರ್ಧರಿಸದಿರುವುದು ಈ ಅವಾಂತರಕ್ಕೆ ಕಾರಣವಾಗಿದೆ. ಯಾವುದೇ ಯೋಜನೆಯನ್ನು ರೂಪಿಸುವಲ್ಲಿ ಮತ್ತು ಜಾರಿ ಮಾಡುವಲ್ಲಿಯ ಸರ್ಕಾರದ/ ಅಧಿಕಾರಿಗಳ ಉತ್ಸಾಹ ಆಯಾ ಯೋಜನೆಯಲ್ಲಿ ನಿರಾಶ್ರಿತರಾಗುವ ಸಂತ್ರಸ್ತರಿಗೆ ಅಗತ್ಯ ಸೌಲಭ್ಯ, ನ್ಯಾಯವಾದ ಪರಿಹಾರ ಕೊಡುವಲ್ಲಿ ಇರದಿರುವುದು ನೋವಿನ ಸಂಗತಿ. ಇದು ಉತ್ತರ ಕನ್ನಡಕ್ಕೆ ಬಂದ ಎಲ್ಲಾ ಯೋಜನೆಯ ಸಂದರ್ಭದಲ್ಲೂ ಸತ್ಯ. ಹಾಗಾಗಿ ಇಂದು ಯಾವುದೇ ಯೋಜನೆಯನ್ನು ಜಿಲ್ಲೆಯ ಅಭಿವೃದ್ಧಿಪರ ಯೋಚಿಸುವ ಜನರೂ ವಿರೋಧಿಸುವ ಮಟ್ಟಕ್ಕೆ ಬೆಳೆಯುತ್ತಿದ್ದಾರೆ. ಇಂತಹ ಅಪಾಯಕಾರಿ ಬೆಳವಣಿಗೆಗೆ ಕಾರಣವಾಗಿರುವ ಸರ್ಕಾರದ ನೀತಿಯನ್ನು ಬದಲಾಯಿಸಿಕೊಳ್ಳಬೇಕಾಗಿದೆ.

ತ್ಯಾಗ ಮಾಡಿದವರನ್ನು ಮರೆತವರು

ಫಲವತ್ತಾದ ಭೂಮಿ, ಮೀನುಗಾರಿಕೆಗೆ ಅಮೂಲ್ಯವಾದ ಸಮುದ್ರತೀರ, ಜೀವಮಾನದ ದುಡಿಮೆಯಿಂದ ಕಟ್ಟಿಸಿಕೊಂಡ ಮನೆಗಳನ್ನು ಕಳೆದುಕೊಂಡು (ಈ ದೇಶದ ರಕ್ಷಣೆಗಾಗಿ ತ್ಯಾಗ ಮಾಡಿದವರು) ನಿರ್ಗತಿಕರಾದವರಿಗೆ ಕೊಟ್ಟ ಮನೆಗಳನ್ನು, ಭೂಮಿಯನ್ನು ನೋಡಿದರೆ ಮನುಷ್ಯನೊಬ್ಬ ಉಳಿಯಲು ಇದು ಯೋಗ್ಯವಾದದ್ದು ಎಂದು ಯಾರೂ ನಿರ್ಧರಿಸಲಾರರು. ಹಾಗಾಗಿ ಈ ಸರ್ಕಾರ, ಅವರ ಬೇಜವಾಬ್ದಾರಿ ಅಧಿಕಾರಿಗಳಿಗೆ ಮನುಷ್ಯತ್ವ ಇದೆಯೇ ಎನ್ನುವ ಬಲವಾದ ಸಂಶಯ ಕಾಡುತ್ತದೆ.



ಕದಂಬ ನೌಕಾನೆಲೆ ರಕ್ಷಣಾಸಚಿವ ಪ್ರಣಬ್ ಮುಖರ್ಜಿ ಅವರಿಂದ ರಾಷ್ಟ್ರಕ್ಕೆ ಸಮರ್ಪಣೆ

ಇಂತಹ ಯೋಜನೆಗೆ ಬಂದಾಗ ಆಡಳಿತದಲ್ಲಿರುವ, ಅಧಿಕಾರದಲ್ಲಿರುವ ಪಕ್ಷದ ನಾಯಕರು, ಶಾಸಕರು, ಸಂಸದರು ಜಿಲ್ಲೆಗೆ ಅನುಕೂಲ ಆಗುವಂತೆ ಮಾಡಬೇಕು. ಜನ ಕೂಡ ಹಾಗೆ ಆಶಿಸುತ್ತಾರೆ. ಹಾಗಾದಾಗ ಮಾತ್ರ ಅಭಿವೃದ್ಧಿಗೊಳ್ಳಲು ಸಾಧ್ಯ. ಆದರೆ ಜನಸಾಮಾನ್ಯರ ಒಡಲಾಳದ ನೋವನ್ನು ಅರಿಯದ, ಕೇವಲ ಹಣವಂತರ ಹಿಂಬಾಲಕ ವೃತ್ತಿಯಲ್ಲಿ ಆಸಕ್ತರಾಗಿರುವ ಪಕ್ಷಗಳು ಈವರೆಗೆ ಕೇಂದ್ರ ರಾಜ್ಯವನ್ನು ಆಳುವುದರಿಂದ, ಅಂತಹವರು ಜಿಲ್ಲೆಯಲ್ಲಿ ಆಯ್ಕೆಯಾಗಿರುವುದರಿಂದ ಇಂತಹ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿಲ್ಲ. ಬದಲಾಗಿ ದಿನದಿಂದ ದಿನಕ್ಕೆ ಉಲ್ಬಣವಾಗುತ್ತಿದೆ.

ತಮಾಷೆಯೆಂದರೆ.........

ತಮಾಷೆಯೆಂದರೆ 'ಕದಂಬ ನೌಕಾನೆಲೆ'ಯ ಉದ್ಘಾಟನೆಯ ದಿನ ಬಿಜೆಪಿ ಕಾರವಾರದಲ್ಲಿ ಪ್ರತಿಭಟನಾ ಧರಣಿ ನಡೆಸಿದ್ದು. ದಿ.ರಾಜೀವಗಾಂಧಿ ಶಿಲಾನ್ಯಾಸ ಹಾಕಿದ ನಂತರ ಈವರೆಗೆ ಗಂಭೀರವಾಗಿ ನ್ಯಾಯ ಕೊಡಿಸಲು ಪ್ರಯತ್ನಿಸದ ಬಿಜೆಪಿಗೆ ಏಕಾಏಕಿಯಾಗಿ ನಿರಾಶ್ರಿತರ ಮೇಲೆ ಕರುಣೆ ಬಂದಿದ್ದೇಕೆ ಎಂದು ಜಿಲ್ಲೆಯ ಜನ ಪ್ರಶ್ನಿಸುತ್ತಿದ್ದಾರೆ. ಕೇವಲ ಪ್ರಚಾರತಂತ್ರವಲ್ಲದೆ ನಿರಾಶ್ರಿತರ ಮೇಲಿನ ಪ್ರೀತಿಯಲ್ಲ ಎಂದು ಜಿಲ್ಲೆಯ ಜನ ಅರ್ಥ ಮಾಡಿಕೊಳ್ಳಲಾರದಷ್ಟು ದಡ್ಡರೇನಲ್ಲ. ರಾಷ್ಟ್ರೀಯ ಮಾಧ್ಯಮದವರು ಕಾರವಾರಕ್ಕೆ ಬರುತ್ತಾರೆಂದು ತಿಳಿದಾಗ ತಾವೂ ಟಿ.ವಿ ಯಲ್ಲಿ ಪತ್ರಿಕೆಯಲ್ಲಿ ಮುಖಪುಟದ ಸುದ್ದಿಯಾಗಲು ಹೊರಟ ವೀರರು ಇವರು. ಉತ್ತರಕನ್ನಡ ಜಿಲ್ಲೆಯ ಸಂಸದ ಅನಂತಕುಮಾರ ಹೆಗಡೆಯವರು ಕಳೆದುಹೋಗಿದ್ದಾರೆ. ಹುಡುಕಿ ಕೊಡಿ' ಎಂದು ಜಿಲ್ಲೆಯ ಪತ್ರಿಕೆಗಳಲ್ಲಿ ಹಲವರು ಪ್ರಶ್ನಿಸುತ್ತಿದ್ದಾಗ ಅನಂತಕುಮಾರ ಹೆಗ್ಗಡೆಯವರು ಪತ್ರಿಕಾಗೋಷ್ಠಿ ಮಾಡಿ ಪ್ರಶ್ನೆಯ ಮೇಲೆ ಪ್ರಶ್ನೆ ಎಸೆದರು. ಅವರ ಮೇಲಿನ ಪ್ರೀತ್ಯಾಧರಗಳಿಗೆ ಅನುಗುಣವಾಗಿ ಪತ್ರಕರ್ತರು ಪತ್ರಿಕೆಯಲ್ಲಿ ಸ್ಥಳಕೊಟ್ಟರು. ಕೆಲವರಿಗಂತೂ ಕದಂಬದ ಉದ್ಘಾಟನೆಗಿಂತ ದೊಡ್ಡ ಸುದ್ದಿ ಬಿಜೆಪಿಯ ಉತ್ತರ ಪೌರುಷವೇ ಆಗಿತ್ತು. ಅವರ ಮೊದಲ ಪ್ರಶ್ನೆ ಸೋನಿಯಾಗಾಂಧಿಯವರು ಈ ಸಮಾರಂಭಕ್ಕೆ ಯಾಕೆ? ಜಾರ್ಜ್ ಫರ್ನಾಂಡಿಸ್‌ರನ್ನು ಯಾಕೆ ಕರೆದಿಲ್ಲ? ಜಿಲ್ಲೆಯ ಸಂಸದ ಶಾಸಕರಿಗೆ ಸರಿಯಾದ ಆಹ್ವಾನ ಇಲ್ಲ ಯಾಕೆ? ಇದೆಲ್ಲಾ ಆದ ನಂತರ ನಿರಾಶ್ರಿತರಿಗೆ ಪರಿಹಾರ ಸಿಕ್ಕಿಲ್ಲ ಎನ್ನುವುದಾಗಿತ್ತು. ಸೋನಿಯಾ ಗಾಂಧಿ ಇದನ್ನು ಉದ್ಘಾಟಿಸಲಿಲ್ಲ; ಜಾರ್ಜ್ ಪರ್ನಾಂಡೀಸ್‌ರನ್ನು ಕರೆದಿದ್ದರೆ, ಸಂಸದರನ್ನೇ ಉದ್ಘಾಟನೆಗೆ ಕರೆದಿದ್ದರೆ ನಿರಾಶ್ರಿತರ ಸಮಸ್ಯೆಗಳೆಲ್ಲಾ ಪರಿಹಾರ ಆಗುತ್ತಿದ್ದವೇ ಎನ್ನುವುದಕ್ಕೆ ಬಿಜೆಪಿ ಅಥವಾ ಅದರ ವಕ್ತಾರರು ಉತ್ತರಿಸಬೇಕು.



ಕಂಗೆಟ್ಟ ನಿರಾಶ್ರಿತರ ವಸತಿಗಳ ಸ್ಥಿತಿಗತಿ

ತಮಾಷೆ ಇರುವುದು ಇಲ್ಲಿ. ಈ ಹಿಂದೆ 6 ವರ್ಷಗಳ ಕಾಲ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಅಧಿಕಾರದಲ್ಲಿ ಇದ್ದಾಗ ನಿರಾಶ್ರಿತರ ಸಮಸ್ಯೆ ಪರಿಹಾರ ಯಾಕೆ ಆಗಿಲ್ಲ? ಹಿಂದೆ ಅನಂತಕುಮಾರ ಹೆಗಡೆಯವರು ಸಂಸದರಾಗಿದ್ದಾಗ ನಿರಾಶ್ರಿತರ ಸಮಸ್ಯೆ ಪರಿಹಾರಕ್ಕೆ ಬಿಜೆಪಿ ಎಷ್ಟು ಹೋರಾಟ ಮಾಡಿದೆ. (ಪತ್ರ ಬರೆದದ್ದು/ ಮನವಿ ಕೊಟ್ಟಿದ್ದು/ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬರೆದು ಕೊಟ್ಟಿದ್ದು ಬಿಟ್ಟು) ಆಗಲೇ ಹೋರಾಟ ಮಾಡಿ ಸಮಸ್ಯೆ ಬಗೆಹರಿಸಬಹು ದಾಗಿತ್ತಲ್ಲಾ? ಕಳೆದ 10 ವರ್ಷಗಳಲ್ಲಿ ಒಂದೇ ಒಂದು ಸಂದರ್ಭದಲ್ಲಿ ಜನರನ್ನು ಸಂಘಟಿಸಿ ಗಂಭೀರ ಹೋರಾಟ ಮಾಡದ ಬಿಜೆಪಿ ಇಂದು ಮೊಸಳೆ ಕಣ್ಣೀರು ಸುರಿಸುತ್ತಿರುವುದು ತಮಾಷೆಯಲ್ಲದೇ ಇನ್ನೇನು?

ಅಂಜುದೀವ್ ನಡುಗಡ್ಡೆ ಸೀಬರ್ಡ್ ವ್ಯಾಪ್ತಿಗೆ ಬರುತ್ತದೆಂದೂ ಅದರಲ್ಲಿ ಹಿಂದೆಯೇ ಇರುವ ದೇವಸ್ಥಾನಕ್ಕೆ ಹೋಗಲು ಆದೇಶ ಇಲ್ಲ ಎಂದಾಗ ಬಂದ್, ಮೆರವಣಿಗೆ, ಬೆದರಿಕೆಗಳ ಮೂಲಕ ಜಿಲ್ಲೆಯ ಸಾಮರಸ್ಯದ ಬದುಕನ್ನು ನಾಶ ಮಾಡಲು ಹೊರಟವರು ನಿರಾಶ್ರಿತರಿಗಾಗಿ ಎಷ್ಟು ಸಲ ಜಿಲ್ಲೆಯ ಬಂದ್ ಮಾಡಿದ್ದಾರೆ ಎಂದು ಪ್ರಜ್ಞಾವಂತರು ಕೇಳುತ್ತಿದ್ದಾರೆ. ಬದುಕಿಗಾಗಿ ಹೋರಾಟ ಮಾಡಿದವರು ಟಿ.ವಿಯಲ್ಲಿ ಬಂದಿಲ್ಲ; ಹಿಂದಿದ್ದಾರೆ: ಪ್ರಚಾರಕ್ಕಾಗಿ ಹೋರಾಟ ಮಾಡಿದವರು ಟಿ.ವಿಯಲ್ಲಿ ಬಂದಿದ್ದಾರೆ. ಮುಂದಿದ್ದಾರೆ. ಹೇಗಿದೆ ನೋಡಿ ಹೋರಾಟದ ಪ್ರಹಸನ.

ಇನ್ನೊಂದು ಕಡೆ ಜೆ.ಡಿ.ಎಸ್ ಕೂಡ ಧರಣಿ ಕೂತಿತ್ತು. ಆದರೆ ಆವರೆಗೆ ಸಂಘಟನೆಯಲ್ಲಿ ಮುಂಚೂಣಿಯಲ್ಲಿದ್ದ ಮಾಜಿ ಸಚಿವರಾದ ಪ್ರಭಾಕರ ರಾಣೆಯವರು ಅಲ್ಲಿ ಕಾಣಲಿಲ್ಲ. ಬಹುಶ: ಅವರು ನೇರವಾಗಿ ರಕ್ಷಣಾ ಸಚಿವರಿಗೆ ಮನವಿ ಕೊಡಲು ಹೋಗಿದ್ದಿರಬೇಕು.

ಕೊನೆಯ ಮಾತು :

ಇವರೆಲ್ಲರ ಹೋರಾಟದ ಪ್ರಹಸನದ ನಡುವೆ ಕೂಡ ನಿರಾಶ್ರಿತರಿಗೆ ನಿಜವಾದ ಪರಿಹಾರ ಕೊಡಬೇಕಾಗಿದೆ. ಇನ್ನೂ ಕಾಲ ಮಿಂಚಿಲ್ಲ. ಎರಡನೇ ಹಂತದ ಕನ್‌ಸ್ಟ್ರಕ್ಷನ್ ನಡೆಯುತ್ತಿದೆ. ಈ ಸಂದರ್ಭದಲ್ಲಾದರೂ ಗುಂಟೆಗೆ 100-150 ರೂ.ಪರಿಹಾರಕ್ಕೆ ಬದಲು ಕೋರ್ಟು ತೀರ್ಮಾನಿಸಿದ ಪರಿಹಾರ ಕೊಡಬೇಕು. ಕುಟುಂಬಕ್ಕೊಂದಾದರೂ ಉದ್ಯೋಗ ಕೊಡಬೇಕು. ಅಲ್ಲಿ ನಿರ್ಮಾಣ ಆಗುತ್ತಿರುವ ಅತ್ಯಾಧುನಿಕ ಆಸ್ಪತ್ರೆ ನಿರಾಶ್ರಿತ ಜನರಿಗೆ ಮತ್ತು ಜಿಲ್ಲೆಯ ಎಲ್ಲಾ ಜನರಿಗೆ ತೆರೆಯಬೇಕು. ಹಾಗಾದಾಗ ಮಾತ್ರ 'ಕದಂಬ' ಇಡೀ ರಾಷ್ಟ್ರದ ಹೆಮ್ಮೆಯಾದಂತೆ. ನಮ್ಮ ಜಿಲ್ಲೆಯ ಜನರಿಗೂ ಹೆಮ್ಮೆಯಾಗಲು ಸಾಧ್ಯ.



ನಿರಾಶ್ರಿತರ ಹೆಸರಿನಲ್ಲಿ ಕೇವಲ ಹೆಸರಿಗಾಗಿ ಬಿಜೆಪಿ ಪ್ರತಿಭಟನೆ

ಗ್ರಾಮೀಣ ಭಾರತ


ತಿಳಿನೀರು ವಿದ್ಯುತ್ತು ರಸ್ತೆಗಳು ಇಂದೆ
ಇಲ್ಲದಿಹ ಹಳ್ಳಿಗಳ ಹಲವೆಡೆಗೆ ಕಂಡೆ
ದೇವಗುಡಿ ಸರಾಯಿ ಅಂಗಡಿಗಳು ಗೊತ್ತೇ?
ಇಲ್ಲದಿಹ ಹಳ್ಳಿಯೇ ಆಗಿಲ್ಲಪತ್ತೆ.

– ವಿಡಂಬಾರಿ

ಮೆಟ್ರೋ - ಮೊನೋ ಕದನ

'ಮೆಟ್ರೋರೈಲು' ಹಾಗೂ 'ಮೊನೋರೈಲು'ಗಳ ನಡುವಿನ ಸಾರ್ವಜನಿಕ ವಲಯ ಮತ್ತು ಖಾಸಗಿ ಕಂಪನಿಗಳ ವ್ಯತ್ಯಾಸ - ವ್ಯವಹಾರಗಳೇ ವಿವಾದದ ಪ್ರಧಾನ ಅಂಶ. ಮೈತ್ರಿಕೂಟದ ಸರ್ಕಾರದ ಭಾಗಿದಾರರು ಇದನ್ನು ಅತಿಯಾಗಿ ಬೆಳೆಸದೇ ಸಾರಿಗೆ ಒತ್ತಡ ಕಡಿಮೆಗೊಳಿಸಿ, ಕ್ಷಿಪ್ರ ಹಾಗೂ ಸುಗಮ ಸಂಚಾರಕ್ಕಾಗಿ ಮೆಟ್ರೋ ರೈಲಿನ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಸಂಪುಟ ನಿರ್ಧಾರವಾಗಿ, ಸರ್ಕಾರಿ ಆಜ್ಞೆ ಹೊರಬಿದ್ದಿರುವಾಗ ಈ ತಕರಾರು ಏಕೆ?

ಬೆಂಗಳೂರಿನ ರಸ್ತೆಗಳು ಏದುಸಿರುಬಿಡುತ್ತಿವೆ. ಬಿಸಿಲು ಬೆಳೆಯುತ್ತಿರುವಂತೆಯೇ ಸಂಚಾರ ದಟ್ಟಣೆಯೂ ಏರಿ ಸಂಜೆಯೊಳಗೆ ಅದರ ಸ್ಥಿತಿ ತಾರಕಕ್ಕೇರಿಬಿಡುತ್ತದೆ. ಈ ನಡುವೆ ಎಲ್ಲೆಂದರಲ್ಲಿ, ಯಾವಾಗ ಬೇಕಾದರೂ 'ಟ್ರಾಫಿಕ್ ಜಾಮ್'. ಸಂಚಾರದ ಈ ಅಸ್ತವ್ಯಸ್ತವನ್ನು ಬೆಂಗಳೂರಿಗರಿಗೆ ತಿಳಿಸಲೆಂದೇ 'ಎಫ್.ಎಂ. ರೇಡಿಯೋ'ಗಳು ಮೂಲೆಮೂಲೆಗಳಿಂದ ಮಾಹಿತಿ ಪಡೆದು ಕೇಳುಗರ ಕಿವಿಗೆ ರವಾನಿಸುತ್ತವೆ. ಸಂಚಾರಿ ವಾಹನಗಳ ಆರ್ಭಟದಲ್ಲಿ ಆಗುವ ಅಪಘಾತಗಳು, ಸಾರಿಗೆ ನಿಯಮ ಉಲ್ಲಂಘಿಸಿದರೆಂದು ಸಂಚಾರಿ ಪೋಲೀಸ್ ಹಾಕುವ 'ದಂಡ' ನಿತ್ಯವೂ ಪತ್ರಿಕೆಗಳ ನಿಯಮಿತ ಕಾಲಂಗಳಲ್ಲಿ ವರದಿಯಾಗುತ್ತವೆ. ಇಂತಹ ಸಾವುಗಳು ಈಗೀಗ ಸಹಜವಾಗಿ ಓದುಗನ ಕುತೂಹಲಕ್ಕೂ ಕಾರಣವಾಗದೇ ಮಾಮೂಲಿಯಾಗಿ ಬಿಟ್ಟಿವೆ. ಶಾಲೆ, ಕಾಲೇಜು, ಕಛೇರಿ-ಕಾರ್ಖಾನೆ, ಬಸ್‌ಸ್ಟ್ಯಾಂಡು, ರೈಲ್ವೆ ನಿಲ್ದಾಣ, ಪ್ರವಾಸ ಹೀಗೆಂದು ಮನೆಯಿಂದ ಹೊರಟವರು ತಲುಪಬೇಕಾದ ಸ್ಥಳ ತಲುಪುವವರೆಗೂ ಅಂಗೈಯಲ್ಲಿ ಆತಂಕವಿದ್ದದ್ದೇ.



ಬೆಂಗಳೂರು ಬೆಳೆಯುತ್ತಿದೆ. ಜನಸಂಖ್ಯೆ ಹೆಚ್ಚುತ್ತಿದೆ. ವಾಹನಗಳ ಸಂಖ್ಯೆಯೂ ಅಂಕೆ ಇಲ್ಲದೇ ಹೆಚ್ಚುತ್ತಿವೆ. ಸುಮಾರು 60 ಲಕ್ಷ ಜನಸಂಖ್ಯೆಯ ಈ ಮಹಾನಗರದಲ್ಲಿ 21 ಲಕ್ಷ ವಾಹನಗಳಿವೆ! ಜನ ಹಾಗೂ ವಾಹನಗಳ ಅನುಪಾತ ಗಮನಿಸಿದರೆ ಇದು ಏಶಿಯಾದಲ್ಲೇ ಅಧಿಕ. ನಿತ್ಯವೂ ಹೊಸ ಹೊಸ ವಾಹನಗಳು ರಸ್ತೆಗೆ ಇಳಿಯುತ್ತಲೇ ಇವೆ. ಆದರೂ ಸಾರಿಗೆ ಸಮಸ್ಯೆ ಒಂದಡಿಯಲ್ಲ ಹತ್ತಡಿಗೆ ಹೆಚ್ಚಿದೆ. ಸಾಲಶೂಲ ಪಡೆದು 'ಲಗುಬಗೆಯ' ವಾಹನಗಳನ್ನು ಖರೀದಿಸಿ ಬೆನ್ನ ಮೇಲೆ ಹತ್ತಿ ಓಡುವವರು ಅದರ- ಆಕಾಂಕ್ಷಿಗಳ ಸಂಖ್ಯೆಗೆ ಮಿತಿಯೇನೂ ಇಲ್ಲ.

ದೂಷಣೆಯ ಸರಕು

ಸಾರಿಗೆಯ ಈ ಸಮಸ್ಯೆಯನ್ನು, ವಾಹನಗಳ ಒತ್ತಡವನ್ನು ಕಡಿಮೆ ಮಾಡಬೇಕು. ಟ್ರಾಫಿಕ್ ಜಾಮ್‌ಗಳನ್ನು ನಿವಾರಿಸಬೇಕು. ಅದಕ್ಕೆಂದೇ ಏಕಮುಖ ಸಂಚಾರ, ರಸ್ತೆ ಅಗಲೀಕರಣ, ಫ್ಲೈ ಓವರ್, ರಿಂಗ್‌ರೋಡ್ ನಿರ್ಮಾಣದ ಸಾವಿರಾರು ಕೋಟಿ ಯೋಜನೆಗಳು, ಅದರಲ್ಲಿ ಒಂದಷ್ಟು ಅಧಿಕಾರಸ್ಥರು ಜೇಬಿಗಿಳಿಸುವುದೂ ಇದೆ. ರಸ್ತೆಗಾಗಿ ಸಾವಿರಾರು ಕೋಟಿ ಸುರಿಯುವುದೇ ಎಂದು ಅನೇಕರು ಹುಬ್ಬೇರಿಸಿದ್ದೂ ಇದೆ.

ಇಷ್ಟೆಲ್ಲಾ ನಡುವೆಯೂ ಸಂಚಾರದ ಒತ್ತಡ ಕಡಿಮೆಯಾಗಿಲ್ಲ. ಸುಲಲಿತ ಸಂಚಾರಕ್ಕೆ ಸರ್ವಸನ್ನದ್ಧ ಪ್ರಯತ್ನ ಬೇಕಿದೆ, ಅದು ಹೆಚ್ಚಬೇಕಿದೆ.

ಆದ್ದರಿಂದ ಇಂತಹ ದಟ್ಟಣೆ ಕಡಿಮೆಗೊಳಿಸಿ ಸಾರಿಗೆ ಸರಾಗ ಮಾಡುವ ನಿಟ್ಟಿನಲ್ಲಿ ಕೇಳಿಬಂದದ್ದೇ ಮೆಟ್ರೋ ರೈಲು! ಮೆಟ್ರೋ ರೈಲು ಬೇಕೋ ಬೇಡವೋ ಎಂಬುದು ಇಂದಿನ ವಾದ- ವಾಗ್ವಾದದ ವಸ್ತು. ದೋಷ ಹುಡುಕುವ ದೂಷಣೆಯ ಸರಕು.

ಸಾರಿಗೆಯ ಸ್ಥಿತಿ-ಗತಿ ಮುಂದಾಗಬಹುದಾದ ಬೆಳವಣಿಗೆ ಗಳನ್ನು ಲೆಕ್ಕಿಸಿಯೇ 1983 ರಲ್ಲಿ ಮೆಟ್ರೋ ಯೋಜನೆಯೊಂದು ಹೊರಬಂತು. ಅಂದಿನ ಅಂದಾಜು ವೆಚ್ಚ 650 ಕೋಟಿ ರೂಪಾಯಿಗಳು. ಆದರೆ ಈಗಿನದು ಮೊದಲಹಂತವೇ 6,6000 ಕೋಟಿ. ವಿಳಂಬವಾದರೆ ಪ್ರತಿದಿನವೂ ಒಂದು ಕೋಟಿ ಇದಕ್ಕೆ ಸೇರ್ಪಡೆ. ಹಿಂದಿನ ಆ ಯೋಜನೆ ತ್ವರಿತವಾಗಿ ಜಾರಿಯಾಗಲಿಲ್ಲ. ಲಘು ರೈಲ್ವೆ ಸಾರಿಗೆ ವ್ಯವಸ್ಥೆ (ಮೊನೋ ರೈಲು) ಯ ಒಂದು ಯೋಜನೆ 1994 ರಲ್ಲಿದ್ದದ್ದು ಕೃಷ್ಣರ ಸರ್ಕಾರದಲ್ಲಿ 'ಮೆಟ್ರೋ' ರೈಲಿಗೆ ಪುನ: ಬದಲಾಯಿತು.

ಆಕ್ಷೇಪಗಳು ಸಮರ್ಥನೆಗಳು


ಈಗ ಕರ್ನಾಟಕ ಸರ್ಕಾರ ಈ ಸಾರಿಗೆ ಒತ್ತಡವನ್ನು ಕಡಿಮೆ ಮಾಡಲು ಹಾಗೂ ಕ್ಷಿಪ್ರವಾಗಿ ಸಾಗಲು ಮೆಟ್ರೋ ರೈಲು ಯೋಜನ

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಅನಿವಾರ್ಯ ಅಗತ್ಯವೆಂದು ಅದರ ನಿರ್ಮಾಣಕ್ಕೆ 2005 ರ ಮಾರ್ಚ್-24 ರಂದು ಆದೇಶ ಹೊರಡಿಸಿದೆ ನಿರ್ಮಾಣಕ್ಕೆ ಸಚಿವ ಸಂಪುಟ ನಿರ್ಧರಿಸಿದೆ. ಇದೇ ಜುಲೈನಲ್ಲಿ ಕೆಲಸ ಆರಂಭವಾಗಬೇಕು.

ಈ ಹಂತದಲ್ಲಿ ಮಾಜಿ ಪ್ರಧಾನಿಗಳೂ,



ಹಾಲಿ ಜೆಡಿ(ಎಸ್)ನ ರಾಷ್ಟ್ರಾಧ್ಯಕ್ಷರಾದ ಹೆಚ್.ಡಿ.ದೇವೇಗೌಡ ರವರು 'ಮೆಟ್ರೋ ರೈಲಿನ ಯೋಜನೆ ಜಾರಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅದು ದುಬಾರಿ, ಅಧಿಕ ವೆಚ್ಚವೂ, ಪ್ರಯಾಣಿಕರಿಗೆ ಹೊರೆ, ಸರ್ಕಾರಕ್ಕೆ ಹಾನಿ, ಮಹಾರಾಷ್ಟ್ರ, ದೆಹಲಿಯಲ್ಲಿ ವಿಫಲವಾಗಿದೆ. ಇಲ್ಯಾಕೆ? ಲಘು ಸಾರಿಗೆ ವ್ಯವಸ್ಥೆ, ಮೊನೋ ಸಾಕು ಎನ್ನುತ್ತಿದ್ದಾರೆ.

'ಎಲ್ಲವನ್ನೂ ತಿಳಿದು, ಸುರಿದು ನೋಡಲಾಗಿದೆ. ಯೋಜನೆಯನ್ನು ಕೈಬಿಡುವ ಅಥವಾ ಪುನರ್ ವಿಮರ್ಶಿಸುವ ಪ್ರಶ್ನೆ ಇಲ್ಲ. ಮೊನೋ ಏನಿದ್ದರೂ ಲಘು ಸಾರಿಗೆ. ಅದು ಇಂದಿನ ಒತ್ತಡಕ್ಕೆ ಸಾಕಾಗದು. ಏನಾದರೂ, ಸಲಹೆಗಳಿದ್ದರೆ ಸಣ್ಣ ಪುಟ್ಟ ಬದಲಾವಣೆ ಮಾಡಬಹುದು ಎನ್ನುತ್ತಾರೆ ಮೈತ್ರಿಕೂಟದ ಮುಖ್ಯಮಂತ್ರಿ ಧರಂಸಿಂಗ್‌ರವರು. ತಜ್ಞರ ಸಭೆ ಕರೆದು ಚರ್ಚಿಸಬೇಕೆಂದು ಆಮೂಲಕ ಪುನರ್ ವಿಮರ್ಶೆಗೆ ಹಚ್ಚಲು ಆಗ್ರಹಿಸಿದ್ದಾರೆ ಗೌಡರು.

ಅಭಿವೃದ್ಧಿ ಎಂಬುದು..........

ಈ ನಡುವೆ ಬೆಂಗಳೂರಿನ ಶಾಸಕರ ಸಭೆ ನಡೆದು (ಕಾಂಗ್ರೆಸ್) ಅಭಿವೃದ್ಧಿಗೆ ಗೌಡರು ಅಡ್ಡಗಾಲು ಹಾಕುತ್ತಿದ್ದಾರೆ ಎಂದು ದೂರಲಾಗಿದೆ. ಇದೀಗ ವಿಷಯ ರಾಜಕೀಯ ಸಮರವಾಗಿ ಪರಿವರ್ತಿತವಾಗುತ್ತಿದೆ.

ಅಧಿಕೃತ ಮೂಲಗಳಂತೆ ಈ ಯೋಜನೆಗೆ ಈಗ ಒಟ್ಟು 6207 ಕೋಟಿ ಅಗತ್ಯವಿದೆ. ಅದರಲ್ಲಿ 1200 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ, ರಾಜ್ಯಸರ್ಕಾರ 1800 ಕೋಟಿ ರೂಗಳನ್ನು ಉಳಿದದ್ದು ಜಪಾನ್ ಅಂತರ್ರಾಷ್ಟ್ರೀಯ ಸಹಕಾರ ಬ್ಯಾಂಕ್‌ನಿಂದ ಸಾಲ.

ಒಟ್ಟಾರೆ ಮೆಟ್ರೋರೈಲು ಸರ್ಕಾರಿ ಒಡೆತನದ ಸಾರ್ವಜನಿಕ ವಲಯದ ಉದ್ದಿಮೆಯಾಗಿರುತ್ತದೆ ಎಂಬುದು ಗಮನಾರ್ಹ ಅಂಶವಾಗಿದೆ. ಮೊನೋ ರೈಲ್ವೆ (ರಸ್ತೆ ಅಥವಾ ಭೂಮಿ ಮೇಲ್ಭಾಗದಲ್ಲಿ ಓಡುವುದು) ಮೆಟ್ ರೈಲ್ ಕಂಪನಿ' ಎಂಬ ಖಾಸಗಿ ಬಂಡವಾಳಗಾರರ ಒಡೆತನದಲ್ಲಿ ಓಡುತ್ತದೆ. ಸಾವಿರಾರಿ ಕೋಟಿ ರೂಪಾಯಿಗಳ ವಹಿವಾಟಿನ, ನಿತ್ಯವೂ ಹಣ ಬಾಚಿಕೊಳ್ಳುವ ವ್ಯವಹಾರವಾಗಿರುವ ಈ ಕ್ಷೇತ್ರವನ್ನು ಬಿಡಬಾರದು ಎಂಬುದು ಮೊನೋ ರೈಲ್ವೆ ಕಂಪನಿಗೆ ಇದೆ. ತನ್ನ ಯೋಜನೆ ಅಂಗೀಕಾರವಾಗುವಂತೆ ಹಲವು ಯತ್ನ ನಡೆಸಿರುವುದನ್ನು ಮಾಧ್ಯಮಗಳು ವರದಿ ಮಾಡಿವೆ. ಅದರ ಅಧ್ಯಕ್ಷರೇ ಬಹಿರಂಗವಾಗಿ ಸಮರ್ಥಿಸಿಕೊಂಡಿದ್ದಾರೆ. ಅಭಿವೃದ್ಧಿ ಯೋಜನೆ ಎಂದರೆ 'ಬೇಕಾದವರಿಗೆ' ಹಣದ ಕಮಿಷನ್ ಹಂಚಿಕೆಯೂ ಒಳಗೊಂಡಿರುತ್ತದೆ ಎಂಬುದು ಗುಟ್ಟಿನ ವಿಷಯವೇನಲ್ಲ. ಇದು ವ್ಯವಹಾರದ ಭಾಗ. ತಾವು ಸಮಾಜಸೇವೆ ಮಾಡುತ್ತಿಲ್ಲ ಎಂಬುದು ಮೊನೋ ಅಧ್ಯಕ್ಷರ ಅಂಬೋಣ.

ಮುಖ್ಯಪ್ರಶ್ನೆಯೆಂದರೆ ಹೆಚ್ಚುತ್ತಿರುವ ಸಾರಿಗೆ ಒತ್ತಡವನ್ನು ಕಡಿಮೆಗೊಳಿಸಲು - ಸುಗಮಗೊಳಿಸಲು ಕ್ಷಿಪ್ರವಾದ- ಸಾರಿಗೆ ವ್ಯವಸ್ಥೆ ಬೇಕೆ ಬೇಕು. ಇದಕ್ಕೆ ಮೆಟ್ರೋ ರೈಲ್ವೆಯೇ ಸೂಕ್ತ. ಈಗಾಗಲೇ ಎರಡು ಮಹಾನಗರಗಳಲ್ಲಿ (ಕಲ್ಕತ್ತಾ-ದೆಹಲಿ) ಮೆಟ್ರೋ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.


ಸಂಪುಟವೂ ಅಂಗೀಕರಿಸಿ ಯಾಗಿದೆ. ಆದ್ದರಿಂದ ಹೆಚ್ಚು ವಿಳಂಬಿಸದೆ 'ಮೆಟ್ರೋ ರೈಲು' ಯೋಜನೆಯ ಅನುಷ್ಠಾನದತ್ತ ಸರ್ಕಾರ ಕ್ರಮ ವಹಿಸಬೇಕು.

☆☆☆☆

ಉಪಚುನಾವಣಾ ಫಲಿತಾಂಶ : ಕೋಮುವಾದಿಗಳಿಗೆ ಕಾಲು ಮುರಿದ ಜನ

ಉಪಚುನಾವಣೆಗಳಲ್ಲಿ ಕೋಮುವಾದಿ ಬಿಜೆಪಿಯನ್ನು ಮೂರನೇ ಸ್ಥಾನಕ್ಕೆ ತಳ್ಳಿದ ಮತದಾರರ ತೀರ್ಪು ಸ್ವಾಗತಾರ್ಹ, ಹಾಗೆಯೇ ಈ ಫಲಿತಾಂಶ ರಾಜ್ಯದ ರಾಜಕಾರಣದಲ್ಲಿ ಹೊಸ ಶಕ್ತಿ ಸಂಯೋಜನೆಗೆ ಚಾಲನೆ ನೀಡುವುದೆ?

ಸಾರೇಕೊಪ್ಪ ಬಂಗಾರಪ್ಪನವರು ಇಡೀ ಪ್ರಪಂಚವನ್ನೇ ಗೆದ್ದಂತೆ ಆಡುತ್ತಿದ್ದಾರೆ. ಇಡೀ ಕ್ಯಾಬಿನೆಟ್ ಸಚಿವರು, ಕಾಂಗ್ರೆಸ್ ನಾಯಕರು ಶಿವಮೊಗ್ಗದಲ್ಲಿ ಠಿಕಾಣಿ ಹೂಡಿದರು. ಬಿಜೆಪಿ ಗಣನಾಯಕರು ಸೋಲಿಸಲು ಹೆಂಡ-ಹಣ ಹಂಚಿದರೂ ತನ್ನಂಥ ಏಕಾಂಗಿ ವೀರನನ್ನು ಸೋಲಿಸಲು ಆಗಲಿಲ್ಲ ಎಂದು ವ್ಯಾಖ್ಯಾನಿಸಿದ್ದಾರೆ. ಹಲವು ಬಾರಿ ಸೋತಿರುವ ಮತ್ತೆ ಗೆದ್ದಿರುವ ಈ ಮಾಜಿ ಸಮಾಜವಾದಿಯನ್ನು ಕೆಲವು ಪತ್ರಿಕೆಗಳು ಸೋಲಿಲ್ಲದ ಸರದಾರ ಎಂದು ಕರೆದಿರುವಲ್ಲಿ ಅವರದ್ದೇ ಆದ ಲಾಭ - ನಷ್ಟದ ಲೆಕ್ಕಾಚಾರಗಳಿವೆ. ಇವರ ಗೆಲುವು ರಾಜ್ಯದ ರಾಜಕಾರಣದಲ್ಲಿ ಮುಂದೆ ಹೊಸ ರಾಜಕೀಯಾಸಕ್ತಿಗಳಲ್ಲಿ ಹೊಸ ಸಂಯೋಜನೆಗಳಿಗೆ ಕಾರಣವಾಗುತ್ತದೆ ಎಂಬ ಭವಿಷ್ಯವಾಣಿಗಳಿಗೂ ಕೊರತೆಯಿಲ್ಲ. ಇವರ ಭವಿಷ್ಯ ಏನು ಎಂಬುವುದು ಕಾದು ನೋಡಬೇಕಷ್ಟೆ. ಅಂತು ಬಂಗಾರಪ್ಪನವರು ಸಮಾಜವಾದಿ ಪಕ್ಷವೆಂಬ ಹೊಸ ನೌಕೆಗೆ ಅಥವಾ ತಮಗೆ ಒಂದಿಷ್ಟು ನೆಲೆ ವಿಸ್ತರಿಸುವ ಅಧಿಕಾರ ಬಳಸಬಲ್ಲರು.



ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷ, ಚಾಮರಾಜಪೇಟೆ ವಿಧಾನಸಭಾ ಉಪಚುನಾವಣಾ ಫಲಿತಾಂಶಗಳಲ್ಲಿ ಜೆಡಿ(ಎಸ್) ಗೆದ್ದಿರುವುದು ಮಹತ್ವದ ವಿಷಯ. ಇಲ್ಲಿ ವ್ಯಕ್ತಿ ನಿಷ್ಠ ಅಂಶಗಳಿಗಿಂತ ವಸ್ತು ನಿಷ್ಠೆ ಅಂಶಗಳತ್ತ ಗಮನ ಹರಿಸುವುದು ಜನಾದೇಶವನ್ನು ಸರಿಯಾಗಿ ಗ್ರಹಿಸಲು ಅಗತ್ಯವಾಗಿದೆ.

ಹಿಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಬಿಜೆಪಿಯನ್ನು ಮತದಾರರು ಆಯ್ಕೆ ಮಾಡಿದ್ದರು. ಚಾಮರಾಜಪೇಟೆಯಲ್ಲಿ ಕಾಂಗ್ರೆಸ್ಸನ್ನು (ಎಸ್.ಎಂ.ಕೃಷ್ಣ) ಆರಿಸಿದ್ದರು. ಆದರೆ ಈ ಉಪಚುನಾವಣೆಯಲ್ಲಿ ಈ ಎರಡೂ ಪಕ್ಷಗಳನ್ನು ಮತದಾರರು ತಿರಸ್ಕರಿಸಿದ್ದಾರೆ. ಬಹುಮುಖ್ಯವಾದ ಬೆಳವಣಿಗೆ ಎಂದರೆ ಈ ಎರಡೂ ಕ್ಷೇತ್ರಗಳಲ್ಲಿ ಕೋಮುವಾದಿ ಬಿಜೆಪಿ ಮೂರನೆಯ ಸ್ಥಾನಕ್ಕೆ ತಳ್ಳಲ್ಪಟ್ಟಿರುವುದು. ಕರ್ನಾಟಕದಲ್ಲಿ 'ಅಧಿಕೃತ' ವಿರೋಧ ಪಕ್ಷವಾಗಿ 18 ಸಂಸದರನ್ನು ಹೊಂದಿ ಇನ್ನೇನು ರಾಜ್ಯದ ಆಡಳಿತ ಚುಕ್ಕಾಣಿ ನಮಗೇ ಎಂದು ಬೊಬ್ಬೆ ಹೊಡೆಯುತ್ತಿದ್ದ ಬಿಜೆಪಿಗೆ ಅದರ ಜನದ್ರೋಹಿ, ಕೋಮುವಾದಿ ಆಕ್ರಮಣಗಳಿಗೆ ಜನತೆ ಕೊಟ್ಟ ತಿರುಗೇಟು ಇದಾಗಿದೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎಯನ್ನು ತಿರಸ್ಕರಿಸಿದ ನಂತರ ಸತತವಾಗಿ ಬಿಜೆಪಿ ಹಿನ್ನೆಡೆ ಅನುಭವಿಸುತ್ತಿದೆ. ಕರ್ನಾಟದಲ್ಲಿ ಬೀದರ್ ಲೋಕಸಭೆ ನಂತರ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಬಿಜೆಪಿ ಕಂಡಿದ್ದ ಸತತ ಸೋಲನ್ನೇ.

ಈಗಿನ ಎರಡೂ ಕ್ಷೇತ್ರಗಳಲ್ಲಿಯೂ ಪ್ರಚಾರಕ್ಕೆ ಕರೆಸಿದ್ದ ಗುಜರಾತ್ ಹತ್ಯಾಕಾಂಡದ ನರೇಂದ್ರ ಮೋದಿಯನ್ನು ಇಷ್ಟೆಲ್ಲಾ ಕೋಮುದ್ವೇಷದ ಕಿಚ್ಚನ್ನು ಹಚ್ಚಲು ಈ ಪರಿವಾರ ಯತ್ನಿಸಿತು. ದೇಶದಲ್ಲಿ ಬಿಜೆಪಿ ಎಂದು ಜವಾಬ್ದಾರಿಯುತವಾಗಿ ವರ್ತಿಸುತ್ತಿಲ್ಲ.

ಮುಟ 10ಕ್ಕೆ

ವೃತ್ತಿ ಶಿಕ್ಷಣ ಬಿಕ್ಕಟ್ಟು : ರಾಜ್ಯಾದ್ಯಂತ ಎಸ್ಸೆಫ್ಐ ಪ್ರತಿಭಟನೆ

ಧನದಾಹಿ ಕಾಮೆಡ್.ಕೆ ಮತ್ತು ಬಡ ವಿದ್ಯಾರ್ಥಿ-ಪೋಷಕ ವಿರೋಧಿ ರಾಜ್ಯ ಸರ್ಕಾರಗಳು ಈ ವರ್ಷವೂ ವೃತ್ತಿ ಶಿಕ್ಷಣದ ಬಿಕ್ಕಟ್ಟನ್ನು ಬಗೆಹರಿಸಲಾಗದಂತಹ ಕಗ್ಗಂಟಾಗಿದೆ. ಹೊಸ ವೈದ್ಯಕೀಯ ಕಾಲೇಜುಗಳ ಆರಂಭದ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ರಾಜ್ಯ ಸರ್ಕಾರ ಕಾಮೆಡ್-ಕೆ ಜೊತೆ ಬಾರಿ ಮಾತುಕತೆ-ಕಸರತ್ತು ನಡೆಸುತ್ತಿದ್ದೇನೆಂದು ಜನತೆಗೆ ತೋರಿಸಿ ಖಾಸಗಿ ಶಿಕ್ಷಣ ಸಂಸ್ಥೆಗಳ ಒತ್ತಡಕ್ಕೆ ಮಣಿದು ಬಡ ವಿದ್ಯಾರ್ಥಿಗಳಿಗೆ ದೊಡ್ಡದ್ರೋಹ ಬಗೆದಿದೆ. ಸಮಾಜಿಕ ನ್ಯಾಯದ ಪರಿಕಲ್ಪನೆ ಬಗ್ಗೆ ಮಾತಾಡುತ್ತಿದ್ದ ಸರ್ಕಾರ ಈ ಬಾರಿ ಪರಿಶಿಷ್ಟ ಜಾತಿ-ಪಂಗಡದ ವಿದ್ಯಾರ್ಥಿಗಳಿಗೆ (ಬಿ.ವರ್ಗದಲ್ಲಿ ಆಯ್ಕೆಯಾಗುವ ವಿದ್ಯಾರ್ಥಿಗಳು 1.72 ಲಕ್ಷ ಶುಲ್ಕ ಭರಿಸಬೇಕಿದೆ. ಇದರಲ್ಲಿ ಶೇ.60ರಷ್ಟು ಮಾತ್ರ ಈ ವರ್ಗದ ವಿದ್ಯಾರ್ಥಿಗಳಿಗೆ ಸರ್ಕಾರ ಭರಿಸುವುದು). ಶೇ. 40 ಶುಲ್ಕ ಸಬ್ಸಿಡಿಯಲ್ಲಿ ಕಡಿತಗೊಳಿಸಿದೆ. ರಾಜ್ಯ ಸರ್ಕಾರ ಪ್ರಸಕ್ತ ವರ್ಷದಲ್ಲಿ ವೃತ್ತಿ ಶಿಕ್ಷಣದ ಪ್ರವೇಶ ನಿರೀಕ್ಷೆಯಲ್ಲಿನ ವಿದ್ಯಾರ್ಥಿ-ಪೋಷಕರನ್ನು ಆತಂಕದಲ್ಲಿಟ್ಟಿದೆ.

ಈ ಎಲ್ಲಾ ವೃತ್ತಿ ಶಿಕ್ಷಣದ ಬಿಕ್ಕಟ್ಟಿಗೆ ಕಳೆದ ಎನ್.ಡಿ.ಎ. ಸರ್ಕಾರ ಹಾಗೂ ಹೊಸ ಯು.ಪಿ.ಎ. ಸರ್ಕಾರಗಳು ನೇರ ಹೊಣೆಯಾಗಿವೆ. ಟಿ.ಎಂ.ಎ.ಪೈ. ತೀರ್ಪು(2002) ಬಂದಾಗ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವಂತಹ ಕೇಂದ್ರೀಯ ಶಾಸನ ಜಾರಿಗೆ ತರುವ ಬದಲು ಸುಪ್ರಿಂ ಕೋರ್ಟ್ ತೀರ್ಪಿನ ಪರವಾಗಿ ಏಕ ರೂಪ ಶುಲ್ಕ ನಿಗದಿ ಜಾರಿಗೆ ದೇಶಾದ್ಯಂತ ಆದೇಶ ಹೊರಡಿಸಿತ್ತು. ಇದರಿಂದ ಬಡತನ ಪ್ರತಿಭೆ-ಸಾಮಾಜಿಕ ನ್ಯಾಯಕ್ಕೆ ದೊಡ್ಡ ಪೆಟ್ಟು ಬಿದ್ದಿತ್ತು. ಈಗಿನ ಯುಪಿಎ ಸರ್ಕಾರ ಇದೇ ಹಾದಿಯನ್ನು ಹಿಡಿದು ಪ್ರವೇಶ ಪಡೆಯಲು ಇರುವ ಸಿಇಟಿ ಮಾದರಿ ವಿಧಾನವನ್ನೇ ಬುಡಮೇಲು ಮಾಡಲು ಹೊರಟಿದೆ. ಕೇಂದ್ರೀಯ ಶಾಸನ ರಚಿಸುವ ಯಾವ ಇಚ್ಛಾಸಕ್ತಿಯನ್ನು ಪ್ರದರ್ಶಿಸುತ್ತಿಲ್ಲ. ಸುಪ್ರೀಂ ಕೋರ್ಟು ಸಂವಿಧಾನ ಕಾಯ್ದೆಗಳನ್ನು ಆಧಾರವಾಗಿಟ್ಟುಕೊಂಡು ಖಾಸಗಿ ಶಿಕ್ಷಣ ಸಂಸ್ಥೆಗಳ ಪರವಾದ (ಶಿಕ್ಷಣ ವ್ಯಾಪಾರೀಕರಣ) ನೀತಿಗಳನ್ನೇ ಅನುಸರಿಸುತ್ತಿದೆ. ಇಂಥ ಸಂದರ್ಭದಲ್ಲಿ ವಿದ್ಯಾರ್ಥಿ-ಪೋಷಕರ-ಜನರ ಚಳುವಳಿಯಿಂದ ಮಾತ್ರ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವೆಂದು ಎಸ್ಎಫ್ಐ ದಿಟ್ಟವಾಗಿ ನಂಬಿದೆ.



ಬೆಂಗಳೂರಿನ ಕೌನ್ಸಿಲಿಂಗ್ ಎದುರು ಪ್ರತಿಭಟನೆ

ಹೀಗಾಗಿ ಇದೇ ಜೂನ್ 14 ರಂದು ರಾಜ್ಯ ಸರ್ಕಾರ ಹಾಗೂ ಧನದಾಹಿ ಕಾಮೆಡ್-ಕೆ ವಿರುದ್ಧ ರಾಜ್ಯಾದ್ಯಂತ ಎಸ್ಎಫ್ಐ ತೀವ್ರತರ ಪ್ರತಿಭಟನೆ ಹಮ್ಮಿಕೊಂಡಿತ್ತು. ಬೆಂಗಳೂರು ನಗರದಲ್ಲಿ (ವಿಶೇಷ ಕೂಟದಲ್ಲಿ ಸೀಪಡೆಗೆ ಪ್ರವೇಶ ಪಡೆಯಲು ಕೌನ್ಸಿಲಿಂಗ್ ನಡೆಯುತ್ತಿದ್ದ ಸಂದರ್ಭದಲ್ಲಿ) ಸಿಇಟಿ ಕಛೇರಿ ಮುಂದೆ ಬಲಿಷ್ಠ ಹೋರಾಟ ರೂಪಿಸಿತ್ತು. ತನ್ನ ಸ್ಪಷ್ಟ ನಿಲುವನ್ನು ಮಾಧ್ಯಮಗಳಿಗೆ ಜನತೆ ಸಂಘಟನೆ ತಿಳಿಸಿತ್ತು. ಖಾಸಗಿ ಶಿಕ್ಷಣ ಸಂಸ್ಥೆಗಳ ಪರ ನಿಲ್ಲುವ ಎಬಿವಿಪಿ ರಾಜಕೀಯ ಲಾಭಕ್ಕಾಗಿ ಕೌನ್ಸಿಲಿಂಗ್ ನಡೆಯುವುದನ್ನು ತಡೆಯಲು ಕೋರ್ಟಿಗೆ ಹೋಗುತ್ತೇವೆಂದು ಅಬ್ಬರಿಸಿತ್ತು. ಎಸ್ಸೆಫ್ಐ ಸಂಘಟನೆ ಸೀಟು ಹಂಚಿಕೆ 50-50 ವಿರೋಧಿಸುವುದರ ಜೊತೆಗೆ ಈ ವರ್ಷವೇ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಬೇಕು. ಹಾಲಿ ಇರುವ ಕಾಲೇಜುಗಳಿಗೆ ಪ್ರವೇಶ (ಇನ್‌ಟೇಕ್) ಹೆಚ್ಚಿಸಬೇಕು. ಸಮಸ್ಯೆ ಶಾಶ್ವತ ಪರಿಹಾರಕ್ಕಾಗಿ ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವ ಕೇಂದ್ರೀಯ ಶಾಸನ ರಚನೆಯಾಗಬೇಕೆಂಬ ಬೇಡಿಕೆಯುಗಳು ಪ್ರತಿಭಟನೆಯಲ್ಲಿ ಜನರ ಆಕರ್ಷಣೆಯಾದವು.

ರಾಜ್ಯ ಸರ್ಕಾರ ಶಿಕ್ಷಣದ ವ್ಯಾಪಾರೀಕರಣ ವಿರುದ್ಧ ಹಾಗೂ ಲೂಟಿಕೋರ ಕಾಮೆಡ್-ಕೆ ವಿರುದ್ಧ ಮುಗಿಲು ಮುಟ್ಟುವಂತೆ ಘೋಷಣೆ ಕೂಗುತ್ತ ನಡುರಸ್ತೆಯೂ ರಸ್ತೆ ತಡೆ ನಡೆಸುವ ಮುಖಾಂತರ ಕಾಮೆಡ್-ಕೆ ಮತ್ತು ರಾಜ್ಯ ಸರ್ಕಾರದ ಜಂಟಿ ಭೂತದಹನ ನಡೆಸಲಾಯಿತು. ಇದೇ ರೀತಿಯಲ್ಲಿ ಮಂಡ್ಯ, ಹಾಸನ, ಬಳ್ಳಾರಿ, ಕೋಲಾರ, ದಾವಣಗೆರೆ, ಕೊಪ್ಪಳ, ಹಾಗೂ ಇನ್ನಿತರ ಜಿಲ್ಲೆಗಳು ಸೇರಿದಂತೆ ವಿವಿಧ ತಾಲ್ಲೂಕುಗಳಲ್ಲೂ ಸಾವಿರಾರು ವಿದ್ಯಾರ್ಥಿಗಳು ಎಸ್ಸೆಫ್ಐನ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನೆಯಲ್ಲಿ ಸೀಟು ಹಂಚಿಕೆ 75:25 ಇರಬೇಕು. ಪ್ರತಿಭಾವಂತ ಬಡ ಹಿಂದುಳಿದ ವಿದ್ಯಾರ್ಥಿಗಳು ಶುಲ್ಕ ಭರಿಸುವಂತಿರಬೇಕು. ಈ ವರ್ಷವೇ ವೈದ್ಯಕೀಯ ಕಾಲೇಜುಗಳು ಆರಂಭವಾಗಬೇಕು. ವೃತ್ತಿ ಶಿಕ್ಷಣ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ಕಾಣಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವಂತಹ ಕೇಂದ್ರೀಯ ಶಾಸನ ಜಾರಿಗೆ ತರಬೇಕೆಂದು ಒತ್ತಾಯಿಸಲಾಯಿತು. ಈಗ ಉದ್ಭವಿಸಿರುವ ಸಮಸ್ಯೆಗಳನ್ನು ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಕೇಂದ್ರ ಸರ್ಕಾರ - ರಾಜ್ಯ ಸರ್ಕಾರ- ಕೋರ್ಟುಗಳು ಗಮನ ಹರಿಸಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಕೌನ್ಸಲಿಂಗ್ ನಡೆಸಿ ಪ್ರವೇಶಕ್ಕೆ ಅವಕಾಶ ನೀಡಬೇಕೆಂದು ಎಸ್ಸೆಫ್ಐ ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿದೆ.

ಬಿ.ರಾಜಶೇಖರಮೂರ್ತಿ

ತುಮಕೂರು ಎಪಿಎಂಸಿ ಬಂದ್

ಕರ್ನಾಟಕ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತರುವುದರ ಮೂಲಕ ಕೃಷಿ ಉತ್ಪನ್ನ ಮಾರುಕಟ್ಟೆಗೆ ವಿದೇಶೀ ನೇರ ಬಂಡವಾಳ ಹೂಡಿಕೆಗೆ ಅನುವು ಮಾಡಿಕೊಡಲು ಹೊರಟಿರುವ ಕರ್ನಾಟಕ ಸರ್ಕಾರದ ಕ್ರಮದ ವಿರುದ್ಧ ಜೂನ್ 6ರಂದು ತುಮಕೂರು ಎಪಿಎಂಸಿ ವ್ಯವಹಾರ ಸ್ಥಗಿತಗೊಳಿಸಿ ವರ್ತಕರು, ಹಮಾಲರು, ರೈತರು ಪ್ರತಿಭಟಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಎಪಿಎಂಸಿಗಳ ವರ್ತಕರ ಸಂಘಗಳು, ಯಾರ್ಡ್‌ಗಳ ಗುಮಾಸ್ತರ ಸಂಘಗಳು, ಹಮಾಲರ ಸಂಘಗಳು ಕೂಡಿ ರಚನೆಗೊಂಡಿರುವ ಎಪಿಎಂಸಿ ಮಾದರಿ ಕಾನೂನು-2003 'ವಿರೋಧಿ ಹೋರಾಟ ಸಮಿತಿ'ಯ ಆಶ್ರಯದಲ್ಲಿ ಈ ಪ್ರತಿಭಟನೆ ನಡೆಯಿತು.

ತುಮಕೂರು ಎಪಿಎಂಸಿ ಬಂದ್ ನಂತರ ಬೆಳಗ್ಗೆ 10.30ಕ್ಕೆ ಎಪಿಎಂಸಿ ಯಾರ್ಡ್‌ನಿಂದ ಹೊರಟು ಟೌನ್ ಹಾಲ್ ವೃತ್ತದ ಮೂಲಕ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿ ನಂತರ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯ ರೈತ ಸಂಘ ಜಿಲ್ಲಾ ಅಧ್ಯಕ್ಷ ಎ.ಗೋವಿಂದರಾಜು, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಬಿ.ಉಮೇಶ್, ಆಲ್ ಟ್ರೇಡ್ ಯೂನಿಯನ್‌ನ ಎನ್.ಶಿವಣ್ಣ, ಎಪಿಎಂಸಿ ಹಮಾಲರ ಸಂಘದ ಗೋವಿಂದಯ್ಯ, ಅಖಿಲ ಭಾರತ ಕಿಸಾನ್ ಸಭಾದ ಕೆ.ಎಸ್.ವಾಸುದೇವ ಕುಮಾರ್, ಧಾನ್ಯ ವ್ಯಾಪಾರಿಗಳ ಸಂಘದ ಅಧ್ಯಕ್ಷ ಜಿ.ಹೆಚ್. ಪರಮಶಿವಯ್ಯ ಮತ್ತಿತರರ ಸಂಘಟನೆಗಳವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಧಾನ್ಯ ವ್ಯಾಪಾರಿಗಳ ಸಂಘ ಪ್ರತಿಭಟನಾ ಪತ್ರವನ್ನು ತುಮಕೂರು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಯಿತು.

ಮೂಲಭೂತ ಸೌಕರ್ಯಗಳಿಗಾಗಿ ಡಿ.ವೈಎಫ್ಐ ಧರಣಿ

ಹೊಸಪೇಟೆ ತಾಲೂಕಿನ ಅನಂತಶಯನಗುಡಿ ಹಿಂದೆ ಚಿಕ್ಕಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿತ್ತು. ಪ್ರಸ್ತುತ ನಗರಸಭೆಯ ವ್ಯಾಪ್ತಿಯಲ್ಲಿದೆ. ಹಿಂದೆ ಈ ಪ್ರದೇಶದ ಶಾಸಕರಾಗಿದ್ದ ಎಂ.ವೈ.ಘೋರ್ಪಡೆಯವರು 5 ವರ್ಷಕ್ಕೊಂದು ಬಾರಿ ಮತ ಪಡೆದು ಹೋದ ಮೇಲೆ ಮರೆತುಬಿಡುತ್ತಿದ್ದರು. ಈ ರೀತಿಯಾಗಿ ಸರಿಸುಮಾರು 50 ವರ್ಷಗಳ ಕಾಲ ಚಕ್ರ ಉರುಳಿತು. ಇವರ ದಿವ್ಯನಿರ್ಲಕ್ಷತನದಿಂದ ಜನ ಬೇಸತ್ತು ಹೊಸದೊಂದು ಪರ್ಯಾಯ ಹುಡುಕಲು ಯೋಚಿಸಿದರು. ಇದು ಕೇವಲ ಅನಂತಶಯನ ಗುಡಿಯ ಕಥೆಯಲ್ಲ. ಸಂಡೂರು ವಿಧಾನ ಸಭಾ ಕ್ಷೇತ್ರದ ನೂರಾರು ಹಳ್ಳಿಗಳ ಗೋಳಾಟದ ಕಥೆ. ಹೊಸ ಪರ್ಯಾಯವನ್ನು ಯೋಚಿಸಿ ಯುವ ತರುಣ ಜಾತ್ಯಾತೀತ ಜನತಾದಳದ ಅಭ್ಯರ್ಥಿಯಾದ ಸಂತೋಷ್ ಲಾಡ್‌ನನ್ನು ಜನ ಆರಿಸಿ ತರುವ ಮೂಲಕ ದುರಹಂಕಾರಿ ಕಾಂಗ್ರೆಸ್ ಪಕ್ಷಕ್ಕೆ ಪಾಠ ಕಲಿಸಿದರು. ಆದರೆ ಜನಪರ ಕೆಲಸ ಮಾಡುತ್ತೇನೆಂದು ಬೊಬ್ಬೆಹೊಡೆದ ಸಂತೋಷ್ ಲಾಡ್ ದುಃಖದುಮ್ಮಾನಗಳಲ್ಲಿ ಮುಳುಗಿರುವ ಹಳ್ಳಿಯ ಜನರನ್ನು ಇಷ್ಟು ದಿನಗಳಾದರೂ ಏನೆಂದು ಮಾತನಾಡಿಸಿಲ್ಲ. ಆದರೆ ಅನಂತಶಯನ ಗುಡಿಯ ಗ್ರಾಮದ ಜನತೆಯು ಸುಮ್ಮನೆ ಇರಲಿಲ್ಲ. ಪ್ರಗತಿಪರ ಯುವಜನ ಸಂಘಟನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಡಿವೈಎಫ್ಐ ನೇತೃತ್ವದಲ್ಲಿ ಹಲವು ಸಮಸ್ಯೆಗಳ ಈಡೇರಿಕೆಗಾಗಿ ಅನಿರ್ದಿಷ್ಟ ಧರಣಿ ಮಾಡುವ ಪಣತೊಟ್ಟರು.

ಹೋರಾಟದ ಅಗತ್ಯವನ್ನು ಅರ್ಥೈಸಿಕೊಂಡು ಊರಿನ ನಟ್ಟನಡುವೆ ಜನನಿಬಿಡ ಪ್ರದೇಶವಾದ ಸೊಸೈಟಿ ಬೈಲಿನಲ್ಲಿ ಮುಖ್ಯರಸ್ತೆಯ ಪಕ್ಕದಲ್ಲಿ ಡಿವೈಎಫ್ಐನ ಶ್ವೇತಪತಾಕೆ ಹಾರಿಸಿದರು. ಟೆಂಟ್ ಹಾಕಿ ಧರಣಿ ಹೂಡಿದರು. "ಇದೀಗ ಮಾಡುವೆವು ಆರಂಭ ಮುಂದೆ ಹೂಡುವೆವು ರಣಗಂಭ" ಎಂದು ಕೂಗಿ ಹೇಳುವ ಮೂಲಕ ಸಾಮೂಹಿಕವಾಗಿ ಧರಣಿ ಉದ್ಘಾಟಿಸಿದರು. ಸಮಸ್ಯೆಗಳಾದ "ಹೆಣ್ಣುಮಕ್ಕಳ ಶೌಚಾಲಯ, ಬಸ್ ನಿಲ್ದಾಣ, ಉಚಿತ ವಿದ್ಯುತ್, ಪಡಿತರ ವ್ಯವಸ್ಥೆ, ಕಾಲುವೆಗೆ ಸೇತುವೆ ಬಡವರಿಗೆ ಆಶ್ರಯ ಮನೆಗಳು, ಸುಸಜ್ಜಿತವಾದ ರಸ್ತೆ, ಶಾಲೆಗೆ ಆಟದ ಮೈದಾನ, ವಿದ್ಯುತ್ ವ್ಯವಸ್ಥೆ" ಇನ್ನು ಮುಂತಾದ ಹತ್ತು ಹಲವು ಸಮಸ್ಯೆಗಳು ಬಗೆಹರಿಯುವವರೆಗೆ ನಾವು ನಮ್ಮ ಧರಣಿಯನ್ನು ನಿಲ್ಲಿಸುವುದಿಲ್ಲ ಯಾವ ಬೇಡಿಕೆಗಳು ಯಾವ ಅಧಿಕಾರಿಗಳಿಗೆ ಸಂಬಂಧಪಡುತ್ತಿವೆಯೋ ಅಂತಹ ಅಧಿಕಾರಿಗಳು ಧರಣಿನಿರತ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಧರಣಿ ನಡೆಸತೊಡಗಿದರು. ಧರಣಿಯ 4ನೇ ದಿನ ತಹಶಿಲ್ದಾರರು ಸ್ಥಳಕ್ಕೆ ಭೇಟಿ ನೀಡಿ ತಮ್ಮ ವ್ಯಾಪ್ತಿಯಲ್ಲಿ ಬರುವ ಸಮಸ್ಯೆಗಳನ್ನು ಬಗೆಹರಿಸಲು ಪಡಿತರ ವ್ಯವಸ್ಥೆಯ ಅಧಿಕಾರಿಗಳು ನ್ಯಾಯಬೆಲೆ ಅಂಗಡಿ ಮತ್ತು ಸೀಮೆಎಣ್ಣೆ ವಿತರಕರು ಹಾಗೂ ಡಿವೈಎಫ್ಐ ಸಂಘಟನೆಯ ಮುಖಂಡರನ್ನೊಳಗೊಂಡು ತಮ್ಮ ಕಛೇರಿಯಲ್ಲಿ ಸಭೆ ನಡೆಸಿ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ಇದು ಹೋರಾಟಕ್ಕೆ ಸಂದ ಜಯವಾಗಿದೆ. ಇನ್ನು ಅನೇಕ ಸಮಸ್ಯೆಗಳಿವೆ. ನಗರಸಭೆ ಅಧಿಕಾರಿಗಳು ಆಯುಕ್ತರ ಪರವಾಗಿ ಧರಣಿ ನಡೆಯುವ ಸ್ಥಳಕ್ಕೆ ಆಗಮಿಸಿ ಮಹಿಳೆಯರ ಶೌಚಾಲಯ ಹಾಗೂ ಬಸ್ ನಿಲ್ದಾಣದ ಸಮಸ್ಯೆ ಮತ್ತು ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಕೆಲ ಸಮಸ್ಯೆಗಳು ಜಿಲ್ಲಾ ಅಧಿಕಾರಿಗಳ ಗಮನಕ್ಕೆ ತಂದು ಆದಷ್ಟು ಬೇಗ ಬಗೆಹರಿಸುತ್ತೇವೆಂದು ಭರವಸೆ ನೀಡಿದರು. ಧರಣಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ದಿನದಿಂದ ದಿನಕ್ಕೆ ಧರಣಿಯಲ್ಲಿ ಕೂಡುವ ಜನರ ಸಂಖ್ಯೆ ವಿಪರೀತವಾಗಿ ಬರುತ್ತಿದ್ದು ಇನ್ನು ಮುಂದೆ ಧರಣಿ ಮಾತ್ರವಲ್ಲ ಜೊತೆಗೆ ರಸ್ತೆ ತಡೆ. ಪ್ರತಿಕೃತಿ ದಹನ, ಮುತ್ತಿಗೆ, ಈ ರೀತಿಯ ಉಗ್ರ ಸ್ವರೂಪದ ಹೋರಾಟಗಳು ನಡೆಯುವ ಸಾಧ್ಯತೆ ಹೆಚ್ಚಿದೆ. ಡಿವೈಎಫ್ಐ ನಡೆಸುವ ಈ ಧರಣಿಗೆ ಸಂಪೂರ್ಣ ಬೆಂಬಲ ಎನ್ನುತ್ತಾರೆ. ವಿದ್ಯಾರ್ಥಿ ಚಳುವಳಿ ಎಸ್.ಎಫ್.ಐನ ನಾಯಕರು, ಸಿಐಟಿಯು ಹಾಗೂ ಅಂಗನವಾಡಿ ಸಂಘಟನೆಗಳು ಘಟಕದ ಮುಖಂಡರಾದ ಎಂ.ಹುಸೇನ್, ಶೆಕ್‌ಸಾಬ್, ಹುಸೇನಿ, ನಾಗರಾಜ್ ವಹಿಸಿದ್ದರು. ಧರಣಿಗೆ ಬೆಂಬಲಿಸಿ ಅಂಗನವಾಡಿಯ ನಾಗರತ್ನ, ಎಸ್.ಎಫ್.ಐನ ಸುರೇಶ್ ಚಾವ್ಹಾಣ್, ಸಿಪಿಐ(ಎಂ) ಭರಮಪ್ಪ, ಹಮಾಲರ ಸಂಘದ ಭಾಸ್ಕರರೆಡ್ಡಿ, ಸಿಐಟಿಯುನ ಎಂ.ಗೋಪಾಲ್ ಬೆಂಬಲ ಘೋಷಿಸಿ ಮಾತನಾಡಿದ್ದರು. ಎಸ್ಎಫ್ಐನ ಅಖಿಲ ಭಾರತ ಸದಸ್ಯರು ಹಾಗೂ ಡಿವೈಎಫ್ಐನ ತಾಲೂಕು ಮುಖಂಡರು ಆದ ಕೆ.ರಮೇಶ್ ಹಾಗೂ ಡಿವೈಎಫ್ಐನ ಕರುಣಾನಿಧಿ ಉಪಸ್ಥಿತರಿದ್ದರು.

ವರದಿ: ಕೆ.ಸುರೇಶ್ ಚವ್ಹಾಣ

ಗೋದ್ರಾ ಘಟನೆ ಮತ್ತು ನಂತರದ ಹತ್ಯಾಕಾಂಡದ ಕುರಿತ ತನಿಖೆಯನ್ನು ಬೇಕೆಂದೇ ಮೋದಿಸರ್ಕಾರ ವಿಳಂಬಿಸುತ್ತಿದೆ. ಹಾದಿ ತಪ್ಪಿಸಲು ಬಯಸುತ್ತಿದೆ. ಯುಪಿಎ ಸರ್ಕಾರ ಕೈಗೊಳ್ಳಬೇಕಾದ ತುರ್ತು ಕ್ರಮಗಳೇನು?

ಗೋಧ್ರಾ: ಇನ್ನೂ ನ್ಯಾಯದ ಸುಳಿವೇ ಇಲ್ಲ

ಗುಜರಾತ್ ಸರಕಾರ ತನ್ನ ವಕೀಲರ ಮೂಲಕ ಪೋಟಾ ನ್ಯಾಯಾಲಯದ ಕಲಾಪಗಳನ್ನು ಜೂನ್ 10ರವರೆಗೆ ಮುಂದೂಡುವುದರಲ್ಲಿ ಯಶಸ್ವಿಯಾಗಿದೆ. ಕೇಂದ್ರೀಯ ಪೋಟಾ ಪರಾಮರ್ಶೆ ಸಮಿತಿ (ಸಿಪಿಆರ್‌ಸಿ)ಯ ವರದಿಯನ್ನು ಅಧ್ಯಯನ ಮಾಡಲು ತನಗೆ ಇನ್ನಷ್ಟು ಸಮಯ ಬೇಕು ಎಂಬುದು ಅವರ ಸಬೂಬು. ಈ ವರದಿ ಗೋಧ್ರಾ ರೈಲು ಹತ್ಯಾಕಾಂಡದ ಅಪಾದಿತರಲ್ಲಿ ಹೆಚ್ಚಿನವರ ವಿರುದ್ಧ ಹಾಕಿದ್ದ ಪೋಟಾ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಿತ್ತು.

ಗುಜರಾತಿನ ನರೇಂದ್ರ ಮೋದಿ ಸರ್ಕಾರದ ವಿಳಂಬ ತಂತ್ರ ಅರ್ಥವಾಗುವಂತದ್ದು. ಸಾಬರಮತಿ ಎಕ್ಸ್‌ಪ್ರೆಸ್‌ನ ಎಸ್-6 ಕೋಚ್‌ನಲ್ಲಿದ್ದ ಅಯೋಧ್ಯೆಯಿಂದ ಹಿಂದಿರುಗುತ್ತಿದ್ದ ಕರಸೇವಕರನ್ನು ಬೆಂಕಿಯಿಟ್ಟು ಸುಟ್ಟ ಭಯೋತ್ಪಾದಕ ಘಟನೆಗೆ ಪ್ರತಿಕ್ರಿಯೆಯಾಗಿ ಗುಜರಾತಿನ ಹತ್ಯಾಕಾಂಡಗಳು ನಡೆದವು ಎಂದು ರಾಜ್ಯ ಸರಕಾರ ಮತ್ತು ಬಿಜೆಪಿ ಸಮರ್ಥಿಸಿಕೊಳ್ಳುತ್ತಾ ಬಂದಿದೆ ತಾನೇ!

ಈ ಮೊದಲು ರೈಲ್ವೆ ಇಲಾಖೆ ನೇಮಿಸಿದ ಯುಪಿ


ಬದುಕು ಕಳೆದುಕೊಂಡು ಬದುಕುಳಿದವರು

ಬ್ಯಾನರ್ಜಿ ಸಮಿತಿ ಗೋದ್ರಾ ಘಟನೆ ಪೂರ್ವಯೋಜಿತ ಸಂಚು ಆಗಿರಲಿಕ್ಕೆ ಸಾಧ್ಯವಿಲ್ಲ ಎಂದಿತ್ತು. ಈಗ ಈ ವರದಿ ಪರಿಚ್ಛೇದ 40ರಲ್ಲಿ ಈ ಘಟನೆ ನಡೆದಿರುವುದು ನಿಜವಾದರೂ ಪೋಟಾದ ಅಡಿಯಲ್ಲಿ ಬರುವ ಒಂದು ಪಿತೂರಿಯ ಭಾಗವಾಗಿಯಂತೂ ಖಂಡಿತಾ ನಡೆದಿರಲಿಲ್ಲ ಎಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ ಆಪಾದಿತರನ್ನು ಐಪಿಸಿ, ಭಾರತೀಯ ರೈಲ್ವೆ ಶಾಸನ, ಸಾರ್ವಜನಿಕ ಆಸ್ತಿಗೆ ನಷ್ಟ ತಡೆ ಕಾನೂನು, ಮುಂಬೈ ಪೊಲೀಸ್ ಕಾನೂನಿನಡಿ ಮತ್ತು ಗೋಧ್ರಾದ ಆಡಿಶನಲ್ ಜಿಲ್ಲಾ ಮ್ಯಾಜಿಸ್ಟ್ರೇಟರ್ ಅಧಿಸೂಚನೆಯ ಉಲ್ಲಂಘನೆಗಾಗಿ ವಿಚಾರಣೆಗೊಳಪಡಿಸಬಹುದೇ ಹೊರತು ಪೋಟಾದ ಅಡಿಯಲ್ಲಿ ಅಲ್ಲ ಎಂದು ಅದು ಹೇಳಿದೆ.

ಈ ಸಾಕ್ಷಿಯಿಂದಾಗಿ, ಗೋಧ್ರಾ ಹತ್ಯಾಕಾಂಡದ ನಂತರ ಗುಜರಾತಿನಲ್ಲಿ ನಡೆದ ಕೋಮು ಹತ್ಯಾಕಾಂಡದ ಪ್ರಮುಖ ಘಟನೆಗಳ ಸಿಬಿಐ ತನಿಖೆಯನ್ನು ನಡೆಸಬೇಕು ಎಂದು ಸಿಪಿಐ(ಎಂ) ಯುಪಿಎ ಸರಕಾರವನ್ನು ಆಗ್ರಹಿಸುತ್ತಲೇ ಬಂದಿದೆ. ಸಿಪಿಆರ್‌ಸಿ ವರದಿಯನ್ನು ಬಹಿರಂಗಪಡಿಸುವ ಮೂಲಕ ಸತ್ಯ ಎಲ್ಲರಿಗೂ ತಿಳಿಯುವಂತೆ ಮಾಡಬೇಕು ಎಂದೂ ಸಿಪಿಐ(ಎಂ) ಆಗ್ರಹಿಸಿದೆ. ಈ ವರದಿಯಲ್ಲಿನ ಅಂಶಗಳು ನರೇಂದ್ರ ಮೋದಿಯ ನೇತೃತ್ವದ ಗುಜರಾತ್ ಸರ್ಕಾರ ಗೋಧ್ರಾ ಹತ್ಯಾಕಾಂಡವನ್ನು ಗುಜರಾತಿನಲ್ಲಿ ಒಂದು ಭೀಕರ ಹತ್ಯಾಕಾಂಡವನ್ನು ಹರಿಯಬಿಡಲು ನೇರವಾಗಿ ಬಳಸಿಕೊಳ್ಳಲಾಯಿತು ಎಂಬುದನ್ನು ದೃಢಪಡಿಸುತ್ತವೆ. ಅಂತಹ ಕೆಲವು ಅಂಶಗಳನ್ನು ಈ ಮುಂದೆ ಕೊಡುತ್ತಿದ್ದೇವೆ.

ವರದಿಯ ಪರಿಚ್ಛೇದ 34ರಲ್ಲಿ ಪರಾಮರ್ಶೆ ಸಮಿತಿ ಆಪಾದಿತರ ಪರವಾಗಿ ಹಾಗೂ ಗುಜರಾತ್ ಸರಕಾರದ ಪರವಾಗಿ ಮಂಡಿಸಿದ ವಾದಗಳನ್ನು ಜಾಗರೂಕತೆಯಿಂದ ಪರಿಶೀಲಿಸಿ ಜನಜಂಗುಳಿ ಮೊದಲು ಪಾರ್ಸೆಲ್ ಆಫೀಸಿನ ಹತ್ತಿರ, ನಂತರ 'ಎ' ಕ್ಯಾಂಟೀನ್ ಬಳಿ ಜಮಾಯಿಸಿದ್ದು ಭಯಭೀತ ಕೂಗಿಗೆ ಸ್ಪಂದಿಸಿಯೇ ಹೊರತು ಒಂದು ಪಿತೂರಿಯ ಭಾಗವಾಗಿ ಅಲ್ಲ ಎಂಬ ತೀರ್ಮಾನಕ್ಕೆ ಬಂದಿದೆ. ಕರಸೇವಕರು ಮತ್ತು ಮುಸ್ಲಿಂ ಚಹಾ ಮಾರುವವರ ನಡುವೆ ತಿಕ್ಕಾಟ ನಡೆಯಿತು ಹಾಗೂ ಪ್ಲಾಟ್‌ಫಾರಂನಿಂದ ಒಬ್ಬ ಮುಸ್ಲಿಂ ಹುಡುಗಿಯನ್ನು ಅಪಹರಿಸುವ ಒಂದು ಪ್ರಯತ್ನ ನಡೆಯಿತು ಎಂಬುದನ್ನು ಒಪ್ಪಿಕೊಂಡಿರುವ ಸಂಗತಿ ಎಂಬುದನ್ನು ಈ ಪರಿಚ್ಛೇದ ಗುರುತಿಸುತ್ತದೆ.

ಘಟನಾ ಸ್ಥಳದಲ್ಲಿ ಜನಜಂಗುಳಿಯಿಂದ ವಶಪಡಿಸಿಕೊಂಡ ಕಬ್ಬಿಣದ ಸಲಾಕೆಗಳು ಇತ್ಯಾದಿ ಸಾಮಾನ್ಯ ಅಸ್ತ್ರಗಳು ಕೂಡಾ ಅದು ಎಸ್-6 ಕ್ಕೆ ಬೆಂಕಿ ಹಚ್ಚಿ ಅದರಲ್ಲಿದ್ದ ಪ್ರಯಾಣಿಕರನ್ನು ಕೊಲ್ಲುವ ಸಂಚಿನ ಭಾಗವಾಗಿರಲಿಲ್ಲ ಎಂಬುದನ್ನು ಸೂಚಿಸುತ್ತದೆ ಎಂದು ಪರಿಚ್ಛೇದ 35 ಹೇಳುತ್ತದೆ. ಎಸ್-6ರಲ್ಲಿ ಕೇವಲ ಕರಸೇವಕರಷ್ಟೇ ಇದ್ದರು ಎಂದು ಸರಕಾರಿ ವಕೀಲರೂ ಹೇಳಿಲ್ಲ. ಅಲ್ಲದೆ ಮೊದಲು ಸುಡಲು ಪ್ರಯತ್ನಿಸಿದ್ದು ಎಸ್-2 ಕೋಚನ್ನು ಎಂಬ ಅಂಶವೂ ಜನಜಂಗುಳಿ ಒಂದು ಪಿತೂರಿಯ ಭಾಗ ಅಲ್ಲ ಎಂಬ ಅಭಿಪ್ರಾಯವನ್ನು ಬೆಂಬಲಿಸುತ್ತದೆ ಎಂದೂ ಈ ಪರಿಚ್ಛೇದ ಹೇಳುತ್ತದೆ. ಆದ್ದರಿಂದ ಆಪಾದಿತರನ್ನು ಕಲ್ಲುತೂರಾಟ, ಸಾಮಾನ್ಯ ಅಸ್ತ್ರಗಳ ಬಳಕೆ, ಸೀಮೆ ಎಣ್ಣೆಯಂತಹ ಜ್ವಲಂತಶೀಲ ವಸ್ತುಗಳನ್ನು ಬಳಸಿದ್ದು, ರೈಲ್ವೆ ಅಸ್ತಿನಷ್ಟ ಇತ್ಯಾದಿ ಅಪರಾಧಗಳ ಬಗ್ಗೆ ವಿಚಾರಣೆಗೊಳಪಡಿಸಬೇಕೇ ಹೊರತು ಪೋಟಾದ ಅಡಿಯಲ್ಲಿ ಅಲ್ಲ ಎಂಬ ತೀರ್ಮಾನಕ್ಕೆ ಈ ಪರಿಚ್ಛೇದ ಬರುತ್ತದೆ.


ಫೆಬ್ರುವರಿ 26,2002 ರ ರಾತ್ರಿ ಅಮನ್‌ಗೆಸ್ಟ್ ಹೌಸ್‌ನಲ್ಲಿ ಪಿತೂರಿಯನ್ನು ರಚಿಸಲಾಗಿತ್ತು ಎಂಬ ಸರಕಾರಿ ವಕೀಲರ ಸಿದ್ಧಾಂತ ಅವರ ಮಾತುಗಳ ಪ್ರಕಾರವೇ ಸಾಬೀತಾಗುತ್ತಿಲ್ಲ ಎಂದು ಈ ವರದಿಯ ಪರಿಚ್ಛೇದ 36 ಹೇಳಿದೆ. ಈ ಘಟನೆಗೆ ಕಾರಣ ಎಸ್-6ರಲ್ಲಿದ್ದ ಒಬ್ಬ ಕರಸೇವಕ ಪ್ಲಾಟ್‌ಫಾರಂನಲ್ಲಿ ಚಹಾ ಮಾಡುವವರೊಡನೆ ನಡೆಸಿದ ಜಗಳ ಎಂಬುದು ಸ್ಪಷ್ಟ. ಇದು ಪಿತೂರಿಯಾಗಿದ್ದರೆ ಎಸ್-6ರ ಪ್ರಯಾಣಿಕರನ್ನು ಕೆಳಗಿಳಿಯಲೇ ಬಿಡುತ್ತಿರಲಿಲ್ಲ. ನಾಲ್ಕೂ ಕಡೆಯಿಂದ ಸುತ್ತುವರೆಯಲಾಗುತ್ತಿತ್ತು. ಎಸ್-2ರ ಮುಂದೆ ಜಮಾಯಿಸುವ ಅಗತ್ಯವೇ ಇರುತ್ತಿರಲಿಲ್ಲ ಎಂದೂ ಈ ಪರಿಚ್ಛೇದ ಹೇಳುತ್ತದೆ. ಆಪಾದಿತರು ಘಟನೆಯ ವೇಳೆಗೆ ಅಲ್ಲಿ ಇದ್ದರೋ ಇಲ್ಲವೋ ಎಂಬುದನ್ನು ನೋಡದೆ ಆಪಾದನೆಗಳನ್ನು ಹೊರಿಸಲಾಗಿದೆ ಎಂದೂ ಈ ಪರಿಚ್ಛೇದ ಹೇಳುತ್ತದೆ.

ಪಬ್ಲಿಕ್ ಪ್ರಾಸಿಕ್ಯೂಟರ್ ಹೇಳುವಂತೆ ಇದು ಒಂದು ಪೂರ್ವಯೋಜಿತ ಪಿತೂರಿ ಎಂದು ಒಪ್ಪಿಕೊಂಡರೂ ಕೂಡಾ ಪೋಟಾದ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಬಹುದಾದ ಪಿತೂರಿ ಎಂಬುದಕ್ಕೆ ಯಾವುದೇ ಸಾಕ್ಷಿ ಕಂಡಿಲ್ಲ ಎಂದು ವರದಿಯ ಪರಿಚ್ಛೇದ 37 ಹೇಳುತ್ತದೆ. ಪೋಟಾ ಕಾನೂನಿನ ವಿಭಾಗ 'ಬಿ'ದ ವಿಭಾಗ 1(ಎ) ಪ್ರಕಾರ ಭಾರತದ ಐಕ್ಯತೆ, ಸಮಗ್ರತೆ, ಭದ್ರತೆ ಅಥವಾ ಸಾರ್ವಭೌಮತೆಗೆ ಬೆದರಿಕೆಯೊಡ್ಡುವ ಆಶಯದಿಂದ, ಅಥವಾ ಜನಗಳಲ್ಲಿ ಅಥವಾ, ಯಾವುದೇ ಜನವಿಭಾಗದಲ್ಲಿ ಭಯೋತ್ಪಾದನೆ ಉಂಟುಮಾಡಲು ನಡೆಸಿರುವ ಕೃತ್ಯವೇ ಭಯೋತ್ಪಾದಕ ಕೃತ್ಯ ಎಂದು ಈ ಪರಿಚ್ಛೇಗ ನೆನಪಿಸುತ್ತದೆ.

ಪರಿಚ್ಛೇದ 38 : ಈ ಮೊಕದ್ದಮೆಯಲ್ಲಿ ಪೋಟಾ ಅನ್ವಯವಾಗುತ್ತದೋ ಇಲ್ಲವೋ ಎಂಬ ಬಗ್ಗೆ ಗುಜರಾತ್ ಸರಕಾರಕ್ಕೆ ಆರಂಭದಿಂದಲೂ ಖಾತ್ರಿಯಿರಲಿಲ್ಲ ಎಂದು ಅಭಿಪ್ರಾಯಪಡುತ್ತದೆ. ಆದ್ದರಿಂದಲೇ ಘಟನೆ ನಡೆದ ಮೂರು ತಿಂಗಳ ನಂತರ ಹಾಕಿದ ಮೊದಲ ಚಾರ್ಜ್‌ಶೀಟ್‌ನಲ್ಲಿ ಪೋಟಾದ ಪ್ರಸ್ತಾಪವಿರಲಿಲ್ಲ. ನಂತರವಷ್ಟೇ ಪೋಟಾದ ವಿಭಾಗ 3(2) ಹಾಗೂ 3(3)ರ ಅಂಶಗಳನ್ನು ಸೇರಿಸಲಾಯಿತು. 26.2.2002 ರ


ಮೂರು ವರ್ಷಗಳ ನಂತರವೂ ಗುಜರಾತಿನಲ್ಲಿ ಅಪರಾಧಿಗಳು ನಿರ್ಭೀತಿಯಿಂದ ಅಡ್ಡಾಡುತ್ತಿದ್ದರೆ, ಅದಕ್ಕೆ ಬಲಿಯಾದವರು ಈಗಲೂ ಕೊರಗುತ್ತಿದ್ದಾರೆ ಯುಪಿಎ ಸರಕಾರ ತುರ್ತಾಗಿ ಈ ಸನ್ನಿವೇಶವನ್ನು ಗ್ರಹಿಸಬೇಕಾಗಿದೆ. ಕೋಮು ಹಿಂಸಾಚಾರದ ಪ್ರಮುಖ ಘಟನೆಗಳ ತನಿಖೆಯನ್ನು ಸಿಬಿಐಗೆ ಒಪ್ಪಿಸುವುದನ್ನೂ ಸೇರಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ಅದು ತಕ್ಷಣವೇ ಕೈಗೊಳ್ಳಬೇಕಾಗಿದೆ.

ರಾತ್ರಿ ಸಂಚನ್ನು ರೂಪಿಸಲಾಯಿತು ಎಂದು. ಇದರ ನಂತರವೂ ಸರಕಾರಕ್ಕೆ ಖಾತ್ರಿಯಿರಲಿಲ್ಲ. ತನಿಖೆ ಮುಂದುವರೆಯಿತು. ಹಾಗೂ ರಾಜ್ಯಸರಕಾರದ ಪರವಾಗಿ ತನಿಖಾ ಅಧಿಕಾರಿ ಶ್ರೀ ಶಾಂತಿಮರಿ ಬಾಬಾ ಗುಜರಾತ್ ಹೈಕೋರ್ಟ್‌ನಲ್ಲಿ 5.3.2003 ರಂದು ಸಲ್ಲಿಸಿದ ಅಫಿಡವಿಟ್‌ನಲ್ಲಿ "ಪೋಟಾದ ಅಂಶಗಳನ್ನು ಅನ್ವಯಿಸಲು ಸಾಕಷ್ಟು ಸಾಕ್ಷ್ಯ ಮತ್ತು



ಕೊಳ್ಳಿ ಇಟ್ಟವರಿಗೆ ಶಿಕ್ಷೆ ಎಲ್ಲಿ?

ಮಾಹಿತಿಗಳು ಇಲ್ಲವೆಂದು ಅರಿವಾಗಿರುವುದರಿಂದ, ಅದನ್ನು ಕೈಬಿಡಲಾಗಿದೆ" ಎಂದಿದ್ದರು. ಮತ್ತೆ ಯಾವ ಕಾರಣಕ್ಕೋ [illegible] ಅಫಿಡವಿಟ್‌ನ್ನು ಹಿಂತೆಗೆದುಕೊಳ್ಳಲಾಯಿತು. 5.2.2003 ರಂದು ಆಪಾದಿತ ಜಬಿರ ಬಿನ್ಯಾಮಿನ್ ಬಹೇರಾ


ಮೋದಿ : ನರಹಂತಕ, ಮಾನವ ಜನಾಂಗಕ್ಕೆ ಕಳಂಕ

ಎಂಬಾತನ ವಿಚಾರಣೆಯ ಸಮಯದಲ್ಲಿ ದಾಖಲಿಸಿಕೊಂಡ ಹೊಸ ಸಂಗತಿಗಳ ಪ್ರಕಾರ ಪೋಟಾದ ಅಂಶಗಳನ್ನು ಮತ್ತೆ ಅನ್ವಯಗೊಳಿಸಿದೆ ಎಂದು ಹೇಳಲಾಯಿತು. ಆಶ್ಚರ್ಯವೆಂದರೆ ಶ್ರೀಯುತ ಬಾವಾರವರು ಅಫಿಡವಿಟ್ ಸಲ್ಲಿಸುವಾಗ ಈ ಹೊಸ ಸಂಗತಿಗಳ ಬಗ್ಗೆ ಅವರಿಗೆ ಗೊತ್ತಿರಬೇಕು; ಏಕೆಂದರೆ ಅವರು ಅಫಿಡವಿಟ್ ಸಲ್ಲಿಸಿದ್ದು ಒಂದು ತಿಂಗಳ ನಂತರ. ಇವೆಲ್ಲದರಿಂದಾಗಿ ಈ ಮೊಕದ್ದಮೆ ಪೋಟಾಕ್ಕೆ ಒಳಪಡುತ್ತದೆಯೋ ಎಂಬ ಬಗ್ಗೆ ಪ್ರಾಸಿಕ್ಯೂಶನ್‌ನವರಿಗೇ ಖಾತ್ರಿಯಿರಲಿಲ್ಲ, ಹಿಂಜರಿಕೆಯಿಂದಲೇ ಎಲ್ಲಾ ಆಪಾದಿತರನ್ನು ಪೋಟಾದ ಕರಾಳ ಶಾಸನದ ಅಡಿಯಲ್ಲಿ ವಿಚಾರಣೆ ಎದುರಿಸುವಂತೆ ಮಾಡಿದರು ಎಂದು ನಾವು ಗ್ರಹಿಸಬೇಕಾಗುತ್ತದೆ ಎಂದು ವರದಿಯ ಈ ಪರಿಚ್ಛೇದದಲ್ಲಿ ಹೇಳಲಾಗಿದೆ.

ಪರಿಚ್ಛೇದ 39, 1994 ರ ಹಿತೇಂದ್ರ ವಿಷ್ಣು ಕುರ್ ಮೊಕದ್ದಮೆಯಲ್ಲಿ ಸುಪ್ರಿಂ ಕೋರ್ಟಿನ ಈ ಮಾತುಗಳನ್ನು ಉದ್ಧರಿಸುತ್ತದೆ -" ಒಂದು ಭಯೋತ್ಪಾದಕ ಚಟುವಟಿಕೆ ಕೇವಲ ಕಾನೂನು ಮತ್ತು ವ್ಯವಸ್ಥೆಯಲ್ಲಿ ಅಥವಾ ಸಾರ್ವಜನಿಕ ವ್ಯವಸ್ಥೆಯಲ್ಲಿ ಭಂಗ ತರುವುದರಿಂದಷ್ಟೇ ಉಂಟಾಗುವುದಿಲ್ಲ. ಆ ಆಶಯದ ಚಟುವಟಿಕಟಯ ಪರಿಣಾಮ ಸಾಮಾನ್ಯ ಕಾನೂನು ಪಾಲನಾ ಸಂಸ್ಥೆಗಳಿಗೆ ಸಾಮಾನ್ಯ ಶಿಕ್ಷಾ ಕಾನೂನುಗಳ ಅಡಿಯಲ್ಲಿ ನಿರ್ವಹಿಸಲು ಸಾಧ್ಯವಾಗದಂತಹ ರೀತಿಯಲ್ಲಿ ಇರಬೇಕಾಗುತ್ತದೆ" ಈ ಮಾತನ್ನು ಉದ್ಧರಿಸುತ್ತಾ ಕೇಂದ್ರೀಯ ಪೋಟಾ ಪರಾಮರ್ಶೇ ಸಮಿತಿ" ನಮ್ಮ ಅಭಿಪ್ರಾಯದಲ್ಲಿ ಇದು ಭಾರತಿಯ ದಂಡಶಾಸನ ಮತ್ತು ಇತರ ವಿಶೇಷ ಕಾನೂನುಗಳಡಿ ವಿವಿಧ ಅಪರಾಧಗಳನ್ನು ಎಸಗಿದ ಕಾನೂನುಬಾಹೀರ ಜಮಾವಣೆಯ ಒಂದು ಸರಳ ಮೊಕದ್ದಮೆಯೇ ಹೊರತು, ಖಂಡಿತವಾಗಿಯೂ ಪೋಟಾದ ಅಂಶಗಳಡಿ ಬರುವ ಮೊಕದ್ದಮೆಯಲ್ಲ ಎಂದು ಈ ಪರಿಚ್ಛೇದ 39ರಲ್ಲಿ ಹೇಳುತ್ತದೆ.

ಮೂರು ವರ್ಷಗಳ ನಂತರವೂ ಗುಜರಾತಿನಲ್ಲಿ ಅಪರಾಧಿಗಳು ನಿರ್ಭೀತಿಯಿಂದ ಅಡ್ಡಾಡುತ್ತಿದ್ದರೆ, ಅದಕ್ಕೆ ಬಲಿಯಾದವರು ಈಗಲೂ ಕೊರಗುತ್ತಿದ್ದಾರೆ ಎಂಬುದೀಗ ಸ್ವಯಂವೇದ್ಯ. ಯುಪಿಎ ಸರಕಾರ ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಅಡಿಪಾಯವನ್ನು ಎತ್ತಿಹಿಡಿಯುವ ಹಾಗೂ ಶಕ್ತಿಯುತ ಗೊಳಿಸುವ ಸ್ಪಷ್ಟ ಜನಾದೇಶ ಪಡೆದು ಅಧಿಕಾರಕ್ಕೆ ಬಂದಿದೆ. ಒಂದು ವರ್ಷ ಪೂರ್ಣವಾಗಿ ಕಳೆದಿದೆ. ಆದರೂ, ಗುಜರಾತಿನಲ್ಲಿ ನ್ಯಾಯದ ಸುಳಿವೇ ಎಲ್ಲೂ ಇಲ್ಲ. ಯುಪಿಎ ಸರಕಾರ ತುರ್ತಾಗಿ ಈ ಸನ್ನಿವೇಶವನ್ನು ಗ್ರಹಿಸಬೇಕಾಗಿದೆ. ಕೋಮು ಹಿಂಸಾಚಾರದ ಪ್ರಮುಖ ಘಟನೆಗಳ ತನಿಖೆಯನ್ನು ಸಿಬಿಐಗೆ ಒಪ್ಪಿಸುವುದನ್ನೂ ಸೇರಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ಅದು ತಕ್ಷಣವೇ ಕೈಗೊಳ್ಳಬೇಕಾಗಿದೆ.

ಕಾಫಿ ಉದ್ಯಮ

ಬಂಡವಾಳಗಾರರಿಗೆ ಮಣೆ ಬೆಳೆಗಾರರಿಗೆ ಬವಣೆ



ಕೊಳ್ಳೆ ಹೊಡೆಯುತ್ತಲೇ ಹೋಗುತ್ತಿರುವ ಉದ್ಯಮಿಗಳು, ನೆಲಕಚ್ಚುತ್ತಿರುವ ಬೆಳೆಗಾರರ ಬವಣೆಗಳತ್ತ ಬೆಳಕು ಚೆಲ್ಲುವ ವಿಶ್ಲೇಷಣಾತ್ಮಕ ಲೇಖನ

- ಡಾ|| ದುರ್ಗಾ ಪ್ರಸಾದ್. ಇ.ರಾ.

ಭಾರತದಲ್ಲಿ ಇಂದು ಉತ್ಪಾದನೆಯಾಗುತ್ತಿರುವ ಕಾಫಿಯ ಶೇ.80ರಷ್ಟು ವಿದೇಶಗಳಿಗೆ ರಫ್ತಾಗುತ್ತದೆ. 2000ದ ದಶಕದಲ್ಲಿ ಭಾರತದಿಂದ 2.35 ಲಕ್ಷ ಟನ್ ಕಾಫಿ ರಫ್ತಾಯಿತು. ಅದು ಈಗ 2.19 ಲಕ್ಷ ಟನ್ನಿಗೆ ಇಳಿದಿದೆ. ರಫ್ತಿನಿಂದಾಗುವ ವರಮಾನದಲ್ಲೂ ಕಡಿತ ಉಂಟಾಗಿದೆ. 2000ದಲ್ಲಿ 1685 ಕೋಟಿ ರೂಪಾಯಿ ರಫ್ತಿನಿಂದ ಆದಾಯವಾಗಿದ್ದರೆ 2001ರಲ್ಲಿ ಈ ಆದಾಯ 1113 ಕೋಟಿ ರೂ.ಗಳಿಗೆ ಇಳಿದಿದೆ. 2002ರಲ್ಲಿ ರಫ್ತು 2.07 ಲಕ್ಷವಾಗಿಯೂ ಆದಾಯ 972 ಕೋಟಿಗೆ ಕುಸಿಯಿತು. 1997ಕ್ಕೆ ಹೋಲಿಸಿದರೆ ಕಾಫಿಯಿಂದ ಬರುವ ಆದಾಯ ಶೇ.50ಕ್ಕಿಂತಲೂ ಕಡಿಮೆಯಾಗಿದೆ.

ಲ್ಯಾಟಿನ್ ಅಮೇರಿಕನ್, ಏಷ್ಯನ್, ಆಫ್ರಿಕನ್ ರಾಷ್ಟ್ರಗಳಲ್ಲಿ ಕಾಫಿ ಬೆಳೆಯುವುದಾಗಿದೆ. ಆದರೆ ಅದರ ಶೇ.80ರಷ್ಟನ್ನು ಕುಡಿಯುವವರು ವಿಕಸಿತ ರಾಷ್ಟ್ರಗಳವರಾಗಿದ್ದಾರೆ. ಯುರೋಪಿಯನ್ ರಾಷ್ಟ್ರಗಳು ಶೇ.40ರಷ್ಟು, ಅಮೇರಿಕಾ ಶೇ.20ರಷ್ಟು, ಜಪಾನ್ ಶೇ.10 ರಷ್ಟನ್ನು ಉಪಯೋಗಿಸುತ್ತಾರೆ.

ಶೇ.30ರಷ್ಟು ಕಾಫಿ ಬ್ರೆಜಿಲ್‌ನಲ್ಲಿ ಬೆಳೆಯುತ್ತದೆ. ವಿಯಟ್ನಾಂ ಮತ್ತು ಕೊಲಂಬಿಯಾದಲ್ಲಿ ಶೇ.11ರಷ್ಟು ಬೆಳೆಸುತ್ತಾರೆ. ಭಾರತದ ಸ್ಥಾನ ಏಳನೇಯದ್ದು. ಜಗತ್ತಿನಲ್ಲಿ ಉತ್ಪಾದನೆಯಾಗುವ ಒಟ್ಟು ಕಾಫಿಯ ಶೇ.4ರಷ್ಟು ಮಾತ್ರ ಭಾರತದಲ್ಲಿ ಬೆಳೆಯುವುದಾಗಿದೆ. ಕಳೆದ ಒಂದು ದಶಕದಲ್ಲಷ್ಟೇ ವಿಯಟ್ನಾಂ ಕಾಫಿ ಬೆಳೆಯುವ ಪ್ರಮುಖ ರಾಷ್ಟ್ರಗಳಲ್ಲಿ ಒಂದಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತದ ಭಾಗ ಕೇವಲ ಶೇ.4. ಆದ್ದರಿಂದ ಭಾರತದ ಬೆಳೆಗಾರರ ಮೇಲೆ ಇದರ ಪರಿಣಾಮ ಹೆಚ್ಚಾಗುವುದು ಸ್ವಾಭಾವಿಕ.

ಶೇ.98ರಷ್ಟು ಬೆಳೆಗಾರರು ಹತ್ತು ಹೆಕ್ಟೇರಿಗಿಂತ ಕಡಿಮೆ ಇರುವ ಸಣ್ಣ, ಮಧ್ಯಮ ಬೆಳೆಗಾರರಾಗಿದ್ದು ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಮೊದಲ ಬಲಿಪಶುಗಳು ಇವರೇ.

ಈ ವ್ಯವಸ್ಥೆಯಲ್ಲಿ ಲಾಭ ಪಡೆಯುವವರು ದೇಶೀ ಗುತ್ತೇದಾರಿಗಳು ಮತ್ತು ಬಹುರಾಷ್ಟ್ರೀಯ ಕಂಪೆನಿಗಳು, ಇಲ್ಲಿಯೂ ಅದನ್ನೇ ಕಾಣುತ್ತಿದ್ದೇವೆ.

ಯಾರಿಗೆ ಲಾಭ?

ಇಂದಿನ ಈ ಪರಿಸ್ಥಿತಿಯಲ್ಲೂ ಯಾರಿಗೆ ಲಾಭವಾಗಿದೆ ಎಂದರೆ ಅದು ಬೆರಳೆಣಿಕೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಮತ್ತು ದೇಶೀ ಗುತ್ತೇದಾರಿಗಳಿಗೆ. ಕಾಫಿ ಬೆಳೆಯ ಬೆಲೆ ಕುಸಿಯುತ್ತಿರುವಾಗಲೇ ಕಾಫಿ ಪುಡಿಯ ಬೆಲೆ ಕುಸಿಯುತ್ತಿಲ್ಲವೆಂದು ಮಾತ್ರವಲ್ಲ ಅದು ಹೆಚ್ಚುತ್ತಿದೆ ಎಂದು ಗಮನಿಸಬೇಕು.

ಒಂದು ಕೆ.ಜಿ. ಪೌಡರ್ ಪಡೆಯಲು ಒಂದು ಕೆ.ಜಿ. 300 ಗ್ರಾಂ ಬೇಳೆ ಬೇಕು. ಇದರ ಬೆಲೆ 47 ರೂ. ಇದನ್ನು ಪುಡಿ ಮಾಡಲು ತಗಲುವ ಖರ್ಚು 5 ರೂ. ಒಟ್ಟು 52 ರೂ. ಅಲ್ಲದೆ ಈ ಒಂದು ಕೆ.ಜಿ.ಪುಡಿಯಲ್ಲಿ 700 ಗ್ರಾಂ ಮಾತ್ರ ಕಾಫಿ ಉಳಿದದ್ದು ಚಿಕೋರಿ ಅಥವಾ ಬೇರೆ ಯಾವುದೇ ಮಿಶ್ರಣ. ಆದರೆ ಹಿಂದೂಸ್ತಾನ್ ಲಿವರ್ ಕಂಪೆನಿ, ಗ್ರೀನ್‌ಲೇಬಲ್ ಕಾಫಿ ಪುಡಿಯ ಬೆಲೆ 500 ಗ್ರಾಮಿಗೆ 69 ರೂ. (ಇದರಲ್ಲಿ 53% ಕಾಫಿ ಮತ್ತು 47% ಚಿಕೋರಿ) ಬ್ರೂ ಕಾಫಿಗೆ 500 ಗ್ರಾಮಿಗೆ 171 ರೂ.

ಮೂರನೇ ಜಗತ್ತಿನ ರಾಜ್ಯಗಳು ಕಾಫಿ ರಫ್ತಿನಿಂದ 1992ರಲ್ಲಿ 1000 ಕೋಟಿ ಡಾಲರ್ ಸಂಪಾದಿಸಿದವು. ಆದರೆ ಆ ವರ್ಷ ವಿಕಸಿತ ರಾಷ್ಟ್ರಗಳಲ್ಲಿ ಕಾಫಿ ಸೇವನೆಯಿಂದ ಸಂಪಾದನೆಯಾದ ಮೊತ್ತ 3000 ಕೋಟಿ ಡಾಲರಾಗಿತ್ತು. ಅಂದರೆ ಬಹುರಾಷ್ಟ್ರೀಯ ಕಂಪೆನಿಗಳು ಸುಮಾರು 2000 ಕೋಟಿ ಡಾಲರ್ ಗಳಿಸಿದ್ದುವು. 10 ವರ್ಷ ಕಳೆದು 2002 ಆಗುವಾಗ ಕಾಫಿ ಬೇಳೆಯ ಬೆಲೆ ಕುಸಿತದಿಂದಾಗಿ ತೃತೀಯ ಜಗತ್ತಿನ ದೇಶಗಳು ರಫ್ತಿನಿಂದ ಸಂಪಾದಿಸಿದ ಸಂಪಾದನೆ 550 ಡಾಲರಿಗೆ ಇಳಿಯಿತು. ಆದರೆ ಅದೇ ವೇಳೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಕಾಫಿ ಬಳಕೆದಾರರ ಮಾರುಕಟ್ಟೆಯಿಂದ ಸಂಪಾದಿಸಿದ ಸಂಪಾದನೆ 7000 ಕೋಟಿ ಡಾಲರಿಗೆ ಏರಿತು. ಹತ್ತು ವರ್ಷಗಳ ಹಿಂದೆ ಕಾಫಿ ಬೆಳೆಸುವ ಮೂರನೇ ಜಗತ್ತಿನ ರಾಷ್ಟ್ರಗಳ ವರಮಾನ ಮೂರರಲ್ಲಿ ಒಂದಾಗಿದ್ದರೆ ಹತ್ತು ವರ್ಷಗಳ ನಂತರ ಬಿಕ್ಕಟ್ಟಿನ ಫಲವನ್ನನುಭವಿಸುವ ಅವರ ಆದಾಯ ಹತ್ತರಲ್ಲಿ ಒಂದಾಗಿ ಕುಸಿದಿದೆ.

ತೃತೀಯ ಜಗತ್ತಿನ ರಾಜ್ಯಗಳ ಕಾರ್ಷಿಕ ಮಾರುಕಟ್ಟೆಯನ್ನು ಹಿಡಿತದಲ್ಲಿಟ್ಟುಕೊಂಡು ಅಪಾರ ಲಾಭ ಕೊಳ್ಳೆಹೊಡೆಯುವ ಬಹುರಾಷ್ಟ್ರೀಯ ಕಂಪೆನಿಗಳ ದುಷ್ಟ ವರ್ತನೆಗೆ ಜಾಗತಿಕ ಕಾಫಿ ರಂಗ ಒಂದು ಉತ್ತಮ ಉದಾಹರಣೆಯಾಗಿದೆ.

ದೈತ್ಯರ ಮುಷ್ಟಿಯಲ್ಲಿ

50 ಲಕ್ಷ ಕೃಷಿ ಹಿಡುವಳಿಯಲ್ಲಿ ಸುಮಾರು ಎರಡೂವರೆ ಕೋಟಿ ಕೃಷಿಕರೂ, ಕಾರ್ಮಿಕರೂ ಒಂದಾಗಿ ಬೆಳೆಸುವ ಕಾಫಿಯನ್ನು ಕೇವಲ 5 ಬಹುರಾಷ್ಟ್ರೀಯ ಕಂಪೆನಿಗಳು ಹಿಡಿತದಲ್ಲಿಟ್ಟುಕೊಂಡಿವೆ. ಅವು ಪ್ರೋಕ್ಟರ್ ಎಂಡ್ ಗೇಂಬೆಲ್, ಫಿಲಿಪ್ಸ್ ಮೋರಿಸ್, ಸಾರಾ-ಲೀ, ನೆಸ್ಲೆ ಮತ್ತು ಛಬಿ. ಈ 5 ಕಂಪೆನಿಗಳು ಜಗತ್ತಿನಲ್ಲಿ ಉತ್ಪಾದನೆಯಾಗುವ ಕಾಫಿಯ ಶೇ.40 ರಷ್ಟನ್ನು ಕೊಳ್ಳುತ್ತವೆ. ಕಾಫಿ ಬೆಳೆಯನ್ನು ಕೊಂಡುಕೊಂಡು ಪ್ರಾಥಮಿಕ ಸಂಸ್ಕರಣವನ್ನು ಮಾಡಿ ಇವರಿಗೆ ತಲುಪಿಸುವ ರಫ್ತುದಾರರು ಎಲ್ಲಾ ರಾಷ್ಟ್ರಗಳಲ್ಲೂ ಇದ್ದಾರೆ. ಕಾಫಿ ಪುಡಿ ಬ್ಲೆಂಡ್ ಮಾಡಿ ಪೇಕೆಟ್ಟುಗಳಲ್ಲಿ ತುಂಬಿ ಚಿಲ್ಲರೆ ವ್ಯಾಪಾರಿಗಳಿಗೆ ತಲುಪಿಸುವುದಷ್ಟೇ ಇವರು ಮಾಡುವ ಕೆಲಸ. ಚಿಲ್ಲರೆ ವ್ಯಾಪಾರದಿಂದ ಬರುವ ಲಾಭದ ಶೇ.87 ರಷ್ಟು ಬಹುರಾಷ್ಟ್ರೀಯ ಕಂಪೆನಿಗಳ ಕೈಸೇರುವುದೆಂದು, ಕಾಫಿ ಕೃಷಿಕರಿಂದ ಕಾಫಿ ಪುಡಿ ಕೊಳ್ಳುವವರವರೆಗಿನ ಅಧ್ಯಯನದಿಂದ ತಿಳಿದುಬರುತ್ತದೆ. ಚಿಲ್ಲರೆ ವ್ಯಾಪಾರಿಗಳಿಗೆ ಶೇ.11 ಸಿಕ್ಕಿದರೆ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಬೆಳೆಗಾರರಿಗೆ ಸಿಕ್ಕುವುದು ಕೇವಲ ಶೇ.13 ಮಾತ್ರ.

ಹೀಗೆ ಈ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳು ಮಾತ್ರವಲ್ಲದೆ ದೇಶೀ ಗುತ್ತೇದಾರಿಗಳೂ ಇಂದಿನ ಬಿಕ್ಕಟ್ಟಿನ ಸಂದರ್ಭದಲ್ಲೂ ಅಪಾರ ಲಾಭ ಗಳಿಸುತ್ತಿದ್ದಾರೆ. ಇವರಲ್ಲಿ ಅತ್ಯಂತ ಪ್ರಮುಖರಾದವರು ಟಾಟಾ. ಬ್ರಿಟಿಷ್ ಒಡೆತನದ ಒಂದು ತೋಟವನ್ನು 1967ರಲ್ಲಿ ಟಾಟಾ, 1993 ರಲ್ಲಿ ಭಾರತೀಯ ಮಾರುಕಟ್ಟೆಯಲ್ಲಿ ಟಾಟಾ ತನ್ನ ಬ್ರಾಂಡಿನ ಕಾಫಿಯನ್ನು ಇಳಿಸಿದರು. ಕಾಫಿ ಬೆಳೆಯ ಬೆಲೆ ಕುಸಿಯುವುದರೊಂದಿಗೆ ಕಾಫಿ ಮಾರುಕಟ್ಟೆಯನ್ನು ತನ್ನ ಹಿಡಿತದಲ್ಲಿ ತರಲು ವಿದೇಶೀ ಮಾರುಕಟ್ಟೆಯನ್ನು ಪ್ರವೇಶಿಸಲೂ ಟಾಟಾ

ದೇಶದಲ್ಲಿ ವಿವಿಧ ಗಾತ್ರದ ಹಿಡುವಳಿಗಳ ಸ... ವಿಸ್ತೀರ್ಣ ಮತ್ತು ಕಾಫಿ ಉತ್ಪಾದನೆಯ ಪಾ...

ಹಿಡುವಳಿ ಗಾತ್ರ ಹೆಕ್ಟೇರುಗಳಲ್ಲಿ	ಸಂಖ್ಯೆ ಶೇ	ಒಟ್ಟಿನ ಕಾಫಿ	ಬೆಳೆಯುವ... ಒ...
0-2	1,20,252	85.7	1,29.0...
2-4	10,827	7.7	2...
4-10	6,564	4.6	4...
ಒಟ್ಟು	1,37,643	98.0	1,9...
Lorge Holding			
10-20	1521	1.1	2...
20-40	561	0.4	1...
40-60	213	0.2	
60-80	121	0.1	

ಕಾಫಿಬೋರ್ಡ್‌ನ ಈ ಸದಸ್ಯರು ಯಾರ ಹಿತ ಕಾಯಲಿಕ್ಕಾಗಿ?

■ ಕಾಫಿಬೋರ್ಡ್‌ನ ರಚನೆ ಮತ್ತು ಉದ್ದೇಶಗಳಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕು. ಇಂದು ಅದರ ಸಂವಿಧಾನದ ಫಲವಾಗಿಯೇ ಅದು ಬಹುರಾಷ್ಟ್ರೀಯ ಕಂಪನಿ ಮತ್ತು ದೇಶೀ ಗುತ್ತೇದಾರಿಯ ಕೈಯಲ್ಲಿದೆ. ಅದು ಈ ಶೋಷಕರ ಕೈಯಿಂದ ಮುಕ್ತವಾಗಿ ಕಾಫಿ ಬೆಳೆಗಾರರ ನೈಜ ಪ್ರತಿನಿಧಿಯಾಗದೆ ಬೋರ್ಡಿಗೆ ತನ್ನ ಪಾತ್ರ ವಹಿಸಲು ಸಾಧ್ಯವಿಲ್ಲ. ಕಾಫಿ ಬೋರ್ಡಿನ ಸಂವಿಧಾನ ಮತ್ತು ಉದ್ದೇಶ ಎರಡರಲ್ಲೂ ಆಮೂಲಾಗ್ರ ಬದಲಾವಣೆಯಾಗಬೇಕು.

■ ಇಂದು ಕಾಫಿ ಬೋರ್ಡಿನಲ್ಲಿ 33 ಸದಸ್ಯರಿದ್ದಾರೆ. ಅವರಲ್ಲಿ ಒಬ್ಬರು ಅಧ್ಯಕ್ಷರು. ಇವರು ಐಎಎಸ್ ಅಧಿಕಾರಿಗಳು. ಮೂರು ಪಾರ್ಲಿಮೆಂಟ್ ಸದಸ್ಯರಿದ್ದಾರೆ - ಶ್ರೀಕಂಠಪ್ಪ ಬೀರೂರಿನವರು(ಇವರು ಬಿಜೆಪಿಯವರು), ಜವರೇಗೌಡ(ಇವರು ರಾಜ್ಯಸಭಾ ಸದಸ್ಯರು ಮತ್ತು ಜಾತ್ಯತೀತ ಜನತಾದಳದವರು), ಶ್ರೀಮತಿ ವಿಜಯಕುಮಾರಿ ವಿಶಾಖಪಟ್ಟಂ(ಆಂಧ್ರ)

ಈ ಕಾಫಿ ಬೋರ್ಡಿನ ಸದಸ್ಯತನದಲ್ಲಿರುವ ಅಭಾಸಗಳು

1. ಸರ್ಕಾರಿ ಅಧಿಕಾರಿಗಳು ಐವರಿದ್ದಾರೆ. ಶೇ 69 ರಷ್ಟು ಕಾಫಿ ಬೆಳೆಯುವ ಕರ್ನಾಟಕಕ್ಕೂ ಒಂದೇ ಸ್ಥಾನ, ಮಿಜೋರಾಂಗೂ ಒಂದೇ ಸ್ಥಾನ.
2. ಸಣ್ಣ ಬೆಳೆಗಾರರಿಗೆ 7 ಸ್ಥಾನವಿದೆ. ಆದರೆ ಮೂವರು ಮಾತ್ರ ಸಣ್ಣ ಬೆಳೆಗಾರರು, ಇಬ್ಬರು 100 ಎಕ್ರೆಯಷ್ಟಿರುವವರು. ಒಬ್ಬರು ಕಾಫಿಗೆ ಸಂಬಂಧವೇ ಇಲ್ಲದವರು. ಏಳು ಜನರಲ್ಲಿ ಒಬ್ಬರು ಜಾತ್ಯತೀತ ಜನತಾದಳದವರು, ಮತ್ತೆಲ್ಲರೂ ಬಿಜೆಪಿಯವರು
3. ದೊಡ್ಡ ಬೆಳೆಗಾರರ ಪ್ರತಿನಿಧಿಗಳಲ್ಲಿ ಒಬ್ಬರು ಕಾಂಗ್ರೆಸ್ಸಿಗರು, ಉಳಿದಿಬ್ಬರೂ ಬಿಜೆಪಿಯವರು
4. ವ್ಯಾಪಾರೀ ಆಸಕ್ತಿಯ ಪ್ರತಿನಿಧಿಗಳ ಹೆಸರಿನಲ್ಲಿ ಹಿಂದೂಸ್ತಾನ್ ಲೀವರ್ ಮತ್ತು ಟಾಟಾ ನಿಗೆ ಪ್ರಾತಿನಿಧ್ಯ ಕೊಡಲಾಗಿದೆ.
5. ಬಿಜೆಪಿಯವರೆಂಬ ಒಂದೇ ಕಾರಣಕ್ಕಾಗಿ ಸ್ಥಾನ ಗಳಿಸಿದವರು ಒಬ್ಬರು.
6. ಕಾಫಿಗೆ ಸಂಬಂಧವೇ ಇಲ್ಲದ ಮಂಗಳೂರಿನವರೊಬ್ಬರನ್ನು ನೇಮಿಸಲಾಗಿದೆ.
7. ಕಾಫಿ ಬಳಕೆದಾರರ ಆಸಕ್ತಿ ಕಾಪಾಡಲೆಂಬ ಹೆಸರಿನಲ್ಲಿ ಸ್ಥಾನ ಕೊಡಲಾಗಿರುವ ಇಬ್ಬರು ಪ್ರತಿನಿಧಿಗಳಲ್ಲಿ ಒಬ್ಬರು ಬಳಕೆದಾರರಲ್ಲ, ಸಾಮಾನ್ಯ ಬಳಕೆದಾರರಿಗೆ ಒಂದು ಕಪ್ಪಿಗೆ ರೂ. 40 ರಿಂದ 50 ರೂ. ಗೆ ಕಾಫಿ ಮಾರುವ ಬಾರಿಸ್ಟಾ ಕಂಪನಿ ಎಂಬ ವಿದೇಶಿ ಕಂಪನಿ ಇದೆ. ಇಂದು ಇದನ್ನು ಟಾಟಾ ಕೊಂಡಿದ್ದಾರೆ. ಈ ಕಂಪನಿ ಬಳಕೆದಾರರ ಹಿತರಕ್ಷಕನಂತೆ!
ಹೀಗೆ ನಮ್ಮ ದೇಶದಲ್ಲಿ ಗುತ್ತೇದಾರಿಯಾದ ಟಾಟಾರಿಗೆ ಕಾಫಿ ಬೋರ್ಡಿನಲ್ಲಿ ಎರಡು ಸ್ಥಾನ. ಬಳಕೆದಾರರ ಇನ್ನೋರ್ವ ಪ್ರತಿನಿಧಿ ಬಿಜೆಪಿಯ ಬೆಂಬಲಿಗರಾಗಿದ್ದ ಸಿನಿಮಾ ನಟಿ ಸೌಂದರ್ಯ ಅಥವಾ ಸೌಮ್ಯ (ಈಗಿಲ್ಲ)
8. ಇನ್ಸ್ಟೆಂಟ್ ಕಾಫಿಯ ಹೆಸರಿನಲ್ಲಿ ಮತ್ತೆ ಬಹುರಾಷ್ಟ್ರೀಯ ಕಂಪನಿಗೆ ಕಾಫಿ ಬೋರ್ಡಿನೊಳಗೆ ಪ್ರವೇಶ. ಅದರ ಪ್ರತಿನಿಧಿ ನೆಸ್ಲೆ ಇಂಡಿಯಾ ಕಂಪನಿ. ಜಗತ್ತಿನ ಕಾಫಿ ಮಾರಕಟ್ಟೆಯನ್ನೇ ಹಿಡಿತದಲ್ಲಿರಿಸಿಕೊಂಡಿರುವ ಐವರು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಒಂದಾದ ನೆಸ್ಲೆ ಎಂದು ಈಗಾಗಲೇ ಕಂಡಿದ್ದೇವೆ.

ಹೀಗೆ ಕಾಫಿ ಬೋರ್ಡ್ ಬಹುರಾಷ್ಟ್ರೀಯ ಕಂಪನಿಗಳಾದ ನೆಸ್ಲೆ, ಹಿಂದೂಸ್ತಾನ್ ಲಿವರ್, ದೇಶೀ ಗುತ್ತೇದಾರಿಯಾದ ಟಾಟಾ (ಎರಡು ಪ್ರಾತಿನಿಧ್ಯ) ಮತ್ತು ಬಿಜೆಪಿಯ ಕೈಯಲ್ಲಿದೆ.

ದೇಶದಲ್ಲಿ ಕಾಫಿ ಬೆಳೆಗಾರರಲ್ಲಿ ಶೇ 98 ರಷ್ಟು ಬರುವ ಸಣ್ಣ ಬೆಳೆಗಾರರಿಗೆ ಇಲ್ಲಿ ಸ್ಥಾನವೇ ಇಲ್ಲ. ಇಂತಹ ಬೋರ್ಡ್ ಸಣ್ಣ, ಮಧ್ಯಮ ಬೆಳೆಗಾರರ ಹಿತಾಸಕ್ತಿಯನ್ನು ಹೇಗೆ ತಾನೆ ಪ್ರತಿಪಾದಿಸಲು ಸಾಧ್ಯ?

ಈ ಹಿನ್ನೆಲೆಯಲ್ಲಿ ಕಾಫಿ ಬೋರ್ಡಿನಿಂದ ಕ್ಯೂರರ್, ಟ್ರೇಡರ್‌ಗಳನ್ನು ಹೊರತು ಪಡಿಸಬೇಕು. ಏಕೆಂದರೆ ಅವರ ಹಿತಾಸಕ್ತಿ ಸಾಮಾನ್ಯ ಬೆಳೆಗಾರರ ಹಿತಾಸಕ್ತಿಗೆ ವಿರುದ್ಧವಾಗಿದೆ. ಕಾಫಿ ಬೋರ್ಡಿನಲ್ಲಿ ಸಣ್ಣ, ಮಧ್ಯಮ ಬೆಳೆಗಾರರಿಗೇ ಕಡ್ಡಾಯವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾತಿನಿಧ್ಯವಿರಬೇಕು ಮತ್ತು ಅವರು ಬೆಳೆಗಾರರಿಂದ ಚುನಾಯಿಸಲ್ಪಡಬೇಕು. ಬೋರ್ಡಿನ ಅಧ್ಯಕ್ಷರು ಕಾಫಿ ಬೆಳೆಯುವ ಪ್ರದೇಶದವರೇ ಆಗುವುದು ಒಳ್ಳೆಯದು.



ಜಗತ್ತಿನ ದೈತ್ಯ ಕಾಫಿ ಕಂಪನಿ ಬೆಳೆಗಾರರ ಹಿತ ರಕ್ಷಿಸೀತೆ?

ರಾದರು. ತುಚ್ಛ ಬೆಲೆಗೆ ಕೆಲವು ದೊಡ್ಡ ಗಳನ್ನು ಅವರು ಕೈವಶ ಮಾಡಿಕೊಂಡರು. ಏಷ್ಯನ್ ರಾಷ್ಟ್ರಗಳಲ್ಲೂ ಅವರು ಗಳನ್ನು ಕೈವಶ ಮಾಡಿಕೊಂಡಿರುವವರೆಂದು ಇದೆ. ಕಾಫಿ ಸಂಸ್ಕರಿಸುವ ಮತ್ತು ಚಿಲ್ಲರೆ ರ ಮಾಡುವ ಕೆಲವೂ ಕಂಪೆನಿಗಳನ್ನೂ ನುಂಗಿದರು. ಏಷ್ಯನ್ ಕಾಫಿ ಲಿಮಿಟೆಡ್, ಲೇಂಡ್ಸ್ ಲಿಮಿಟೆಡ್, ಮೊದಲಾದ ಗಳು ಇಂದು ಟಾಟಾನ ವಶವಾಗಿವೆ. ಪ್ರತಿ 35,000 ಟನ್ ಕಾಫಿ ಸಂಸ್ಕರಿಸುವ ಶಕ್ತಿ ಇಂದು ಇದೆ. ಇವಷ್ಟೇ ಅಲ್ಲದೆ ಬಾರಿಷ್ಟಾ ಇಂಟರ್ನೇಶನಲ್ ಎಂಬ ವಿದೇಶೀ ಯ ನಿಯಂತ್ರಣವನ್ನು ಟಾಟಾ ತನ್ನ ಕೈವಶ ಕೊಂಡಿದ್ದಾರೆ. ವಿದೇಶಗಳಲ್ಲಿ ಬ್ರಾಂಡ್ ಅಂಗಡಿಗಳನ್ನು ನಡೆಸುವ ಕಂಪೆನಿ ಇದು. 06ಕ್ಕಾಗುವಾಗ ಭಾರತದಲ್ಲಿ ಈ ಕಂಪೆನಿ ಬ್ರಾಂಡ್ ಕಾಫಿಯ ಸುಮಾರು 300 ಅಂಗಡಿಗಳನ್ನು ತೆರೆಯಲಿದ್ದಾರೆಂದು ಸುದ್ದಿ ಇದೆ. ಈ ಕಾಫಿ ಅಂಗಡಿಗಳಲ್ಲಿ ಒಂದು ಕಪ್ ಕಾಫಿಯ ಬೆಲೆ 40 ರಿಂದ 45 ರೂಪಾಯಿ ಆಗಿದೆ.

...ತ್ಪಾದನೆಯ ಭಾಗ
42.2
9.8
13.2
65.2
[illegible]
8.7
5.6
3.8
3.1

ಟಾಟಾನ ಕಾಫಿ ವ್ಯಾಪಾರದ ಲಾಭ 1996-97 ರಲ್ಲಿ 26 ಕೋಟಿ ರೂ. ಆಗಿದ್ದದ್ದು 2000 ದಲ್ಲಿ 53 ಕೋಟಿ ರೂ. ಆಯಿತು. ಈಗ ಅದು 100 ಕೋಟಿಯಾಗಿ ವೃದ್ಧಿಯಾಗಿದೆ.

06.07.2000ದ ಪತ್ರಿಕಾ ವರದಿಯೊಂದು ಈ ರೀತಿ ಸುತ್ತದೆ. "ಕನ್ಸಾಲಿಡೇಟೆಡ್ ಕಾಫಿ ಸಂಸ್ಥೆಯು ಸೋಮವಾರಪೇಟೆ ತಾಲೂಕಿನ್ನಲಿರುವ ಕೋಟಾರಿ ...ಯಲ್ ಕೋರ್ಪರೇಶನ್‌ಗೆ ಸೇರಿದೆ. 1320 ಕಾಫಿ ಎಸ್ಟೇಟನ್ನು ಖರೀದಿಸುವ ಮೂಲಕ ವ್ಯಾಪ್ತಿ ವಿಸ್ತರಿಕೊಂಡಿದೆ. ಕಳೆದ ತಾ.3ರಂದು ಟಾಟಾ ಸಮೂಹ ಸಂಸ್ಥೆಗಳಲ್ಲೊಂದಾದ ಕನ್ಸಾಲಿಡೇಟೆಡ್ ಕಾಫಿ ಸಂಸ್ಥೆ ಈ ವಹಿವಾಟು ನಡೆಸಿದೆ. ಇದರ ಬೆಲೆ 300 ಮಿಲಿಯ ರೂಪಾಯಿಗಳು. ಇದರಿಂದಾಗಿ ಕಾನ್ಸ್ ಕಾಫಿ ಸಂಸ್ಥೆಯ ಪ್ರಸ್ತುತ ಕೋವರ್ ಕೊಲ್ಲಿ ಎಸ್ಟೇಟ್ ಪ್ರದೇಶವೂ ಸೇರಿದಂತೆ ಒಟ್ಟು 19,350 ಎಕ್ರೆಯಲ್ಲಿ ತನ್ನ ಒಡೆತನ ಸ್ಥಾಪಿಸಲಿದೆ. ಇತ್ತೀಚೆಗೆ ಕಾಫಿ ಲ್ಯಾಂಡ್ ಲಿಮಿಟೆಡ್, ವೀರರಾಜೇಂದ್ರ ಎಸ್ಟೇಟ್ ಲಿಮಿಟೆಡ್, ಚರಾಗ್ನಿ ಲಿಮಿಟೆಡ್ ಹಾಗೂ ಏಷಿಯನ್ ಕಾಫಿ ಸಂಸ್ಥೆಗಳು ಕನ್ಸಾಲಿಡೇಟೆಡ್ ಕಾಫಿ ಸಂಸ್ಥೆಯೊಂದಿಗೆ ವಿಲೀನವಾಗಿದ್ದು ಪ್ರಸಕ್ತ ಕಾನ್ಸ್ ಕಾಫಿ ಸಂಸ್ಥೆಯು ಏಷ್ಯಾ ಖಂಡದಲ್ಲೇ ಅತಿ ದೊಡ್ಡ ಸಂಸ್ಥೆ ಎನ್ನಿಸಿದೆ. ಅಲ್ಲದೆ ಕೊಡಗು ಜಿಲ್ಲೆಯ ಮಟ್ಟಿಗೆ ತೋಟಗಾರಿಕಾ ವ್ಯವಹಾರದಲ್ಲಿ ಅತೀ ಹೆಚ್ಚು ಮೊತ್ತದ ವಹಿವಾಟು ನಡೆಸುತ್ತಿರುವ ಹೆಗ್ಗಳಿಕೆಯೂ ಕಾನ್ಸ್ ಕಾಫಿ ಸಂಸ್ಥೆಗೆ ಇದೆ. ಇದೇ ರೀತಿಯಲ್ಲಿ ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿಯೂ ಬೃಹತ್ ಪ್ರಮಾಣದಲ್ಲಿ ಕಾಫಿ ಎಸ್ಟೇಟ್ ಹೊಂದುವ ಮೂಲಕ ವಹಿವಾಟು ನಡೆಸುತ್ತಿರುವ ಕನ್ಸಾಲಿಡೇಟೆಡ್ ಕಾಫಿ ಸಂಸ್ಥೆ ಆಂಧ್ರ ಪ್ರದೇಶದಲ್ಲಿ ಇನ್ಸಂಟ್ ಕಾಫಿ ತಯಾರಿಕಾ ಘಟಕವೊಂದನ್ನು ಹೊಂದಿದ್ದು ಭಾರತ ಹಾಗೂ ವಿದೇಶಗಳ ಮಾರುಕಟ್ಟೆಗಳಲ್ಲೂ ಅಧಿಪತ್ಯ ಹೊಂದಿದೆ.



'ಕಾಫಿ ಡೇ'ಯ ವೇಗದ ಗುತ್ತೇದಾರ ಸಿದ್ದಾರ್ಥ

ಆಂತರಿಕ ಮಾರುಕಟ್ಟೆಯ ಶೇ.11 ಪಾಲು ಕನ್ಸಾಲಿಡೇಟೆಡ್ ಕಾಫಿ ಕಂಪೆನಿಯ ಹಿಡಿತದಲ್ಲಿದೆ. ಕೂರ್ಗ್, ಕೂರ್ಗ್ ಡಬ್ಬಲ್ ರೋಸ್ಟ್, ಟಾಟಾ ಕಾಫಿ, ಟಾಟಾ ಕೊಪ್ಪಿ ಬ್ರಾಂಡ್‌ಗಳಲ್ಲಿ ಕಾಫಿ ಪುಡಿ ಮಾರಾಟವಾಗುತ್ತಿದೆ.

ಬಿರ್ಲಾ ಗುಂಪೂ ಕಾಫಿ ವ್ಯಾಪಾರದಲ್ಲಿ ಹಿಂದಿಲ್ಲ. ಮಂಜುಶ್ರೀ ಪ್ಲಾಂಟೇಶನ್ಸ್ ಬಿರ್ಲಾರದ್ದಾಗಿದೆ. ಇದರ ಅಡಿಯಲ್ಲಿ 25,000 ಹೆಕ್ಟರ್ ಕಾಫಿ, ಚಹಾ ತೋಟಗಳಿವೆ.

ನಮ್ಮ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಎಸ್.ಎಮ್.ಕೃಷ್ಣರವರ ಅಳಿಯ ಸಿದ್ದಾರ್ಥ ಇಂದು ಕಾಫಿ ಲೋಕದಲ್ಲಿ ಅತಿ ವೇಗದಲ್ಲಿ ಬೆಳೆದುಬರುತ್ತಿರುವ ಮತ್ತೊಬ್ಬ ಗುತ್ತೇದಾರಿಯಾಗಿದ್ದಾನೆ. ಅವನ ಒಡೆತನದಲ್ಲಿರುವ ಅಮಾಲ್ಗಮೇಟೆಡ್ ಬೀನ್ ಕಂಪೆನಿ ಇಂದಿನ ಬಿಕ್ಕಟ್ಟಿನ ಮಧ್ಯದಲ್ಲೇ 5000 ಎಕ್ರೆ ತೋಟ ಕೊಂಡಿದೆ. ಭಾರತದಲ್ಲೇ ಒಂದು ಪ್ರಮುಖ ರಫ್ತುದಾರ ಕಂಪೆನಿಯಾಗಿ ಅದು ಬೆಳೆಯುತ್ತಿದೆ. ಟಾಟಾರಿಗಿಂತಲೂ ಹೆಚ್ಚಿನ ಸಂಸ್ಕರಣ ಶಕ್ತಿ ಈ ಕಂಪೆನಿಗೆ ಇದೆ.

ಟಾಟಾರ ಬಾರಿಸ್ಟಾ ಕಾಫಿಯಂತೆ ಕೆಫೆ ಕಾಫಿ ಡೇ ಎಂಬ ಬ್ರಾಂಡ್ ಅಂಗಡಿಗಳನ್ನು ಇವರೂ ತೆರೆದಿದ್ದಾರೆ.



ಇಂದಿನ ಬಿಕ್ಕಟ್ಟಿನ ಸಂದರ್ಭ ಈ ಬಹುರಾಷ್ಟ್ರೀಯ ಕಂಪೆನಿಗಳಿಗೆ, ಟಾಟಾ, ಬಿರ್ಲಾನಂತಹಾ ಗುತ್ತೇದಾರಿಗಳಿಗೆ ಕಡಿಮೆ ಬೆಲೆಯಲ್ಲಿ ಕಾಫಿ ಬೆಳೆ ಸಿಗುವುದರಿಂದ ಈ ಪರಿಸ್ಥಿತಿಗಾಗಿ ಅವರು ಹವಣಿಸುತ್ತಾರೆನ್ನುವುದು ಸ್ಪಷ್ಟವಾಗಿದೆ.

ಕಾಫಿ ಬೆಳೆಯುವ ಮುಖ್ಯ ಪ್ರದೇಶಗಳು

- ಕರ್ನಾಟಕ, ಕೇರಳ, ತಮಿಳುನಾಡು.

ಇತರ ಪ್ರದೇಶಗಳು - ಆಂಧ್ರ

ಗಮನಾರ್ಹವಲ್ಲದ ಪ್ರದೇಶಗಳು - ಅಸ್ಸಾಂ, ಒರಿಸ್ಸಾ, ಮೀಜೋರಾಂ, ಅರುಣಾಚಲ ಪ್ರದೇಶ, ತ್ರಿಪುರ, ನಾಗಲ್ಯಾಂಡ್ ಮತ್ತು ಮೇಘಾಲಯ

ಅರೇಬಿಕಾ ಬೆಳೆಯುವ ಪ್ರದೇಶಗಳು - ಕರ್ನಾಟಕ - ಬೆಳೆದ ಪ್ರದೇಶ 1,10,260 ಹೆ. 31.8 ಶೇ.

ಉತ್ಪಾದನೆ - 90,430 ಮೆ.ಟನ್ 82.2ಶೇ

ತಮಿಳುನಾಡು 25,018 ಹೆ. 7.2 ಶೇ.

ಉತ್ಪಾದನೆ 16,750 ಮೆ.ಟನ್ 13.8 ಶೇ

ಕರ್ನಾಟಕ ಮತ್ತು ತಮಿಳುನಾಡು ಒಟ್ಟಾಗಿ ಶೇ 96 ಅರೇಬಿಕಾ ಬೆಳೆಯುತ್ತವೆ.

ರೋಬಸ್ಟಾ ಬೆಳೆಯುವ ಪ್ರದೇಶಗಳು

ಕರ್ನಾಟಕ - 91,515 ಹೆಕ್ಟೇರನಲ್ಲಿ (26.4 ಶೇ) ಬೆಳೆಯುತ್ತದೆ. 1,09,240 ಮೆಟ್ರಿಕ್ ಟನ್ (60.8ಶೇ) ಬೆಳೆಯುತ್ತದೆ. ಕೇರಳ-80,646 ಹೆಕ್ಟೇರ್‌ನಲ್ಲಿ(23.2ಶೇ) 65,270 ಮೆ.ಟನ್(36.4 ಶೇ) ಬೆಳೆಯುತ್ತದೆ. ಅಂದರೆ ಕೇರಳ ಮತ್ತು ಕರ್ನಾಟಕಗಳಲ್ಲಿ ಒಟ್ಟಾರೆ ಶೇ 97.2 ರೋಬಸ್ಟಾ ಬೆಳೆಯುತ್ತದೆ.

Non Traditional Areas ನಲ್ಲಿ 3279(0.9ಶೇ) 160 ಮೆ.ಟನ್ (0.1ಶೇ) ಬೆಳೆಯುತ್ತದೆ.

Non Convential Areas ನಲ್ಲಿ ಏನೂ ಇಲ್ಲ.

ಹೀಗೆ ಕಾಫಿ ಬೆಳೆಯುವ ಪ್ರಮುಖ ರಾಜ್ಯಗಳು ಕರ್ನಾಟಕ, ಕೇರಳ ಮತ್ತು ತಮಿಳುನಾಡು. 22 ಹೆಕ್ಟೇರ್ ಮತ್ತು ಅದಕ್ಕಿಂತ ಕಡಿಮೆ ಇರುವವರು ಇಡೀ ದೇಶದಲ್ಲಿ 1,20,252 ಹಿಡುವಳಿಗಳಿದ್ದು ಶೇ 85.7 ರಷ್ಟು ಬರುತ್ತಾರೆ. ಈ ವಿಭಾಗದ ಕೈಯಲ್ಲಿರುವ ಕಾಫಿ ಬೆಳೆಯುವ ಪ್ರದೇಶದ ವಿಸ್ತೀರ್ಣ 1,29,091 ಹೆ. (42.2 ಶೇ).

10 ಹೆಕ್ಟೇರ್ ಮತ್ತು ಅದಕ್ಕಿಂತ ಕಡಿಮೆ ಇರುವವರ ಸಂಖ್ಯೆ 1,37,643(ಶೇ 98) ಮತ್ತು ಬೆಳೆಯುವ ಪ್ರದೇಶದ ವಿಸ್ತೀಣ ಶೇ 60.

2 ಹೆಕ್ಟೇರ್ ಮತ್ತು ಅದಕ್ಕಿಂತ ಕಮ್ಮಿ ಇರುವ ಹಿಡುವಳಿಗಳು ಕರ್ನಾಟಕದಲ್ಲಿ 27,109, ಕೇರಳದಲ್ಲಿ 71,245 ತಮಿಳುನಾಡಿನಲ್ಲಿ 11.396 ಇತರೆಡೆ 10,502 ಒಟ್ಟು 1,20,252

10 ಹೆಕ್ಟೇರ್ ಮತ್ತು ಅದಕ್ಕಿಂತ ಕಡಿಮೆ ಇರುವ ಹಿಡುವಳಿಗಳು ಕೇರಳದಲ್ಲಿ 75,916 ಕರ್ನಾಟಕದಲ್ಲಿ 37,849, ತಮಿಳುನಾಡಿನಲ್ಲಿ 13,370 ಇತರೆಡೆ 10,508 ಒಟ್ಟು 1,37,643.

...ಮೌಂಟ್ ಕಾರ್ಮಿಕರು ಹೋರಾಟದ ಕಣದಲ್ಲಿ

...ಷ್ಟವೇತನ ಮತ್ತು ಇತರೆ ವಿವಿಧ ಕಾರ್ಮಿಕ ಕಾಯ್ದೆಗಳ ಸೌಲಭ್ಯಗಳನ್ನು ಸಿ.ಐ.ಟಿ.ಯು ...ಘಟನೆಯಡಿ ಸಂಘಟಿತರಾಗಿ ಒತ್ತಾಯಿಸಿದ್ದಕ್ಕೆ ಬ್ಲೂ ಮೌಂಟನ್ ಎಸ್ಟೇಟಿನ ನೂರಾರು ಕಾರ್ಮಿಕರಿಗೆ ...ಟಮಾಲೀಕರು ಕೆಲಸ ನಿರಾಕರಿಸಿರುವುದರಿಂದ ಕಳೆದ ಮೂರು ತಿಂಗಳಿಂದ ಕೆಲಸ ಕಳೆದುಕೊಂಡ ...ರ್ಮಿಕರು ತೀರ ಸಂಕಷ್ಟದ ಪರಿಸ್ಥಿತಿ ಮಾಲೀಕರ ಕುತಂತ್ರಗಳನ್ನು ಎದುರಿಸುತ್ತಾ ತಮ್ಮ ನ್ಯಾಯಬದ್ಧ ...ಡಿಕೆಗಳಿಗಾಗಿ ದೃಢ ಹೋರಾಟ ನಡೆಸುತ್ತಿದ್ದಾರೆ.

...ಲ್ಲಿ ಮೌಂಟನ್ ಎಸ್ಟೇಟ್‌ನ. ...ಗಳೂರು ನಗರದಿಂದ ಸುಮಾರು 30 ...ಮೀಟರ್ ದೂರದಲ್ಲಿ ತರೀಕೆರೆ ...ಲ್ಲೂಕಿನಲ್ಲಿದೆ. ಈ ತೋಟ ಸರ್ಕಾರಿ ಭೂಮಿ ...ವರಿಯ ಪ್ರದೇಶವು ಸೇರಿ ಸುಮಾರು ...0 ಎಕ್ರೆ ವಿಸ್ತೀರ್ಣ ಹೊಂದಿದೆ. ಬ್ಲೂ ...ಟನ್ ಈಸ್ ಮತ್ತು ಬ್ಲೂ ಮೌಂಟನ್ ವೆಸ್ಟ್ ... ಎರಡು ಡಿವಿಜನ್ ಹೊಂದಿರುವ ಈ ...ಟನಲ್ಲಿ 9 ತೋಟಗಳಿವೆ. ಸಾವಿರಾರು ...ರ್ಮಿಕರು ನಿರಂತರವಾಗಿ ದಿನನಿತ್ಯ ಕೆಲಸ ...ಸುತ್ತಾ ಬರುತ್ತಿದ್ದರೂ, ಖಾಯಂ ಕಾರ್ಮಿಕರ ... ಕೇವಲ ಸುಮಾರು 400. ಇವರಿಗೆ ...ಷ್ಟು ಕರ್ನಾಟಕ ಪ್ಲಾಂಟರ್ಸ್ ...ಸೋಸಿಯೇಷನ್‌ನ ನಿರ್ದೇಶನದಂತೆ ಸಂಬಳ ...ಭ್ಯಗಳು ಸಿಕ್ಕುತ್ತವೆ. ಈ ಕಾರ್ಮಿಕರು ...ಯುಸಿ ನೇತೃತ್ವದ ಸಂಘಟನೆಯಲ್ಲಿ ...ವು ವರ್ಷಗಳಿಂದ ಇದ್ದಾರೆ.

...ದರೆ ಹಂಗಾಮಿ, ಚಂಗೂಲಿಯೆಂಬ ...ರಿನಲ್ಲಿ ದುಡಿಯುವ ನೂರಾರು ...ರ್ಮಿಕರಿಗೆ ಯಾವ ಸಂಘಟನೆಯೂ ಇರಲಿಲ್ಲ. ...ಸರ್ಕಾರ ವರದಿ ಮಾಡಿರುವ ಕನಿಷ್ಠ ...ನಕ್ಕಿಂತ ದಿನಕ್ಕೆ ಅಂದಾಜು ರೂ.20/- ...ಮೆ ಕೂಲಿ. ಇದನ್ನು ಬಿಟ್ಟರೆ ಇನ್ನು ...ವುದೇ ಕಾರ್ಮಿಕ ಸೌಲಭ್ಯಗಳು ಕೊಡುತ್ತಿರಲಿಲ್ಲ. ಒಂದು ದಿನ ಕೆಲಸ ಮಾಡಿದರು ವೇತನ ಚೀಟಿ ನೀಡಬೇಕೆಂದಿದ್ದರೂ ವೇತನ ಚೀಟಿ ಇಲ್ಲ. ಭವಿಷ್ಯನಿಧಿ ಯೋಜನೆಯಡಿ ಸದಸ್ಯರಾಗಿ ಸೇರಿಸದೆ ಇರುವುದರಿಂದ ಇರುವ ಲೋಪದೋಷಗಳ ಮಧ್ಯೆಯು ನಿವೃತ್ತರಾದಾಗ ಒಂದಿಷ್ಟು ಭವಿಷ್ಯನಿಧಿ, ಪ್ರತಿತಿಂಗಳು ಪೆನ್ಷನ್ ಸಿಕ್ಕುವುದು ಇಲ್ಲ. ಸರ್ವಿಸ್ ಗ್ರಾಚ್ಯುಟಿ, ಬೋನಸ್ಸು, ವೈದ್ಯಕೀಯ ಸೌಲಭ್ಯವಿಲ್ಲದರಿಂದಲೂ ಈ ಕಾರ್ಮಿಕರು ವಂಚಿತರು. ಇಲ್ಲಿಯ ಕಾರ್ಮಿಕರ ಪರಿಸ್ಥಿತಿ 1956 ರ ಹಿಂದೆ ರಾಜ್ಯದ ತೋಟಗಳ ಪರಿಸ್ಥಿತಿ ಹೇಗೆ ಇತ್ತೋ ಆ ರೀತಿ ಇವೇ. ಆದರೆ ಸ್ವರೂಪ ಮಾತ್ರ ಸ್ವಲ್ಪ ಬದಲಾವಣೆ.

ಸಂತವೇರಿ ಗ್ರಾಮದಲ್ಲಿ ಕಳೆದ ಮೂರು ನಾಲ್ಕು ವರ್ಷಗಳ ಹಿಂದೆ ಪ್ರಾರಂಭವಾದ ಡಿವೈಎಫ್ಐ ಸಂಘಟನೆಯ ಸದಸ್ಯರು ಸಿಐಟಿಯು ಸಂಘಟನೆಯೊಡನೆ ಸಂಪರ್ಕ ಹೊಂದಿದ್ದರಿಂದ ಅವರಿಗೆ ಅವರ ಕುಟುಂಬದವರ ಮತ್ತು ನೆರೆಹೊರೆಯ ಕಾರ್ಮಿಕರು ಬ್ಲೂಮೌಂಟನ್ ಎಸ್ಟೇಟಿನಲ್ಲಿ ಹೇಗೆ ಶೋಷಣೆಗೊಳಪಟ್ಟಿದ್ದಾರೆ? ತೋಟದೊಳಗೆ ಖಾಯಂ ಕಾರ್ಮಿಕರು ಸಂಘಟಿತರಾಗಿರುವ ಎಐಟಿಯುಸಿ ನೇತೃತ್ವದ ಸಂಘಟನೆ ಹೇಗೆ ವ್ಯವಸ್ಥಿತವಾಗಿ ತೋಟ ಮಾಲೀಕರೊಡನೆ ಶಾಮೀಲಾಗಿ ಬಹುಸಂಖ್ಯೆಯ ಕಾರ್ಮಿಕರನ್ನು ಅತೀವ ಶೋಷಣೆಗೊಳಪಡಿಸಿದ್ದಾರೆ ಎಂದು ಮನವರಿಕೆಯಾಗಿದ್ದುದರಿಂದ ಹತ್ತಾರು ವರ್ಷಗಳಿಂದ ಹಂಗಾಮಿ ಹೆಸರಿನಲ್ಲಿ ದುಡಿಯುವ ಕಾರ್ಮಿಕರನ್ನು ಸಂಪರ್ಕಿಸಿ ಸಿಐಟಿಯು ಸಂಘಟನೆಯಡಿ ಸಂಘಟಿಸಲು ಶ್ರಮಿಸಿದರು. ಅವರ ಶ್ರಮದ ಫಲವಾಗಿ ಸುಮಾರು 140 ಕಾರ್ಮಿಕರನ್ನು ಸಿಐಟಿಯು ಸಂಘಟನೆಯಡಿ ಸಂಘಟಿಸಲು ಸಾಧ್ಯವಾಯ್ತು.

ಸಿಐಟಿಯು ಸಂಘ ಈ ಕಾರ್ಮಿಕರ ಸಮಸ್ಯೆಗಳ ಬಗೆ ಆಡಳಿತ ಮಂಡಳಿಯವರಿಗೂ ಬರೆದರೂ ಪ್ರಯೋಜನವಾಗದಿದ್ದರಿಂದ ಹಾಸನದ ಡೆಪ್ಯೂಟಿ ಲೇಬರ್ ಕಮಿಷನರ್‌ರವರಿಗೆ ಬರೆದರು. ಸದರಿ ಆಯುಕ್ತರು ಕೂಡಲೇ ಈ ಬಗ್ಗೆ ಕ್ರಮವಹಿಸಲು ತರೀಕೆರೆ ಹಿರಿಯ ಕಾರ್ಮಿಕ ನಿರೀಕ್ಷಕರು ಮತ್ತು ಚಿಕ್ಕಮಗಳೂರು ಕಾರ್ಮಿಕ ಅಧಿಕಾರಿಯವರಿಗೆ ಬರೆದರು. ಸದರಿ ಅಧಿಕಾರಿ ಕ್ರಮ ಪ್ರಾರಂಭಿಸುತ್ತಿದ್ದಂತೆ ಚಂಗೂಲಿ ಹೆಸರಿನಲ್ಲಿ ದುಡಿಯುತ್ತಿದ್ದ 500-600 ಕಾರ್ಮಿಕರಿಗೆ ಡಬ್ಲ್ಯು.ಎಫ್.ಬಿ-2005 ರಿಂದ ಕೆಲಸ ನಿಲ್ಲಿಸಿದ್ದಾರೆ.

ಅಲ್ಲಿಂದೀಚೆಗೆ ಸಿಐಟಿಯು ಅಡಿಯಲ್ಲಿ ಸಂಘಟಿತರಾಗಿರುವ ಕಾರ್ಮಿಕರ ಐಕ್ಯತೆ ಒಡೆಯಲು ಎಐಟಿಯುಸಿ ಕಾರ್ಯಕರ್ತರು, ಮುಖಂಡರು, ಸ್ಥಳೀಯ ಡಿ.ಎಸ್.ಎಸ್ ಮುಖಂಡರುಗಳು ಮಾಲೀಕರೊಡನೆ ಶಾಮಿಲಾಗಿ ನಿರಂತರವಾಗಿ ನಾನಾ ತರಹದ ಭಯ ಹುಟ್ಟಿಸುವುದು, ಆಶೆ ಆಮಿಷ ತೋರಿಸುವ ಮೂಲಕ ಶತಪ್ರಯತ್ನ ನಡೆಸುತ್ತಿದ್ದಾರೆ.

ಆದರೆ. ಕಳೆದ ಮೂರು ತಿಂಗಳಿನಿಂದ ಸಿಐಟಿಯು ಸಂಘದಡಿ ಸದಸ್ಯರಾಗಿ ಕೆಲವು ಹೋರಾಟಗಳಲ್ಲಿ ಭಾಗವಹಿಸಿದ್ದ ಈ ಕಾರ್ಮಿಕರು ಈ ಕಾರ್ಮಿಕದ್ರೋಹಿಗಳ ಯಾವುದೇ ಪಿತೂರಿಗೂ ಬೆಂಬಲಿಸದೆ ತಮ್ಮ ಹೋರಾಟವನ್ನು ಮುಂದುವರಿಸಿದ್ದಾರೆ. 1.6.2005 ರಿಂದ 6.6.2005ರವರೆಗೆ ತೋಟದ ಗೇಟಿನ ಮುಂಬಾಗ ಧರಣಿ ಸತ್ಯಾಗ್ರಹ ಮಾಡುವ ಮೂಲಕ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿದ್ದಾರೆ. ಇದು ತೋಟದ ಮಾಲಿಕರಿಗೆ ಮತ್ತು ಎಐಟಿಯುಸಿ ಮುಖಂಡರಿಗೆ ನುಂಗಲಾರದ ತುತ್ತಾಗಿದೆ.

ಸದರಿ ತೋಟದ ಮಾಲೀಕ ಅತಿ ಶ್ರೀಮಂತ ಪ್ಲಾಂಟರ್ ಮಾತ್ರವಲ್ಲ ಆಡಳಿತ ನಡೆಸುವ ಪಕ್ಷದ ಪ್ರಭಾವ ಇರುವ ವ್ಯಕ್ತಿಯಾಗಿದ್ದಾರೆ. ಜೊತೆಗೆ ಎಐಟಿಯುಸಿ ಮುಖಂಡರುಗಳ ಸಹಾಯ ನಿರಂತರ ಸಿಐಟಿಯು ಸಂಘಟನೆಯ ವಿರುದ್ಧ ಅಪಪ್ರಚಾರ.

ಸೌಹಾರ್ದ ಬೆಂಬಲ ತುರ್ತು ಅಗತ್ಯ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಿಐಟಿಯು ಸಂಘಟನೆಯು ಈಗ ಬೆಳೆಯುತ್ತಿದೆ. ಅಂತಹದರಲ್ಲಿ ಸಂಘಟಿತರಾಗಿ ಹೋರಾಟ ನಿರತ ಕೆಲಸ ಕಳೆದುಕೊಂಡಿರುವ ಈ ತೋಟದ ಕಾರ್ಮಿಕರಿಗೆ ರಾಜ್ಯದ ಇತರೆ ವಿಭಾಗದ ಕಾರ್ಮಿಕರ-ನೌಕರರ ಸೌಹಾರ್ದ ಬೆಂಬಲ, ಸಹಕಾರ ಬಹಳ ಮುಖ್ಯ. ಅದೇ ಈ ಕಾರ್ಮಿಕರ ಮನೋಸ್ಥೈರ್ಯವನ್ನುಳಿಸಿ ತಮ್ಮ ಬೇಡಿಕೆಯನ್ನು ಪಡೆಯಲು ಹೋರಾಟ ಮುಂದುವರಿಸಲು ಸಾಧ್ಯ.

ವಿ.ಸುಕುಮಾರ

ಐಸೆಕ್ ಸಮಿತಿ ವರದಿ ಎಂಬ ಪರ್ವತ ಪ್ರಸವ

ಅಗಾಧ ಮಾಹಿತಿಗಳನ್ನು ಕಲೆಹಾಕಿರುವ ಐಸೆಕ್ ಸಮಿತಿಯು ಬೀಡಿ ಕಾರ್ಮಿಕರ ಕನಿಷ್ಠ ಕೂಲಿಯಂತಹ ಪ್ರಶ್ನೆಯಲ್ಲಿ ತೋರಿರುವುದು ಅಗಾಧ ಅಜ್ಞಾನವನ್ನು. ಇದು ಸರ್ಕಾರದ ಇಚ್ಛಾಶಕ್ತಿಯ ಪ್ರತಿಫಲನವೇ? ಬೀಡಿಕಾರ್ಮಿಕರ ಕುರಿತು ಐಸೆಕ್ ಸಮಿತಿಯ ಶಿಫಾರಸುಗಳ ಬಗ್ಗೆ ಆರಂಭಿಕ ಟಿಪ್ಪಣಿಗಳು ಸಿಐಟಿಯು ವಿನ ರಾಜ್ಯ ಅಧ್ಯಕ್ಷರಿಂದ.

ಬಿ.ಮಾಧವ

ಇಂಗ್ಲಿಷಿನಲ್ಲಿ "Mountain delivered a mouse" (ಪರ್ವತವು ಇಲಿಯನ್ನು ಹೆತ್ತಿತು) ಎಂಬ ಗಾದೆಯಿದೆ. ಪರ್ವತವು ಗರ್ಭಧರಿಸಿ ಒಂದು ದೊಡ್ಡ ಬೆಟ್ಟವನ್ನು ಹೆರಬಹುದೆಂದು ಜನರು ಕಾದಿದ್ದರೆ, ಅಬ್ಬಾ! ಕೊನೆಗೂ ಹೆರಿಗೆಯಾಯಿತು! ಹೆತ್ತದ್ದು ಮಾತ್ರ ಇಲಿಯನ್ನು! ಬೀಡಿ ಕೈಗಾರಿಕೆಯ ಕುರಿತು ಅಧ್ಯಯನ ನಡೆಸುವ ಕೆಲಸವನ್ನು ಕರ್ನಾಟಕ ಸರಕಾರವು ಇನ್‌ಸ್ಟಿಟ್ಯೂಟ್ ಫಾರ್ ಸೋಶಿಯಲ್ ಅಂಡ್ ಇಕನಾಮಿಕ್ ಚೇಂಜ್ (ಐಸೆಕ್) ಎಂಬ ಸಂಸ್ಥೆಗೆ ವಹಿಸಿಕೊಟ್ಟಿತ್ತು. ಸರಕಾರದ ಖಜಾನೆಯಿಂದ ಕೆಲವು ಲಕ್ಷ ರೂಗಳನ್ನು ಇದಕ್ಕಾಗಿ ವ್ಯಯಿಸಲಾಯಿತೆಂಬುದನ್ನು ನೆನಪಿನಲ್ಲಿಡಬೇಕು. ಸಮಿತಿಯ ನೇಮಕಾತಿಯನ್ನು 2004ರ ಜನವರಿ 29ರಂದು ಮಂಗಳೂರಿನಲ್ಲಿ ಜರುಗಿದ ಸಭೆಯೊಂದರಲ್ಲಿ ಅಂದಿನ ಕಾರ್ಮಿಕ ಸಚಿವ ಕಮರುಲ್ ಇಸ್ಲಾಂ ಅವರು ಘೋಷಿಸುತ್ತಾ, ಸಮಿತಿ ಆರು ತಿಂಗಳುಗಳಲ್ಲಿ ವರದಿ ನೀಡಲಿದೆಯೆಂದೂ, ಬೀಡಿ ಕಾರ್ಮಿಕರ ಕನಿಷ್ಟ ಕೂಲಿ, ತುಟ್ಟಿ ಭತ್ತೆ ಮತ್ತಿತರ ಪ್ರಶ್ನೆಗಳನ್ನು ಆ ವರದಿ ಬಂದ ನಂತರ ಕೈಗೆತ್ತಿಕೊಳ್ಳಲಾಗುವುದೆಂದೂ ಹೇಳಿದ್ದರು. ಅಂತೂ ಆರು ತಿಂಗಳಲ್ಲದಿದ್ದರೂ, ಒಂದು ವರ್ಷದ ನಂತರ 2005ರ ಫೆಬ್ರವರಿ ತಿಂಗಳಲ್ಲಿ ಐಸೆಕ್ ಸಮಿತಿಯು ಕರ್ನಾಟಕ ಸರಕಾರದ ಕಾರ್ಮಿಕ ಇಲಾಖೆಗೆ ವರದಿ ಸಲ್ಲಿಸಿದೆ.

ಮೇಧಾವಿಗಳು ಮತ್ತು ಅಧಿಕಾರಿಗಳನ್ನೊಳಗೊಂಡ ಒಂದು ತಂಡವು ಸಂಶೋಧನಾ ಸಲಹಾ ಸಮಿತಿಯಾಗಿದ್ದುಕೊಂಡು ಅಧ್ಯಯನಕ್ಕೆ ಮಾರ್ಗದರ್ಶನ ನೀಡಿದೆಯೆಂದು ವರದಿಯ ಆರಂಭದ ವಾಕ್ಯದಲ್ಲೇ ಕೃತಜ್ಞತೆ ವ್ಯಕ್ತಪಡಿಸಿದುದನ್ನು ಓದಿದಾಗ ವರದಿಯ ಮೇಲೆ ಗೌರವಾದರಗಳು ಮೂಡಿ ಬರುವುದು ಸ್ವಾಭಾವಿಕ ಮಾತ್ರವಲ್ಲದೆ ಆ ವಾಕ್ಯದ ಉದ್ದೇಶವೂ ಅದೇ ಆಗಿರುತ್ತದೆ. ಸಮಿತಿಯು ಬಹಳಷ್ಟು ಅಧಿಕೃತ ಮಾಹಿತಿಗಳನ್ನು ಸಂಗ್ರಹಿಸಿದೆ ಎಂಬುದು ಸಂತೋಷದ ವಿಷಯ. ಆದರೆ ಬೀಡಿ ಕಾರ್ಮಿಕರು ಆತುರದಿಂದ ಕಾಯುತ್ತಿರುವ ಕನಿಷ್ಟ ಕೂಲಿಯ ಪ್ರಶ್ನೆಯಲ್ಲಿ ಐಸೆಕ್ ಸಮಿತಿಯ ತಿಳುವಳಿಕೆಯು ಅದರ ಅಗಾಧ ಅಜ್ಞಾನವನ್ನು ಪ್ರದರ್ಶಿಸಿದೆ.

ಕನಿಷ್ಟ ಕೂಲಿಯ ಕುರಿತು ಮಾಲಕರ ವಾದವನ್ನು ಪುಟ 62ರಲ್ಲಿ ಬಾಕ್ಸ್‌ನಲ್ಲಿ ಕೊಡಲಾಗಿದೆ. ಕರ್ನಾಟಕ ಸರಕಾರ ನಿಗದಿಪಡಿಸಿದ ಕನಿಷ್ಟ ಕೂಲಿ ಈಗ (ಅಂದರೆ 2004ರ ಆರಂಭದಲ್ಲಿ) ಸಾವಿರ ಬೀಡಿಗೆ ರೂ. 70.70 ಆಗುತ್ತದೆ. ಇತರ ಸವಲತ್ತುಗಳನ್ನು (ಶೇಕಡಾ 28, ಅಂದರೆ ರೂ. 15.43) ಕಳೆದು ಕಾರ್ಮಿಕರಿಗೆ ಉಳಿದ ರೂ. 55.25 ಸಿಗುತ್ತದೆ ಎಂದು ಅದರಲ್ಲಿ ಹೇಳಿದ್ದಾರೆ. ಸಮಿತಿಯು ಮಾಲಕರ ಈ ವಾದವನ್ನು ತಿರಸ್ಕರಿಸಲಿಲ್ಲ ಮಾತ್ರವಲ್ಲದೆ, ಅದೇ ಸರಿಯಾದ ಕ್ರಮವೆಂಬಂತೆ ಮುಂದೆ ಪುಟ 98 ಮತ್ತು 99ರಲ್ಲಿ ಬೀಡಿ ಕಾರ್ಮಿಕರ ವಿವಿಧ ಸವಲತ್ತುಗಳಿಗಾಗಿ ಶೇಕಡಾ 28 ಕಡಿತ ಮಾಡಿದ ನಂತರ ಕೊಡಬೇಕಾದ ಶೇಕಡಾ 72ರ ಕುರಿತು ವಿಮರ್ಶಿಸಿದೆ. ಕಾನೂನು ಪ್ರಕಾರ ಕಾರ್ಮಿಕರ ಕೂಲಿಯಿಂದ ಭವಿಷ್ಯ ನಿಧಿಗೆ ಕಾರ್ಮಿಕರ ವಂತಿಗೆಯ ಬಾಬ್ತು ಶೇಕಡಾ 10 ಕಡಿತ ಮಾಡಬೇಕಾಗಿದೆ. ಭವಿಷ್ಯ ನಿಧಿಗೆ ಮಾಲಕರ ಪಾಲು 10 ಶೇಕಡಾ. ಮಾಲಕರೇ ಸೇರಿಸಿ ಭವಿಷ್ಯ ನಿಧಿಗೆ ಜಮಾ ಮಾಡಬೇಕು. ಇತರ ಸವಲತ್ತುಗಳಾದ ವಾರ್ಷಿಕ ರಜಾ ಸಂಬಳ (ಶೇ.5), ಹಬ್ಬದ ರಜಾ ಸಂಬಳ (ಶೇ. 3.00), ಬೋನಸ್ (ಶೇ. 8.33) ಇವುಗಳೆಲ್ಲಾ ಸೇರಿ ಶೇ. 26.33ನ್ನು ಕನಿಷ್ಟ ಕೂಲಿಗೆ ಅತಿರಿಕ್ತವಾಗಿ ಮಾಲಿಕರು ಭರಿಸಬೇಕು. ಕಾನೂನು ಪ್ರಕಾರ ಮಾಲಕರು ಕೊಡಬೇಕಾದ ಈ ಸವಲತ್ತುಗಳ ಕುರಿತು ಪ್ರಾಥಮಿಕ ಜ್ಞಾನವೂ ಐಸೆಕ್ ಸಮಿತಿಗೆ ಇರಲಿಲ್ಲವೆ?

ವರದಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು ಶ್ಲಾಘಿಸಲಾಗಿದೆ ಮತ್ತು ಕಾರ್ಮಿಕ ಸಂಘಗಳ ಪಾತ್ರ ನಗಣ್ಯವೆಂಬಂತೆ ಚಿತ್ರಿಸಲಾಗಿದೆ. ಸಮಿತಿಯ ಟ್ರೇಡ್ ಯೂನಿಯನ್ ವಿರೋಧಿ ಮನೋಭಾವ ಇಷ್ಟಕ್ಕೆ ಸೀಮಿತವಾಗಿಲ್ಲ.



ಹೋರಾಟದ ಹಾದಿಯಲ್ಲಿ ಬೀಡಿ ಕಾರ್ಮಿಕರು


ಚಿತ್ರ ಮಂಗಳೂರು

ಮುಂದುವರಿದು, ಪುಟ 253ರಲ್ಲಿ ವರದಿ ಹೀಗೆ ಹೇಳಿದೆ : "ಬೀಡಿ ಕಾರ್ಮಿಕರು ಕಾರ್ಮಿಕ ಸಂಘಗಳಲ್ಲಿ ವಿಶ್ವಾಸ ಮತ್ತು ನಂಬಿಕೆಯನ್ನು ಕಳಕೊಂಡಿದ್ದಾರೆ. ಟ್ರೇಡ್ ಯೂನಿಯನ್ ಪ್ರತಿನಿಧಿಗಳು ಭ್ರಷ್ಟರಾಗಿದ್ದಾರೆಂದು ಅನೇಕ ಕಾರ್ಮಿಕರು ಆರೋಪಿಸಿದ್ದಾರೆ. ಕೆಲವು ಕಂಟ್ರಾಕ್ಟರರು ಕಾರ್ಮಿಕ ಸಂಘಗಳನ್ನು ಆರಂಭಿಸಿದ್ದಾರೆ. ಇದರ ಪರಿಣಾಮವಾಗಿ ಕಾರ್ಮಿಕ ಸಂಘಗಳ ಮೇಲೆ ಕಾರ್ಮಿಕರ ವಿಶ್ವಾಸಾರ್ಹತೆ ಕಡಿಮೆಯಾಗಿದೆ" ಸರಕಾರದ ಹಣವನ್ನು ಉಪಯೋಗಿಸಿ ತಯಾರಿಸಲಾದ ಈ ವರದಿಯಲ್ಲಿ ಈ ರೀತಿಯ ದುಷ್ಟ ಪ್ರಚಾರಗಳನ್ನು ಮಾಡಿರುವುದು ಖಂಡನೀಯ. ಕಳೆದ 65 ವರ್ಷಗಳಿಂದ ಬೀಡಿ ಕಾರ್ಮಿಕರ ನಡುವೆ ನಿಸ್ವಾರ್ಥ ಮನೋಭಾವದಿಂದ ದುಡಿದು ಅಪಾರ ತ್ಯಾಗಬಲಿದಾನಗಳನ್ನು ಮಾಡಿದ ನೂರುಗಟ್ಟಲೆ ಎಡಪಂಥೀಯ ಟ್ರೇಡ್ ಯೂನಿಯನ್ ಕಾರ್ಯಕರ್ತರ ಮೇಲೆ ಐಸೆಕ್ ಸಮಿತಿಯವರು ದುಷ್ಟ ಧಾಳಿಯನ್ನು ನಡೆಸಿದ್ದಾರೆ. ಈ ನೀಚ ಕೃತ್ಯಕ್ಕಾಗಿ ಅವರು ತಕ್ಷಣ ಕಾರ್ಮಿಕ ಸಂಘಟನೆಗಳ ಕ್ಷಮೆ ಕೇಳಬೇಕು. ಕಾರ್ಮಿಕ ಚಳುವಳಿಯಲ್ಲಿ ಭ್ರಷ್ಟರಿದ್ದಾರೆಂದು ಸಮಿತಿಯ ವಶದಲ್ಲಿ ಪುರಾವೆಗಳಿದ್ದರೆ ಅಂತಹ ವ್ಯಕ್ತಿಗಳ ಹೆಸರು ಸಮೇತ ಬಹಿರಂಗ ಪಡಿಸಲಿ. ಇಡೀ ಚಳುವಳಿಯ ಮೇಲೆ ಕೆಸರೆರೆಚುವ ಕೃತ್ಯವನ್ನು ಸಹಿಸಲು ಸಾಧ್ಯವಿಲ್ಲ.

ಕೊನೆಯದಾಗಿ, ಬೀಡಿ ಕಾರ್ಮಿಕರಿಗೆ ಸಲ್ಲತಕ್ಕ ಸವಲತ್ತುಗಳಿಗೆ ಸಂಬಂಧಿಸಿದಂತೆ ಐಸೆಕ್ ವರದಿಯಲ್ಲಿ ಪ್ರಕಟಿಸಲಾದ ಅಂಕೆ ಸಂಖ್ಯೆಗಳನ್ನು ಗಮನಿಸಬೇಕು. ಬೀಡಿ ಕೈಗಾರಿಕೆಯ ಅಸಂಖ್ಯ ಸಮಸ್ಯೆಗಳಿಗೆ ಪರಿಹಾರಗಳು ಸಿದ್ಧ ರೂಪದಲ್ಲಿ ಲಭ್ಯವಿದೆಯೆಂದು ಭಾವಿಸಲು ಸಾಧ್ಯವಿಲ್ಲ. ಕೈಗಾರಿಕೆ ಉಳಿಯಬೇಕೆಂದು ಕಾರ್ಮಿಕರು ಹೋರಾಟ ನಡೆಸುತ್ತಾ ಬಂದಿದ್ದಾರೆ. ಈ ಹೋರಾಟಗಳು ಮುಂದುವರಿಯುತ್ತವೆ. ಆದರೆ ಕಾರ್ಮಿಕರ ಕೂಲಿ ಮತ್ತು ಸವಲತ್ತುಗಳ ಕುರಿತು ಪರಿಶೀಲಿಸಬೇಕಾದ ಅಂಶವೆಂದರೆ ಮಾಲೀಕರ 'ಕೊಡುವ ಸಾಮರ್ಥ್ಯ' ಉತ್ಪಾದನಾ ವೆಚ್ಚಗಳ ಕುರಿತು ವರದಿಯಲ್ಲಿ, ರಾಜ್ಯದ ಪ್ರಮುಖ ಬೀಡಿ ಕಂಪೆನಿಯಾದ ಗಣೇಶ್ ಬೀಡಿಯ ಉದಾಹರಣೆಯನ್ನು ನೀಡಲಾಗಿದೆ. 2002-03ರ ಅಂಕೆ ಸಂಖ್ಯೆಗಳ ಪ್ರಕಾರ ಒಂದು ಸಾವಿರ ಬೀಡಿಗೆ ಬೇಕಾಗುವ ತಂಬಾಕಿಗೆ ಶೇಕಡಾ 4.35, ತೆಂಡು ಎಲೆಗೆ ಶೇಕಡಾ 11.03, ಪ್ಯಾಕಿಂಗ್ ಚಾರ್ಜ್ ಶೇಕಡಾ 1.98, ಕಂಟ್ರಾಕ್ಟರರ ಕಮಿಶನ್ ಶೇಕಡಾ 2.08, ಕಾರ್ಮಿಕರ ಕೂಲಿ ಶೇಕಡಾ 41.21, ಇತರ ಕಾರ್ಮಿಕರ ಕೂಲಿ ಶೇಕಡಾ 3.38, ಕೇಂದ್ರ ಅಬಕಾರಿ ಸುಂಕ ಶೇಡಾ 5, ರಖಂ ಮಾರಾಟಗಾರರ ಲಾಭ ಶೇಕಡಾ 12.64 ಎಂದು ಲೆಕ್ಕ ಹಾಕಲಾಗಿದೆ. (ಪುಟ 53). ಈಗ ಗಣೇಶ್ ಬಿಡಿಯ 25ರ ಕಟ್ಟು ರೂ. 4.50ಕ್ಕೆ ಮಾರಾಟವಾಗುತ್ತಿದೆ. ಅಂದರೆ ಸಾವಿರ ಬೀಡಿಗೆ ರೂ. 180 ಆಗುತ್ತದೆ. ಇದರಲ್ಲಿ ಶೇಕಡಾ 12.64 ಮಾಲಕರ ಲಾಭ ಎಂದರೆ ಒಂದು ಸಾವಿರ ಬೀಡಿಯಲ್ಲಿ ಮಾಲಕರಿಗೆ ಇತರ ಎಲ್ಲಾ ಖರ್ಚು ಕಳೆದು ರೂ. 22.75 ಲಾಭ ಉಳಿಯುತ್ತದೆ. ಗಣೇಶ ಬಿಡಿ ವರ್ಷಕ್ಕೆ ಎರಡು ಸಾವಿರ ಕೋಟಿಗಿಂತ ಹೆಚ್ಚು ಮಾರಾಟವಾಗುತ್ತಿದೆ. (ಪುಟ 302). ಸಾವಿರಕ್ಕೆ 22.75ರಂತೆ ವರ್ಷಕ್ಕೆ 45ಕೋಟಿ ರೂಪಾಯಿ ಲಾಭ ಸಿಗುತ್ತದೆ. ಈ ಮೊತ್ತದಿಂದ ಒಂದು ಭಾಗವನ್ನು ಉಪಯೋಗಿಸಿದರೆ ಕಾರ್ಮಿಕರಿಗೆ ನ್ಯಾಯೋಚಿತ ಸಲತ್ತುಗಳನ್ನು ನೀಡಲು ಯಾವ ತೊಂದರೆಯೂ ಇರಲಾರದು.

ಕಡಿಮೆ ಕೂಲಿಗೆ ದುಡಿಸಿ ಕಡಿಮೆ ಬೆಲೆಗೆ ಉತ್ಪನ್ನವನ್ನು ಮಾರಾಟ ಮಾಡುವ ಪಿಡುಗು ಬೀಡಿಗೆ ಸೀಮಿತವಾಗಿಲ್ಲ. ಅನೇಕ ಹೋಟೇಲುಗಳಲ್ಲಿ 3 ರೂಪಾಯಿಗೆ ಒಂದು ಕಪ್ ಚಹಾ ಸಿಗುತ್ತದೆ. ಬೇರೆಡೆ 4 ರೂಪಯಿ, 5 ರೂಪಾಯಿ ಇರುತ್ತದೆ. ಇವುಗಳಲ್ಲಿ ಕಾರ್ಮಿಕರ ಕೂಲಿಯಲ್ಲಿ ವಿಪರೀತ ತಾರತಮ್ಯ ಇರುತ್ತದೆ. ಬಟ್ಟೆ ಮಿಲ್ಲುಗಳಲ್ಲಿ ಕೂಲಿ ತಾರತಮ್ಯ ಮತ್ತು ಮಾರಾಟ ಬೆಲೆಗಳ ತಾರತಮ್ಯ ವಿವಿಧ ನಗರಗಳಲ್ಲಿ ಎದ್ದು ಕಾಣುತ್ತದೆ. ಅಸಂಖ್ಯ ಕೈಗಾರಿಕೆಗಳಲ್ಲಿ ಈ ಪರಿಸ್ಥಿತಿ ಇದೆ. ಇಡೀ ದೇಶದಲ್ಲಿ ಸಮಾನತೆ ಬೇಕೆಂದು ನಾವು, ಸಿಐಟಿಯು ನವರು ಹೋರಾಡುತ್ತಿದ್ದೇವೆ. ಆದರೆ ಅದು ಬರುವ ತನಕ ಬೀಡಿ ಕಾರ್ಮಿಕರು ತಮ್ಮ ಕನಿಷ್ಟ ಕೂಲಿಗಾಗಿ ಕಾದಿರಲು ಸಾಧ್ಯವಿಲ್ಲ.

ಕಾಂ॥ ಎ.ಆರ್.ಕೂಡಗಿ ನಿಧನ



ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಹಿರಿಯ ಕಾರ್ಯಕರ್ತ ಕಾಂ॥ ಎ.ಆರ್.ಕೂಡಗಿ ಜೂನ್ 5ರಂದು ಬೆಳಗ್ಗೆ ನಿಧನರಾದರು. ಬೀಡಿ ಕಾರ್ಮಿಕರ ಸಂಘಟನೆಯಲ್ಲಿ ಕೆಲಸ ಮಾಡುತ್ತ ಬಂದ ಎ.ಆರ್.ಕೂಡಗಿಯವರು ಜಿಲ್ಲೆಯ ಹಿರಿಯ ಕಮ್ಯುನಿಸ್ಟ್ ನಾಯಕರಾಗಿದ್ದ ಎನ್.ಕೆ.ಉಪಾಧ್ಯಾಯ, ಬಾಲಸಿಂಗ್ ಮಾಸ್ತರ ಮುಂತಾದವರ ಸಮಕಾಲೀನರಾಗಿದ್ದರು. "ಗೋವಾ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದ್ದ ಅವರು, ಸ್ವಾತಂತ್ರ ನಂತರದಿಂದ ಇಲ್ಲಿಯವರೆಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಪಕ್ಷ ನೀಡಿದ ಕರೆಗಳಾದ "ಜೈಲಭರೋ' ರಸ್ತೆ ತಡೆ, ಸರಕಾರಿ ಕಛೇರಿಗಳ ಪಿಕೆಟಿಂಗ್ ಮುಂತಾದ ಪ್ರಮುಖ ಹೋರಾಟಗಳಲ್ಲಿ ಭಾಗವಹಿಸಿ ಜೈಲಿಗೆ ಕೂಡಾ ಹೋಗಿ ಬಂದಿದ್ದರು.

ಜಿಲ್ಲೆಯ ಜ್ವಲಂತ ಸಮಸ್ಯೆಯಾಗಿರುವ ರೈಲ್ವೆ ಬ್ರಾಡಗೇಜಗೆ ಪರಿವರ್ತನೆಯ ಕೆಲಸ, ಕೃಷ್ಣಾ, ಭೀಮಾ ನೀರಾವರಿ ಯೋಜನೆಗಳ ಜಾರಿ, ಬರ ಪರಿಹಾರ ಜಾರಿ, ಮುಂತಾದವುಗಳಿಗಾಗಿಯೂ ನಡೆದ ಹೋರಾಟಗಳಲ್ಲಿ ಭಾಗವಹಿಸಿದ್ದರು.

ಬೀಡಿ ಕಾರ್ಖಾನೆಗಳು ಬಂದ್ ಆಗಿ ಹೋದ ನಂತರ ತೀವ್ರ ಬಡತನ ಅನುಭವಿಸುತ್ತಿದ್ದ ಅವರು ಪಾನ ಬೀಡಾದಲ್ಲಿ ಹಾಕುವ 'ಚಮನ' ತಯಾರಿಸಿ ಪಾನಬೀಡಾ ಅಂಗಡಿಗಳಿಗೆ ಹೋಗಿ ಮಾರಾಟ ಮಾಡಿ ಬಂದಾಗಲೇ ಮನೆಯವರೆಲ್ಲರ ಹೊಟ್ಟೆ ತುಂಬುತ್ತಿತ್ತು. ಇಂತಹ ಕಷ್ಟದ ಪರಿಸ್ಥಿತಿಯಲ್ಲಿಯೂ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಜನಪರ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದು ಇತರ ಕಾರ್ಯಕರ್ತರಿಗೆ ಮಾರ್ಗದರ್ಶಿಯಾಗಿತ್ತು.

ದೀರ್ಘಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ತಮ್ಮ 82ನೇ ವರ್ಷದಲ್ಲಿ ನಿಧನರಾದರು. ಪತ್ನಿ ರೋಷನಬಿ, 3 ಗಂಡು ಮಕ್ಕಳು, 4 ಹೆಣ್ಣು ಮಕ್ಕಳು ಮೊಮ್ಮಕ್ಕಳು ಅಪಾರ ಸಂಖ್ಯೆಯ ಬಂಧು ಬಳಗವನ್ನು ಅಗಲಿದ್ದಾರೆ.

ಶ್ರದ್ಧಾಂಜಲಿ : ಅಂದು ಸಾಯಂಕಾಲ 5 ಗಂಟೆಗೆ ಕರ್ನಾಟಕ ಪ್ರಾಂತ ರೈತ ಸಂಘ ಕಾರ್ಯಾಲಯದಲ್ಲಿ ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘ, ಯುವಜನ ಫೆಡರೇಷನ್, ಮುಂತಾದ ಸಂಘಟನೆಗಳು ಸಭೆ ಸೇರಿ ನಿಧನರಾದ ಎ.ಆರ್.ಕೂಡಗಿಯವರಿಗೆ ಶ್ರದ್ಧಾಂಜಲಿ ಸಲ್ಲಿಸಿತು. ಕಾಂ॥ ಭೀಮಶಿ ಕಲಾದಗಿಯವರು ಅಧ್ಯಕ್ಷತೆ ವಹಿಸಿದ್ದ ಈ ಶ್ರದ್ಧಾಂಜಲಿ ಸಭೆಯಲ್ಲಿ ಅಣ್ಣಾರಾಯ ಈಳಗೇರ, ಸುರೇಖಾ ರಜಪೂತ, ಲಕ್ಷ್ಮಿ ಮೈಲಾರಿ, ಬಸಲಿಂಗ ಕಪಾಲಿ, ಜಯಾ ಪವಾರ, ಮುಂತಾದ ಪ್ರಮುಖರು ಭಾಗವಹಿಸಿದ್ದರು. ಇದಕ್ಕೂ ಮೊದಲು ಎ.ಆರ್.ಕೂಡಗಿಯವರ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿ ಕೆಂಬಾವುಟ ಹೊದಿಸಿ ಗೌರವ ಸಲ್ಲಿಸಲಾಯಿತು.

ಮಾತುಕತೆಗೆಂದು ಕರೆದು ತಲವಾರಿನಿಂದ ಕಡಿದ ಬಜರಂಗದಳದ ಕ್ರಿಮಿನಲ್‌ಗಳು

ಇದೊಂದು ಸಾರ್ವಜನಿಕ ಮೈದಾನ. ಯಾರು ಆಡಬೇಕು - ಆಡಬಾರದು ಎಂದು ನಿರ್ಬಂಧಿಸಲು ಬಜರಂಗದಳಕ್ಕೆ ಅಧಿಕಾರ ಕೊಟ್ಟವರಾರು? ನೆಪಮಾಡಿ ಕುತಂತ್ರ ಹೂಡಿ ಡಿವೈಎಫ್‌ಐನ ಕಾರ್ಯಕರ್ತರ ಮೇಲೆ ಮಾರಣಾಂತಿಕ ಹಲ್ಲೆಯನ್ನು ಬಜರಂಗದಳ ನಡೆಸಿದೆ. ಈ ಕ್ರಿಮಿನಲ್ ಪಡೆಗೆ ಶಾಸಕ ಸುನಿಲ್ ಕುಮಾರ್ ಕುಮ್ಮಕ್ಕು ಬೇರೆ.........

ಕಾರ್ಕಳ ತಾಲೂಕಿನ ನಲ್ಲೂರು ಗ್ರಾಮದ ಪೇರಲ್ಕೆಯಲ್ಲಿ ಗ್ರಾಮದ ಯುವಜನರು ಸೌಹಾರ್ದಯುತವಾಗಿ ಆಟವಾಡುತ್ತಿದ್ದ ಸರಕಾರಿ ಮೈದಾನದಲ್ಲಿ ಬೇಕೆಂದೇ ಭಜರಂಗದಳದ ಕಾರ್ಯಕರ್ತರು ವಿವಾದಾತ್ಮಕ ವಿಷಯಗಳನ್ನೆತ್ತಿದರು. ಬಜರಂಗ ದಳದವರನ್ನು ಪ್ರಶ್ನಿಸಿದ ಡಿವೈಎಫ್‌ಐ ಕಾರ್ಯಕರ್ತರಿಗೆ ಮಾತುಕತೆಯ ನೆಪದಲ್ಲಿ ಮಾರಣಾಂತಿಕ ಹಲ್ಲೆಯನ್ನು ಈ ಪುಂಡರು ನಡೆಸಿದ್ದಾರೆ.

ನಲ್ಲೂರು ಗ್ರಾಮದ ಪೇರಲ್ಕೆ ಎಂಬಲ್ಲಿ ಸುಮಾರು 0.23 ಎಕ್ರೆ ಸರಕಾರಿ ಮೈದಾನದಲ್ಲಿ0.1 ಎಕ್ರೆ ಭೂಮಿಯಲ್ಲಿ ಕೊಡಮಣಿತಾಯ, ಬ್ರಹ್ಮ ಬೈದರ್ಕಳ, ಪಂಜುರ್ಲಿ ಎಂಬ ಭೂತಗಳ ಕಟ್ಟೆಯೊಂದಿದೆ. ಈ ಕಟ್ಟೆಯಲ್ಲಿ ಮೂರು ವರ್ಷಕ್ಕೊಮ್ಮೆ ಪೂಜೆ ಪುರಸ್ಕಾರಗಳು ನಡೆಯುತ್ತಿತ್ತು. ಬಂತಳ ಪುರಾತನ ಕಾಲದಿಂದಲೂ ಎರಡು ಮಾರಣೆಯ ಜೈನ ಮತ್ತು ಬಿಲ್ಲೀರ ಮನೆತನದ ವ್ಯಕ್ತಿಗಳು ಈ ದೈವ ಸಮಿತಿಯ ಗುರಿಕಾರರಾಗಿದ್ದುಕೊಂಡು ಕೆಲಸ ಕಾರ್ಯಗಳನ್ನು ನಡೆಸುತ್ತಿದ್ದರು. ಪರಿಸರದ ಎಲ್ಲಾ ಜಾತಿಯ ಜನರು (ಮುಸ್ಲಿಂ ಕ್ರೈಸ್ತರನ್ನು ಹೊರತುಪಡಿಸಿ) "ಕೊಡ್ತಿ ಇಕ್ಕೆಲ್"




ಬಜರಂಗಿಗಳ ದಾಳಿಗೊಳಗಾದವರು



ಅಂದರೆ ಕೊಡುವಳಿಕೆ ಎಂಬ ಧಾರ್ಮಿಕ ಸಂಕೇತದೊಂದಿಗೆ ಈ ಜಾತ್ರೆ ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುತ್ತಿದ್ದರು. ಇನ್ನೊಂದೆಡೆ ಈ ಮೈದಾನದಲ್ಲಿ ಅಲ್ಲಿನ ಹಿಂದು, ಮುಸ್ಲಿಂ, ಕ್ರೈಸ್ತ ಯುವಕರು ಒಟ್ಟಾಗಿ ಆಟವಾಡುತ್ತಿದ್ದುದು ಇಲ್ಲಿನ ಸೌಹಾರ್ದತೆಯನ್ನು ಎತ್ತಿ ಸಾರುತ್ತಿತ್ತು.

ಆದರೆ ಈ ಬಜರಂಗಿಗಳು ಇಲ್ಲಿ ಕ್ರೈಸ್ತರು ಮುಸ್ಲಿಮರು ಪ್ರವೇಶ ಮಾಡಬಾರದು. "ನೀವು ಆಡಬೇಕಿದ್ದರೆ, ನಾಮ ಹಾಕಿ ಕೇಸರಿ ಲುಂಗಿ ಸುತ್ತಿಕೊಂಡು ಬರಬೇಕೆಂದೂ" ನೀವು ಇಲ್ಲಿ ಆಡಿದರೆ ಮೈಲಿಗೆಯಾಗುತ್ತದೆ ಎಂದು ಹೊರಗಿನಿಂದ ಬಂದ ಸುಮಾರು 50 ರಷ್ಟಿದ್ದ ಪುಂಡು ಪೋಕ್ರಿಗಳು ಬೆದರಿಕೆಯನ್ನು ಒಡ್ಡಿದರು. ಇದಕ್ಕೆ ನಮ್ಮ ಯುವಕರು ಹೆದರದೆ ಸವಾಲನ್ನುಕೊಟ್ಟಾಗ ಆ ದಿನ ಬಂದಿದ್ದ ಬಜರಂಗಿಗಳು ಮುಖ ಕೆಳಗೆ ಮಾಡಿ ಕಾರ್ಕಳಕ್ಕೆ ವಾಪಸ್ಸಾದರು.

ಈ ಮಧ್ಯೆ ಜಗನ್ನಾಥ ಪೂಜಾರಿ ಎಂಬ ಬಜರಂಗಿ ಯುವಕ ನಾವು ಮಾತುಕತೆ ಮಾಡುವ ಮೂಲಕ ಇದನ್ನು ಪರಿಹರಿಸುವ ಎಂಬ ನಾಟಕವಾಡಿ ನಮ್ಮ ಯುವಕರ ಜತೆ ಮಾತುಕತೆ ನಡೆಸಿದ. ನಮ್ಮ ಕಾರ್ಯಕರ್ತರು ಅದಕ್ಕೆ ತಯಾರಿದ್ದು, ಅಂತೆಯೇ ಮೇ 29 ರಂದು ಆದಿತ್ಯವಾರ ಸಂಜೆ 5ಕ್ಕೆ ಮಾತುಕತೆಯನ್ನು ಕರೆಯಲಾಯಿತು. ಸಭೆಯಲ್ಲಿ ಆ ಜಮೀನಿನಲ್ಲಿ ಬೂತಾರಾಧನೆ ಮಾಡುತ್ತಿರುವ ರಾಜೇಂದ್ರ ಜೈನ್, ಶರೇಣಿಕ್‌ರಾಜ್, ಕೆ..ಎಸ್. ಭಟ್ ಮುಂತಾದವರು ಮಾತುಕತೆಗೆ ಹೊರಟರು. ಅಲ್ಲಿ ವಿ.ಹೆಚ್.ಪಿ.ಯ ಮುಖಂಡರು ಮೊದಲೇ ಬಂದಾಗಿತ್ತು. ಮಾತುಕತೆಯ ವೇಳೆ ವಿಪರೀತ ಮಳೆ ಸುರಿಯುತ್ತಿದ್ದ ಕಾರಣದಿಂದ ಸಭೆಯನ್ನು ಮುಂದಿನ ವಾರಕ್ಕೆ ಮುಂದೂಡಲಾಯಿತು. ಬಳಿಕ ಎಲ್ಲರೂ ತೆರಳುತ್ತಿದ್ದಂತೆಯೇ ಡಿವೈಎಫ್‌ಐ ನೆಲ್ಲಿಕಾರು ಘಟಕದ ಅಧ್ಯಕ್ಷರಾದ ರಮೇಶ್‌ರವರ ಮೇಲೆ ಅಲ್ಲಿನ ಬಜರಂಗದಳದ ಸಂಚಾಲಕನಾಗಿರುವ ದಿನೇಶ್ ಪೂಜಾರಿ ಹಿಂದಿನ ವಿಷಯವನ್ನು ಕೆದಕಿ ಹಲ್ಲೆಯನ್ನು ನಡೆಸಿದ. ಇದನ್ನು ಗಮನಿಸಿದ ನಮ್ಮ ಡಿವೈಎಫ್‌ಐ ಕಾರ್ಯದರ್ಶಿ ಜಾವೇದ್, ಮೈಯ್ಯದ್ದಿ, ಮುಂತಾದವರು ಅವರ ರಕ್ಷಣೆಗೆಂದು ಮೈದಾನ ಪ್ರವೇಶಿಸಿದರು. ಅವರು ಮೊದಲೇ ಹೇಳಿದಂತೆ ಮುಸಲ್ಮಾನರು ಮೈದಾನಕ್ಕೆ ಪ್ರವೇಶಿಸಬಾರದೆಂದು ತಾರೇತು ಮಾಡಿದ್ದರು. ಆದ್ದರಿಂದ ಇದನ್ನೇ ನೆಪ ಮಾಡಿ ಮೈದಾನ ಪ್ರವೇಶಿಸಿದ ನಮ್ಮ ಕಾರ್ಯಕರ್ತರಿಗೆ ಯದ್ವಾ ತದ್ವಾ ಹೊಡೆದರು. ಬಜರಂಗಿಗಳು ಬರುವಾಗ ಕಾರ್ಕಳದಿಂದ ಬಂದಿದ್ದ CRQ-77 KA 19 M 2727 ನಂಬರಿನ ಕಾರಿನಲ್ಲಿ ಜಮಾಯಿಸಿಟ್ಟಿದ್ದ ತಲವಾರು, ವಿಕೆಟ್, ಹಾಕಿ ಸ್ಟಿಕ್‌ಗಳಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ. ಪಕ್ಕದ ಮನೆಯ ಹುಸೇನ್ ಸಾಹೇಬರ ಮನೆಯ ಒಳಗೆ ನುಗ್ಗಿ ದಾಂಧಲೆ ನಡೆಸಿದ್ದಾರೆ. ಅವರ ಮನೆಯ ಪಾತ್ರ ಸಾಮಾನುಗಳನ್ನುಹೊರ ಎಳೆದು ಪುಡಿ ಮಾಡಿದ್ದಾರೆ.ಹುಸೇನ್ ಸಾಹೇಬರ ಹೆಂಡತಿ ಅಮಿನಾಬಿಯವರನ್ನು ಹೊರಗೆ ಎಳೆದು ತಂದು ಹಿಗ್ಗಾ ಮುಗ್ಗಾ ಬಡಿದು ಅವರ ಮಾಂಗಲ್ಯವನ್ನೇ ಕಿತ್ತು ಪರಾರಿಯಾಗಿದ್ದಾರೆ.



ಮೈದಾನದಲ್ಲಿ ಕೇಸರಿ ಬಾವುಟ

ಪೆಟ್ಟು ತಿಂದವರ ಮೇಲೆಯೇ ಕೇಸು

ಈ ಬಜರಂಗಿಗಳು ಇಲ್ಲಿ ನಮ್ಮ ಯುವಕರಿಗೆ ತಲವಾರುಗಳಿಂದ ಹೊಡೆದು ಅವರು ನೆಲ್ಕೆ ಉರುಳುತ್ತಿದ್ದಂತೆಯೇ ಕಾರ್ಕಳದ ಸರಕಾರಿ ಆಸ್ಪತ್ರೆಯಲ್ಲಿ ಮೊದಲೇ ನಾಲ್ಕು ಮಂದಿ ದಾಖಲಾಗಿದ್ದಾರೆ. ಇನ್ನೊಂದೆಡೆ ಕಾರ್ಕಳದ ಸರಕಾರಿ ಆಸ್ಪತ್ರೆಯಲ್ಲಿ ಮೊದಲೇ ನಾಲ್ಕು ಮಂದಿ ದಾಖಲಾಗಿದ್ದಾರೆ. ಇನ್ನೊಂದೆಡೆ ಕಾರ್ಕಳ ಪೊಲೀಸ್ ಠಾಣೆಯಲ್ಲಿ ಕೇಸನ್ನು ದಾಖಲಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಇಲ್ಲಿ ಪಾರದರ್ಶಕವಾಗಿತನಿಖೆ ಮಾಡಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕಾದ ಪೊಲೀಸರೇ ಬಜರಂಗಿಗಳ ಜೊತೆ ಶಾಮೀಲಾಗಿ ಆರೋಪಿಗಳನ್ನು ರಕ್ಷಿಸಲು ಶತ ಪ್ರಯತ್ನ ಮಾಡಿದ್ದಾರೆ. ಇನ್ನೊಂದೆಡೆ ಈ ಮೈದಾನದ ಸುತ್ತ ಕೇಸರಿ ಧ್ವಜಗಳನ್ನು ಹಾಕಿ ಮೈದಾನವನ್ನು ಆಕ್ರಮಿಸಿದರೂ ತಹಶೀಲ್ದಾರರು ಚಕಾರ ಎತ್ತದೆ ಪರೋಕ್ಷವಾಗಿ ಅವರಿಗೆ ಬೆಂಬಲ ನೀಡುತ್ತಿದ್ದಾರೆ ಎಂಬ ಗುಮಾನಿ ವ್ಯಕ್ತವಾಗಿದೆ.



ಅಲ್ಪಸಂಖ್ಯಾತರ ಮನೆ ಧ್ವಂಸ

ಇವರ ಅಟ್ಟಹಾಸಕ್ಕೆ ಕಾರಣ

ನೆಲ್ಲಿಕಾರು ಪ್ರದೇಶದಲ್ಲಿ ಅಮಾಯಕರ ಮೇಲೆ ದೌರ್ಜನ್ಯ, ಕ್ರೈಸ್ತ, ಮುಸ್ಲಿಂ ಧಾರ್ಮಿಕ ಕೇಂದ್ರದ ಮೇಲೆ ಧಾಳಿ, ಹಿಂದೂಯೇತರ ಯುವಕರ ಮೇಲೆ ವಿನಾಕಾರಣ ಹಲ್ಲೆ, ಗಂಧ ಸಾಗಾಟ, ಇನ್ನಿತರ ಸಮಾಜ ಬಾಹಿರ ಚಟುವಟಿಕೆಗಳಿಂದ ಸಮಾಜದಲ್ಲಿ ಅಶಾಂತಿಯನ್ನು ಸೃಷ್ಟಿಸಿದ್ದರು ಈ ಬಜರಂಗಿಗಳು. ಕೊನೆಗೊಂದು ದಿನ ಊರಿನ ನಾಗರಿಕರಿಗೆ ಅವರ ಉಪಟಳವನ್ನು ನೋಡಿ ಸಹಿಸಲು ಸಾಧ್ಯವಾಗದೆ ಪ್ರದೇಶದ ಅಂದಿನಿಂದ ಡಿವೈಎಫ್‌ಐ ಪ್ರತೀ ಮನೆ ಮನೆಗೂ ಪ್ರಚಾರವಾಯಿತು. ಇನ್ನು ಡಿವೈಎಫ್‌ಐ ಬೆಳವಣಿಗೆಯಾದರೆ ನಮ್ಮ ಅಟ್ಟಹಾಸಗಳಿಗೆ ಕತ್ತರಿ ಬೀಳುತ್ತವೆ ಎಂದು ಲೆಕ್ಕ ಹಾಕಿದ ಈ ಪುಂಡರು ಕಾರ್ಕಳದ ಚಡ್ಡಿಗಳ ಜತೆ ಸಮಾಲೋಚಿಸಿ ಈ ಕೃತ್ಯವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ್ದಾರೆ.

ದಿನೇಶ್ ಪೂಜಾರಿ ಈ ಕೃತ್ಯದ ರೂವಾರಿ

ಕಳೆದ ವರ್ಷ ದಲಿತ ಹುಡುಗ, ಸತೀಶ ಎಂಬವನಿಗೆ ನಾಡ ಕೋವಿಯಿಂದ ಗುಂಡು ಹೊಡೆದು ಆತನ ಒಂದು ಕಣ್ಣನ್ನು ನಿಷ್ಕ್ರಿಯಗೊಳಿಸಿದ್ದಾನೆ. ಆ ಕುಟುಂಬ ಇವನ ಮೇಲೆ ಕೇಸು ಹಾಕಲು ಮುಂದಾದಾಗ ಅವರಿಗೆ ಬೆದರಿಕೆ ಒಡ್ಡಿ ಕೇಸು ಹಾಕದ ಹಾಗೆ ತನ್ನ ಜಾಯಮಾನವನ್ನು ತೋರಿಸಿದ್ದಾರೆ. ಕಾರ್ಕಳದಲ್ಲಿ ನಡೆಯುವ ಬಹುತೇಕ ಕ್ರಿಮಿನಲ್ ಕೃತ್ಯಗಳಲ್ಲಿ ಇವನು ಭಾಗಿಯಾಗುತ್ತಿದ್ದ. ಆದುದರಿಂದ ಕಾರ್ಕಳ ಠಾಣೆಯಲ್ಲಿ ಇವನ ಮೇಲೆ 5 ಕೇಸುಗಳು ಈಗಾಗಲೇ ದಾಖಲಾಗಿವೆ. ಇವೊಬ್ಬ ಪಂಚಾಯತ್ ಸದಸ್ಯನೂ ಹೌದು. ಇವನು ಈ ಕೃತ್ಯದ ರೂವಾರಿಯಾಗಿದ್ದಾನೆ. ಇವನು "ನಾಗೇಶ್ ಆಚಾರಿ, ರವಿ, ರತ್ನಾಕರ, ಪದ್ಮನಾಭ ಆಚಾರಿ, ಜಗನ್ನಾಥ ಪೂಜಾರಿ, ರಾಜೇಶ್ ಆಚಾರಿ, ಸುರೇಶ್ ಆಚಾರಿ, ಹರೀಶ್ ಶೆಟ್ಟಿ, ರವಿರಾಜ್ ಬಂಗೇರ, ಮಹಾವೀರ ಜೈನ್" ಎಂಬಾತನನ್ನು ಕಟ್ಟಿಕೊಂಡು ಹಲ್ಲೆ ನಡೆಸಿದ್ದಾನೆ. ಪ್ರಸ್ತುತ ಇವರಲ್ಲಿ ಎಂಟು ಮಂದಿ ಈಗಾಗಲೇನ್ಯಾಯಾಂಗ ಬಂಧನದಲ್ಲಿದ್ದಾರೆ. ಇನ್ನು ನಾಲ್ಕು ಮಂದಿಯ ಮೇಲೆ ಕೇಸು ದಾಖಲಾಗಿದ್ದು ಅವರನ್ನು ಇನ್ನೂ ಬಂಧಿಸಲಿಲ್ಲ. ನಮ್ಮ ಕಾರ್ಯಕರ್ತರಾದ ಜಾವೇದ್, ಮೈಯ್ಯದ್ದಿ, ಕುಕುರ್ ಸಾಹೇಬ್ ಅಮಿನಾಬಿ ಇವರು ಕಾರ್ಕಳದ ಸ್ಪಂದನಾ ಆಸ್ಪತ್ರೆಯಲ್ಲಿ ಇನ್ನು ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪ್ರಕರಣದ ಬಗ್ಗೆ ಡಿವೈಎಫ್‌ಐ ದ.ಕ. ಜಿಲ್ಲಾ ಸಮಿತಿಯು ಮುಂದಿನ ಕಾರ್ಯಕ್ರಮವನ್ನು ರೂಪೀಕರಿಸಿ ಹೋರಾಟವನ್ನು ನಡೆಸಲು ತೀರ್ಮಾನಿಸಿದೆ.

ವರದಿ–ಅಶೋಕ್ ಕೊಂಚಾಡಿ

'ಕರಾವಳಿ ಜಿಲ್ಲೆಗಳು ಗುಜರಾತ್ ಹತ್ಯಾಕಾಂಡದ ಪ್ರಯೋಗಶಾಲೆಗಳಾಗಿವೆ'

ಜಿಲ್ಲಾ ಆಡಳಿತವನ್ನು ಬಜರಂಗದಳದ ಪುಂಡರಿಗೆ ಒಪ್ಪಿಸಲಾಗಿದೆಯೇ? -ಸಿಪಿಐ(ಎಂ)ನಾಯಕರ ಪ್ರಶ್ನೆ

"ಕರಾವಳಿ ಜಿಲ್ಲೆಗಳ ಆಡಳಿತವನ್ನು ಬಜರಂಗದಳ - ಆರ್.ಎಸ್.ಎಸ್.ಗೆ ಒಪ್ಪಿಸಲಾಗಿದೆಯೇ ಎಂಬುದನ್ನು ಕರ್ನಾಟಕ ಸರ್ಕಾರ ಸ್ಪಷ್ಟಪಡಿಸಬೇಕು" ಎಂದು ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್‌ರವರು ಆಗ್ರಹಿಸಿದರು.

ಅಲ್ಪಸಂಖ್ಯಾತರು, ಪ್ರಗತಿಪರರ ಮೇಲೆ ಸಂಘ ಪರಿವಾರದ ಕ್ರಿಮಿನಲ್ ಗೂಂಡಾಗಳಿಂದ ಹಲ್ಲೆ - ಗಲಭೆ ನಡೆಯದ ದಿನವೇ ಇಲ್ಲ. ಗೋರಕ್ಷಣೆ ಎಂದೋ, ಇಲ್ಲವೇಹಿಂದೂ ಧರ್ಮದ ರಕ್ಷಣೆ ಎಂದೋ, ಒಂದಿಲ್ಲ ಒಂದು ನೆಪ ಹೂಡಿ ಗಲಭೆ ನಡೆಸಲಾಗುತ್ತಿದೆ. ಬಜರಂಗದಳ, ಹಿಂದೂ ಜಾಗರಣ ವೇದಿಕೆ, ಹಿಂದೂ ಯುವಸೇನೆಯಂತಹ ಸಂಘಟನೆಗಳು ಹಲವಾರು ಕೊಲೆಗಡಕರು, ಅತ್ಯಾಚಾರಿ - ದರೋಡೆಕೋರ–ಕಳ್ಳರಂತಹ ಸಮಾಜ ಘಾತುಕ ಶಕ್ತಿಗಳಿಂದಲೇ ತುಂಬಿವೆ. ಇವರದ್ದು ಕ್ರಿಮಿನಲ್‌ಗಳ ದಾಖಲೆಯಾಗಿದೆ. ಇದನ್ನು ಮಟ್ಟಹಾಕದ ಸರ್ಕಾರಕ್ಕೆ ಏನಾಗಿದೆ ಎಂದು ಪ್ರಶ್ನಿಸಿದರು.


ಅವರು ಬಾಬಾಬುಡನ್‌ಗಿರಿ ಹಾಗೂ ಮಂಗಳೂರಿಗೆ ತೆರಳಿದ್ದ ನಿಯೋಗಗಳ ಅವಲೋಕನದ ಅಂಶಗಳನ್ನು ವಿವರಿಸಲು ಬೆಂಗಳೂರಿನಲ್ಲಿ ಕರೆಯಲಿದ್ದ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ಶಿವಮೊಗ್ಗ - ಚಾಮರಾಜಪೇಟೆ ಚುನಾವಣೆಯಲ್ಲಿ ಸೋತು ನೆಲಕಚ್ಚಿದ ಬಿಜೆಪಿ ಹತಾಶವಾಗಿ ಇಂತಹ ಆಕ್ರಮಣಕ್ಕೆ ಮುಂದಾಗಿದೆ. ಇಂತಹ ಬಿಜೆಪಿಗೆ ಜನತೆ ಮತ್ತೂ ಪಾಠ ಕಲಿಸದೇ ಇರಲಾರದು ಎಂದು ಉತ್ತರಿಸಿದರು.

ಕರಾವಳಿ - ಕೊಡಗು ಜಿಲ್ಲೆಗಳಲ್ಲಿ ನಡೆಯುತ್ತಿರುವುದು ಬಿಡಿ ಘಟನೆಗಳಲ್ಲ, ಸಾಂದರ್ಭಿಕವಾಗಿ ಘಟಿಸಿದ್ದೂ ಅಲ್ಲ. ಇದೊಂದು ಅತ್ಯಂತ ವ್ಯವಸ್ಥಿತವಾದ ಯೋಜನೆಯ ಜಾರಿ. ಗುಜರಾತ್‌ನ ಹತ್ಯಾಕಾಂಡವನ್ನು ನಡೆಸಿದ ಫ್ಯಾಸಿಸ್ಟ್ ಮಾದರಿಯ ಕಾರ್ಯಾಚರಣೆಗೆ ಕರಾವಳಿ ಒಂದು ಪ್ರಯೋಗರಂಗವಾಗಿದೆ ಎಂಬುದು ಅತ್ಯಂತ ಆತಂಕದ ಗಂಡಾಂತರಕಾರಿ ವಿಷಯವಾಗಿದೆ ಎಂದು ಎಚ್ಚರಿಸಿದರು. ಇತ್ತೀಚೆಗೆ ಆದಿ ಉಡುಪಿಯ ಘಟನೆ, ಪಂಪ್‌ವೆಲ್ ಬಳಿ ಪ್ರವಾಸಿಗರ ಮೇಲಿನ ಧಾಳಿ-ದರೋಡೆ, ಮೂಡಬಿದ್ರೆಯ ನೆಲ್ಲಿಕಾರುನಲ್ಲಿ ಡಿವೈಎಫ್‌ಐ ಕಾರ್ಯಕರ್ತರ ಮೇಲಿನ ಧಾಳಿ, ಬೆಳ್ತಂಗಡಿ ನಿಡ್ಲೆ ಗ್ರಾಮದ ದಲಿತ ಯುವತಿಯ ಮೇಲೆ ಅತ್ಯಾಚಾರ , ಕ್ರಿಮಿನಲ್ ಅನಂತು ಹತ್ಯೆ ನಂತರ ಮಂಗಳೂರು ಪರಿಸರದಲ್ಲಿ ನಡೆದ ಧಾಳಿಗಳು ಮುಂತಾದ ಘಟನೆಗಳನ್ನು ಉದಾಹರಿಸಿದರು. ಇಷ್ಟೆಲ್ಲಾ ನಡೆದರೂ ಜಿಲ್ಲಾಡಳಿತ ಗಂಭೀರವಾಗಿ ಪರಿಣಮಿಸುತ್ತಿಲ್ಲ. ಬದಲಾಗಿ ಇಂತಹ ಶಕ್ತಿಗಳಿಗೆ ಮಣಿಯುತ್ತಿದೆ. ಇದರರ್ಥ ಏನು ಎಂದು ಮುಖ್ಯಮಂತ್ರಿಗಳನ್ನು ಪ್ರಶ್ನಿಸಿದರು.

ಮಂಗಳೂರು–ಬಾಬಾಬುಡನ್‌ಗಿರಿಗೆ ತೆರಳಿದ್ದ ನಿಯೋಗದಲ್ಲಿದ್ದ ಸೆಕ್ರೆಟರಿಯೇಟ್ ಸದಸ್ಯರೂ, ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿಯವರು ನಿಯೋಗ ಕಂಡ ಸಂಗತಿಯನ್ನೂ ವಿಶ್ಲೇಷಿಸಿದರು. "10ರ ಮಂಗಳೂರು ಗಲಭೆ ಸಂಭವಿಸಿದಲ್ಲಿ ಬಜರಂಗದಳದ ಕ್ರಿಮಿನಲ್‌ಗಳ ಜೊತೆಗೆ ಜಿಲ್ಲಾ ಪೋಲೀಸರು ಜಿಲ್ಲಾಧಿಕಾರಿಗಳ ನಿರ್ಲಕ್ಷ್ಯ ಹಾಗೂ ಶಾಮೀಲುತನವೇ ಪ್ರಮುಖ

ಪುಟ 10ಕ್ಕೆ

ದೊಡ್ಡ ಬಹುರಾಷ್ಟ್ರೀಯ ಕಂಪನಿಗಳ ಚಿಲ್ಲರೆ ವ್ಯಾಪಾರ



ಕುರುಡು ಕಾಂಚಾಣ

ಜಿ.ಎಸ್.ಮಣಿ

ವಾಲ್ ಮಾರ್ಟ್ ಎಂಬ ಚಿಲ್ಲರೆ ಸಾಮಾನು ಮಾರುವ ಬೃಹತ್ ಕಂಪನಿಯ ಮುಖ್ಯಸ್ಥ ಜಾನ್ ಮೆಂಝುರ್ ಭಾರತಕ್ಕೆ ಮೊನ್ನೆ ಮೊನ್ನೆ ಬಂದು ಹೋದ. ಇಲ್ಲಿಂದ ಸರಕು ಕೊಳ್ಳುವುದರ ಜೊತೆಗೆ ಇಲ್ಲಿನ ಚಿಲ್ಲರೆ ಮಾರಾಟದ ಮಾರುಕಟ್ಟೆಯನ್ನು ವಿದೇಶಿ ಹೂಡಿಕೆಗೆ ತೆರೆದಿಡಬೇಕೆಂಬುದು ಆತನ ಒತ್ತಾಯ. ಈ ಕಂಪನಿಯ ಜೊತೆಗೆ ಕ್ರಾಫ್ಟ್ ಮತ್ತು ಟೆಸ್ಕೊ ಎಂಬ ಎರಡು ಕಂಪನಿಗಳೂ ಇಂತಹ ಹೂಡಿಕೆಗೆ ಕಾಯುತ್ತಿವೆಯಂತೆ.

ಒಂದು ಅಂದಾಜಿನ ಪ್ರಕಾರ ದೇಶದ ಚಿಲ್ಲರೆ ಮಾರಾಟದ ಮಾರುಕಟ್ಟೆ 3,75,000 ಕೋಟಿ ರೂಪಾಯಿಗಳಷ್ಟು ದೊಡ್ಡದು. ಐದು ಕೋಟಿ ಜನರಿಗೆ ಇದು ಉದ್ಯೋಗಾವಕಾಶ ಒದಗಿಸುತ್ತದಂತೆ. ದೇಶದ ಒಟ್ಟು ಉತ್ಪಾದನೆಯ ಶೇ 11 ರಷ್ಟು ಈ ಕ್ಷೇತ್ರದಿಂದಲೇ ಬರುತ್ತದಂತೆ. ದೊಡ್ಡ ಕಂಪನಿಗಳು ಆಸಕ್ತಿ ತೋರುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಈ ಕಂಪನಿಗಳು ಬಂದರೆ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ನಷ್ಟ ಆಗುತ್ತದೆ. ಯಾಕೆಂದರೆ ಈ ಕಂಪನಿಗಳು ಅತ್ಯಂತ ಆಧುನಿಕ ತಂತ್ರಜ್ಞಾನ ಮತ್ತು ನಿರ್ವಹಣಾ ವಿಧಾನಗಳನ್ನು ಬಳಸುತ್ತವೆ. ಇದರರ್ಥ ಅತ್ಯಂತ ಕಡಿಮೆ ಜನಸಂಪನ್ಮೂಲ ಬಳಸಿಕೊಂಡು ಅತ್ಯಂತ ದೊಡ್ಡ ವಹಿವಾಟು ನಡೆಸುವುದು.

ಇಂತಹ ಹೂಡಿಕೆಗೆ ಅವಕಾಶ ಕೊಟ್ಟರೆ ಬೀದಿ ಬೀದಿಯಲ್ಲಿನ ಅಂಗಡಿಗಳು ಮುಚ್ಚಿಹೋಗುತ್ತವೆ. ಇದರ ಮೇಲೆ ಅವಲಂಬಿಸಿರುವ ಜನ ಬೀದಿಪಾಲಾಗುತ್ತಾರೆ. ಥಾಯ್‌ಲ್ಯಾಂಡ್ ನಂತಹ ದೇಶದಲ್ಲಿ ಈಗಾಗಲೇ ಇಂತಹ ಅನುಭವಗಳು ಆಗಿವೆ.

ಸಿಪಿಐ(ಎಂ) ಇಂತಹ ಹೂಡಿಕೆಯ ಪ್ರಸ್ತಾಪವನ್ನೇ ತೀವ್ರವಾಗಿ ವಿರೋಧಿಸಿದೆ. ಹಿಂದಿನ ಉದಾರೀಕರಣವಾದಿ ಎನ್‌ಡಿಎ ಸರ್ಕಾರವೇ ಇಂತಹ ಹೂಡಿಕೆಯ ಬಗ್ಗೆ ಹಿಂಜರಿಕೆ ಹೊಂದಿತ್ತು ಎಂದರೆ ಹೂಡಿಕೆಯಿಂತ ಎಂತಹ ಪರಿಣಾಮ ಆಗುತ್ತದೆ ಎಂಬುದರ ಅಂದಾಜು ದೊರೆಯುತ್ತದೆ.

ಬೆಂಗಳೂರಿನಲ್ಲಿ ಆಗಲೇ ಜರ್ಮನಿಯ ಮೆಟ್ರೊ ಬಂದು ತನ್ನ ಮಾಲನ್ನು ಪ್ರಾರಂಭಿಸಿ ಸಾಕಷ್ಟು ತೊಂದರೆ ನೀಡಿದೆ. ಇನ್ನು ಉಳಿದ ಬ.ಕ. ಗಳು ಬಂದರೆ ಕೇಳಬೇಕೆ?

ವೆನಿಲ್ಲಾ: ಉದಾರೀಕರಣದ ಮಾಯಾಜಿಂಕೆ

ಮಾಯಾಜಿಂಕೆ ಕಣ್ಣಿಗೆ ಕಾಣುತ್ತದೆ ಕೈಗೆ ಸಿಗುವುದಿಲ್ಲ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇಂತಹ ಹಲವು ಮಾಯಾಜಿಂಕೆಗಳನ್ನು ಆಳುವ ವರ್ಗ ಸೃಷ್ಟಿಸುತ್ತದೆ. ಉದಾರೀಕರಣದ ಒಂದು ಮುಖ್ಯ ಉದ್ದೇಶ ರಫ್ತನ್ನು ಹೆಚ್ಚಿಸುವುದು.

ಇಂತಹ ಒಂದು ರಫ್ತು ಬೆಳೆ ವೆನಿಲ್ಲಾ. ಈಗ ಹತ್ತು ವರ್ಷಗಳ ಕೆಳಗೆ ವೆನಿಲ್ಲಾ ಎನ್ನುವುದು ಅಪರೂಪಕ್ಕೆ ಕಾಣುತ್ತಿದ್ದ ಪದ. ಈಗ ದಿನನಿತ್ಯ ಬಳಕೆಯಾಗುತ್ತಿರುವ ಪದ ವೆನಿಲ್ಲಾ ಸಾಂಬಾರು ಬೆಳೆ. ಇದರಿಂದ ತೆಗೆದ ಸುವಾಸನೆಯ ವಸ್ತುವನ್ನು ಆಹಾರದಲ್ಲಿ ಅದರಲ್ಲೂ ಐಸ್‌ಕ್ರಿಮ್‌ಗಳಲ್ಲಿ ಬಳಸಲಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಕೃತ್ರಿಮವಾಗಿ ತಯಾರಾದ ಸುವಾಸನೆಯ ವಸ್ತುಗಳಿಗಿಂತ ನೈಸರ್ಗಿಕ ವಸ್ತುಗಳಿಗೆ ಆದ್ಯತೆ ಬಂದಿರುವುದರಿಂದ ಈ ವೆನಿಲ್ಲಾಕ್ಕೆ ಬೇಡಿಕೆ ಜಾಸ್ತಿ.

ಇಡೀ ಜಗತ್ತಿನ ವೆನಿಲ್ಲಾ ಅವಶ್ಯಕತೆಯ ಬಹುಬಾಗವನ್ನು ಮಡ್‌ಗಾಸ್ಟರ್ ಎಂಬ ಪುಟ್ಟ ದೇಶ ಪೂರೈಸುತ್ತಿತ್ತು. ಆ ದೇಶದಲ್ಲಿನ ಬೆಳೆಗೆ ರೋಗ ಬಂದದ್ದರಿಂದ ಅಲ್ಲಿ ಪೂರೈಕೆ ಕಡಿಮೆಯಾಗಿ ಭಾರತದ ಬೆಳೆಗೂ ಬೇಡಿಕೆ ಬಂತು.

ಹೀಗೆ ಬೇಡಿಕೆ ಬಂದದ್ದರಿಂದ ಕಿಲವರು ವೆನಿಲ್ಲಾ ಬೆಳೆದು ಕೋಟ್ಯಾಧಿಪತಿಗಳಾದರು. ವೆನಿಲ್ಲಾ ಮಲೆನಾಡಿನ ಹವಾಮಾನದಲ್ಲಿ ಬೆಳೆವ ಬೆಳೆಯಾದ್ದರಿಂದ ಮಲೆನಾಡಿನಲ್ಲೆಲ್ಲ ಜನ ಈ ಬೆಳೆ ಬೆಳೆಯತೊಡಗಿದರು. ಒಂದು ಕಿಲೊ ವೆನಿಲ್ಲಾ ಕಾಯಿಗೆ ಮೂರು ಸಾವಿರ ರೂಪಾಯಿ ಮಾರುಕಟ್ಟೆ ಬೆಲೆ.

ಆದರೆ ಉದಾರೀಕರಣದಿಂದಾಗಿ ದೊರೆತ ಜಾಗತಿಕ ಮಾರುಕಟ್ಟೆ ಒಂದೇ ಸಮ ಇರುವುದಿಲ್ಲ. ಮಡ್‌ಗಾಸ್ಟರ್‌ನಲ್ಲಿ ಈ ಬೆಳೆಯ ಪರಿಸ್ಥಿತಿ ಸುಧಾರಿಸಿ ಬೇರೆಡೆಯಲ್ಲೂ ಈ ಬೆಳೆಯನ್ನು ಬೆಳೆಯತೊಡಗಿದ್ದರಿಂದ ಬೇಡಿಕೆ ಕಡಿಮೆಯಾಗಿ ಈಗ ವೆನಿಲ್ಲಾ ಕಾಯಿಗೆ ಕಿಲೊಗೆ ಮುನ್ನೂರು ರೂಪಾಯಿ ದೊರೆಯದಾಗಿದೆ.

ಕೋಟ್ಯಾದಿಪತಿಗಳಾಗುವ ಕನಸು ಕಂಡ ಹಲವರು ಈಗ ನಿರಾಶರಾಗಿದ್ದಾರೆ. ಅಲ್ಲದೆ ಬಹಳ ಖರ್ಚು ಮಾಡಿ ಈ ಬೆಳೆ ಬೆಳೆಯಲು ಹೊರಟವರಿಗೆ ಅಪಾರ ನಷ್ಟ.

ಸರ್ಕಾರ ಸಾಂಬಾರು ಜಿನಸು ಮಂಡಳಿಗಳೆಲ್ಲ ಬಾಯಿಮಾತಿನ ನೆರವು ನೀಡುತ್ತಿದ್ದಾರೆ.

ಇದು ವೆನಿಲ್ಲಾ ಎಂಬ ಮಾಯಾಜಿಂಕೆಯ ಕಥೆ.

ಉದಾರೀಕರಣ ಹಲವು ಮಾಯಾಜಿಂಕೆಗಳನ್ನು ಸೃಷ್ಟಿಸಿ ಕಳುಹಿಸುತ್ತಿದೆ ಜನಸಾಮಾನ್ಯರ ಜೀವನವನ್ನು ದುರ್ಬರಗೊಳಿಸಲು.

ಮೆಟ್ರೋ ಸಾರ್ವಜನಿಕ ಉದ್ದಿಮೆ : ಕ್ಷಿಪ್ರ ಸಾರಿಗೆ ವ್ಯವಸ್ಥೆಗಾಗಿ ಸಂಪುಟದ ನಿರ್ಧಾರವನ್ನು ಜಾರಿಗೊಳಿಸಲು ಸಿಪಿಐ(ಎಂ) ಆಗ್ರಹ.

ತೀವ್ರವಾಗಿ, ಹಲವಾರು ಸಮಸ್ಯೆ ಮತ್ತು ಸಂಕಟಗಳನ್ನು ಒಡಲಲ್ಲಿರಿಸಿಕೊಂಡು ಬೆಳೆಯುತ್ತಿರುವ ಬೆಂಗಳೂರು ಮಹಾ ನಗರ ಇಂದು ಎದುರಿಸುತ್ತಿರುವ ಸಾರಿಗೆ ಸಂಚಾರದ ದಟ್ಟಣೆ ಹಾಗೂ ತೊಂದರೆಗಳನ್ನು ನಿವಾರಿಸುವ ದಿಕ್ಕಿನಲ್ಲಿ ಸುಲಲಿತ ಸಾರಿಗೆ ಮಾಡುವಂತಹ ವ್ಯವಸ್ಥೆಯನ್ನು ಕಲ್ಪಿಸುವುದು ತುಂಬಾ ತುರ್ತಾಗಿದೆಯೆಂದು ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಷ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಅಭಿಪ್ರಾಯ ಪಟ್ಟಿದೆ.

ಜನತೆಯನ್ನು ಅಧಿಕ ಸಂಖ್ಯೆಯಲ್ಲಿ ಹಾಗೂ ಕ್ಷಿಪ್ರವಾಗಿ ಸಾಗಿಸಲು ರೈಲಿನ ವ್ಯವಸ್ಥೆ ಕಲ್ಪಿಸುವುದು ಅತೀ ಜರೂರಾಗಿದೆ. ಈಗಾಗಲೇ **ಸಚಿವ ಸಂಪುಟ ನಿರ್ಧರಿಸಿದಂತೆ 'ಮೆಟ್ರೋ' ರೈಲಿನ ವ್ಯವಸ್ಥೆಯನ್ನು ಯಾವುದೇ ಕಾರಣಕ್ಕೆ ವಿಳಂಬಿಸದೇ ಕೂಡಲೇ ತುರ್ತಾಗಿ ಅನುಷ್ಠಾನಗೊಳಸಲು ಮುಂದಾಗಬೇಕೆಂದು ಸಿಪಿಐ(ಎಂ) ಸರ್ಕಾರವನ್ನು ಆಗ್ರಹಿಸಿದೆ.**

'ಮೆಟ್ರೋ' ರೈಲು ಪ್ರಸಕ್ತವಾಗಿ ಉತ್ತಮ ಕಾರ್ಯನಿರ್ವಹಿಸುವ, ನಿರ್ವಹಿಸಬಲ್ಲ ಸಾಮರ್ಥ್ಯ ಹೊಂದಿರುವಂತಹದ್ದು. ಎರಡು ನಗರಗಳಲ್ಲಿ ಯಶಸ್ವಿಯಾಗಿ ಪ್ರಯೋಜನ ನೀಡುತ್ತಿದೆ. ಮೇಲಾಗಿ ಅದು ಸರ್ಕಾರದ ಒಡೆತನವಿರುವ ಸಾರ್ವಜನಿಕ ವಲಯದಲ್ಲಿ ಉದ್ಯಮವಾಗಿರುವುದೂ ಸಹ ಪರಿಗಣಿಸಬೇಕಾದ ವಿಷಯವಾಗಿದೆ.

ಆದ್ದರಿಂದ ಸರ್ಕಾರ ಸಂಪುಟದ ನಿರ್ಧಾರದಂತೆ ಮೆಟ್ರೋ ಯೋಜನೆ ಅನುಷ್ಠಾನಕ್ಕೆ ಮುಂದಾಗಲಿ ಎಂದು ಸಿಪಿಐ(ಎಂ) ಒತ್ತಾಯಿಸಿದೆ.

2. ಸಿಇಟಿ ಬಿಕ್ಕಟ್ಟು ನಿವಾರಣೆಗೆ ಕೇಂದ್ರಿಯ ಶಾಸನ : ಸರ್ಕಾರಕ್ಕೆ ಆಗ್ರಹ.

ವೃತ್ತಿ ಶಿಕ್ಷಣದ ಕೋರ್ಸ್‌ಗಳಿಗೆ ಪ್ರವೇಶವಕಾಶಕ್ಕೆ ಸಂಬಂಧಿಸಿ ಇಂದು ಉಂಟಾಗಿರುವ ಎಲ್ಲಾ ಗೊಂದಲ ಸಮಸ್ಯೆಗಳ ನಿವಾರಣೆಗೆ ಕೇಂದ್ರೀಯ ಶಾಸನದ ರಚನೆಯೊಂದೇ ಉಳಿದಿರುವ ಪರಿಹಾರವೆಂದು ಸಿಪಿಐ(ಎಂ) ತಿಳಿಸಿದೆ. ಇಂತಹ ಕಾನೂನು ರೂಪಿಸಿ- ಜಾರಿಗೊಳಸಲು ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ಆಗ್ರಹಿಸಿದೆ.

ಸುಪ್ರಿಂ ಕೋರ್ಟ್‌ನ ತೀರ್ಪು ಬಂದಾಗಲೇ ಇಂತಹ ಕಾನೂನನ್ನು ಜಾರಿಗೊಳಸಲು ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರ ಮುಂದಾಗಬೇಕಿತ್ತು. ಅದರತ್ತ ಕಿಂಚಿತ್ತು ಪ್ರಯತ್ನ ನಡೆಸದೇ ಲಕ್ಷಾಂತರ ವಿದ್ಯಾರ್ಥಿ-ಪಾಲಕರ ಬದುಕು -ಭವಿಷ್ಯದ ಜೊತೆ ಚೆಲ್ಲಾಟವಾಡಿತು. ಮತ್ತು ಖಾಸಗಿ ಸಂಸ್ಥೆಗಳು ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಲು ಮುಕ್ತವಾದ ಅವಕಾಶಮಾಡಿ ಕೊಟ್ಟಿತು. ವಿದ್ಯಾರ್ಥಿಗಳ ಪ್ರಾಣ ಹರಣಕ್ಕೂ ಕಾರಣವಾಯಿತು. ಈಗಿನ ಯು.ಪಿ.ಎ. ಸರ್ಕಾರವೂ ಕೂಡ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಕೇಂದ್ರೀಯ ಶಾಸನ ರೂಪಿಸಲು ಮುಂದಾಗುತ್ತಿಲ್ಲ. ಆದ್ದರಿಂದ ಇಂತಹ ಶಾಸನಕ್ಕಾಗಿ ರಾಜ್ಯ ಸರ್ಕಾರವೂ ಸಹ ತನ್ನ ಪ್ರಬಲ ಒತ್ತಡ ಹಾಕಬೇಕು ಎಂದು ಸಿಪಿಐ(ಎಂ) ಒತ್ತಾಯಿಸಿದೆ.

ರಾಜ್ಯ ಸರ್ಕಾರ ಪ್ರಮುಖವಾಗಿ ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಈ ವರ್ಷವೇ ಆರಂಭಿಸಬೇಕು. ಸಿಇಟಿ ಕೌನ್ಸಿಲಿಂಗ್ ನಡೆಸಲು ಇರುವ ಅಡ್ಡಿ ಆತಂಕಗಳನ್ನು ಸರ್ಕಾರವು ತಕ್ಷಣವೇ ನಿವಾರಿಸಿ ತುರ್ತಾಗಿ ಅದರ ಪ್ರಕ್ರಿಯೆ ಆರಂಭಿಸಿ, ಪೂರ್ಣಗೊಳಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

.............ಮುರಿದ ಜನ

ಪುಟ 3ರಿಂದ

ಒಂದೆಡೆ ಹತಾಶೆಯ ಸ್ಥಿತಿಯಲ್ಲಿ ಹಿಂದುತ್ವ ಅಜೆಂಡಾ, ಇನ್ನೊಂದೆಡೆ ಸಂಸತ್ತಿನ ಕಲಾಪಗಳನ್ನೇ ಬಹಿಷ್ಕರಿಸಿ ಜನತೆಯ ತೀರ್ಪಿಗೆ ಅವಮಾನ ಹಾಗೂ ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳಲ್ಲಿ ತೊಡಗಿದೆ. ಇವುಗಳಿಗೆ ಜನತೆಯ ತಿರಸ್ಕಾರ ಎಂಬುದನ್ನು ಗಮನಿಸಬೇಕು.

ಶಿವಮೊಗ್ಗದಲ್ಲಿ ಬಿಜೆಪಿ ಗಳಿಸಿದ್ದು (ಬಾನುಪ್ರಕಾಶ್) 1,48,640, ಕಾಂಗ್ರೆಸ್‌ನ ಆಯನೂರ್ ಮಂಜುನಾಥ್ 2,52,376, ಸಮಾಜವಾದಿ ಪಕ್ಷದ ಬಂಗಾರಪ್ಪ 2,69,013 (ಗೆಲುವಿನ ಅಂತರ 16,305) ಇಲ್ಲಿ ಜೆಡಿ(ಎಸ್)ನ ತಿಮ್ಮಪ್ಪ ಹೆಗಡೆ 54,578 ಮತಗಳನ್ನು ಗಳಿಸಿದ್ದಾರೆ. ಎನ್.ಡಿ.ಎ. ಭಾಗೀದಾರ ಜೆಡಿ(ಯು) 5,141ಕ್ಕೆ ತೃಪ್ತಿಪಟ್ಟು ಕೊಳ್ಳಬೇಕಾಗಿದೆ. (ಚಾಮರಾಜಪೇಟೆಯಲ್ಲಿ 151). ಇಲ್ಲಿ ಬಿಜೆಪಿ ಮತ ಮೊದಲ ಸ್ಥಾನದಿಂದ ಮೂರನೆಯ ಸ್ಥಾನಕ್ಕೆ ಕುಸಿಯುವುದರಲ್ಲಿ ಲಕ್ಷಾಂತರ ಮತಗಳ ಅಂತರವಿದೆ. ಈ ಬಾರಿ ಕಟ್ಟಾ ಆರ್‌ಎಸ್‌ಎಸ್‌ನ ಸ್ವಯಂಸೇವಕನನ್ನು ಅಭ್ಯರ್ಥಿಯಾಗಿಸಿದ್ದಲ್ಲದೆ ಜಾತಿವಾರು, ಮತ ಹಂಚಿಕೆ ಮುಖ್ಯವಾಗಿತ್ತು. ಆದರರೆ ಇವಾವುವೂ ಕೆಲಸ ಮಾಡಲಿಲ್ಲ. ಜೆಡಿ(ಎಸ್)ನ ಅಭ್ಯರ್ಥಿ ಸ್ಪರ್ಧೆಯು ಒಂದು ರೀತಿಯಲ್ಲಿ ಸಮಾಜವಾದಿ ಪಕ್ಷದ ಗೆಲುವಿಗೆ ಸಹಾಯಕವಾಗಿದೆ ಎಂಬ ವಿಶ್ಲೇಷಣೆಯೂ ಇದೆ. ಅಂತೂ ಬಿಜೆಪಿಯನ್ನು ಬೆಂಬಲಿಸಿದ್ದ ಮತದಾರರು ಈ ಬಾರಿ ದೊಡ್ಡ ಪ್ರಮಾಣದಲ್ಲಿ ಕೈ ಬಿಟ್ಟಿದ್ದಾರೆ.

ಹಾಗೆಯೇ, ಚಾಮರಾಜಪೇಟೆಯಲ್ಲಿ ಬಿಜೆಪಿಯ ಪ್ರಮೀಳಾ ನೇಸರ್ಗಿಗೆ 9,944, ಕಾಂಗ್ರೆಸ್‌ನ ದೇವರಾಜ್‌ಗೆ 15,245, ಜೆಡಿ(ಎಸ್)ನ ಜಮೀರ್ ಅಹಮದ್ ಖಾನ್ 19, 953(ಗೆಲುವಿನ ಅಂತರ 3,678). ಮೇಲಿನ ಎರಡೂ ಕ್ಷೇತ್ರಗಳೂ ಆರ್‌ಎಸ್‌ಎಸ್ ಬಿಜೆಪಿಗೆ ನೆಲೆಯಿರುವ ಪ್ರದೇಶಗಳು. ಶಿವಮೊಗ್ಗವಂತೂ 12ರಲ್ಲಿ 11 ಶಾಸಕರು ಬಿಜೆಪಿಯವರೇ. ಯಡಿಯೂರಿಪ್ಪ, ಈಶ್ವರಪ್ಪ ಮೂರ್ತಿಗಳ ರಾಜಕೀಯ ನೆಲೆಯೂ ಇದೇ.

ಚಾಮರಾಜಪೇಟೆಯಲ್ಲಿ ಸಮ್ಮಿಶ್ರ ಸರಕಾರದ ಭಾಗೀದಾರರಾಗಿ ನೇತೃತ್ವ ವಹಿಸಿರುವ ಕಾಂಗ್ರೆಸ್ ಸೋತಿರುವುದು ಸಹ ಪ್ರಮುಖ ಅಂಶವಾಗಿದೆ. ಜನರ ಮನ ಒಲಿಸಿಕೊಳ್ಳಲು ಅದರ ನೀತಿಗಳಿಂದ ಸಾಧ್ಯವಾಗಿಲ್ಲ.

ಒಟ್ಟಾರೆ ಈ ಕೋಮುವಾದಿ ಬಿಜೆಪಿಗೆ ಮೂರನೇ ಸ್ಥಾನ. ಎನ್‌ಡಿಎ ಭಾಗೀದಾರ ಜೆಡಿ(ಯು) ನಗಣ್ಯವಾದ ರೀತಿ ಎರಡೂ ಕ್ಷೇತ್ರಗಳಲ್ಲಿದೆ. ಕಾಂಗ್ರೆಸ್ಸೇತರ ಶಕ್ತಿಗಳನ್ನು ಗೆಲ್ಲಿಸಿರುವ ಉಪಚುನಾವಣೆಯ ಫಲಿತಾಂಶ ರಾಜ್ಯದಲ್ಲಿ ಹೊಸ ಬಗೆಯ ರಾಜಕೀಯ ವಾತಾವರಣ ಸೃಷ್ಟಿಸುವುದೆ ಎಂದು ನೋಡಬೇಕು. ಬಿಜೆಪಿ-ಕಾಂಗ್ರೆಸ್ಸೇತರರಲ್ಲಿ ಉತ್ಸಾಹ ಮೂಡಿಸಿದೆ.

ಇದರೊಟ್ಟಿಗೆ ಈ ಎರಡೂ ಚುನಾವಣೆಗಳಲ್ಲಿ ಜಾತಿ ಅಂಶವನ್ನು ಹಿಗ್ಗಿಲ್ಲದೆ ಬಳಸಿದ್ದು, ಹಾಗೆಯೇ ಹೆಂಡ-ಹಣದ ಹೊಳೆಯೇ ಹರಿದಿರುವುದು. ಬಹುತೇಕ ಎಲ್ಲಾ ಪಕ್ಷಗಳೂ ಇದನ್ನೇ ಅವಲಂಬಿಸಿರುವುದು ಆತಂಕದ ವಿಷಯವಾಗಿದೆ.

ಅಂತೂ ಈ ಫಲಿತಾಂಶ ಹಲವು ಬಗೆಯ ಹೊಸ ರಾಜಕೀಯ ಲೆಕ್ಕಾಚಾರಕ್ಕೆ ಚಾಲನೆ ನೀಡಿದೆ. ಸ್ವಾಗತಾರ್ಹ ಫಲಿತಾಂಶವಿದು.

.............ಪ್ರಯೋಗಶಾಲೆಗಳಾಗಿವೆ'

ಪುಟ 9ರಿಂದ

ಕಾರಣವಾಗಿದೆ. ಸಂಭವಿಸಬಹುದಾದ ಹಾನಿಯನ್ನು ಸೂಕ್ಷ್ಮವಾಗಿ ಗಮನಿಸಿ ಕ್ರಮ ವಹಿಸದೇ ಆಡಳಿತ ಹಾಗೇ ಬಿಟ್ಟುಬಿಟ್ಟಿದೆ. ಆಡಳಿತ ವೈಫಲ್ಯ ಎದ್ದು ಕಾಣುತ್ತದೆ. ಇಡೀ ಘಟನೆಗಳು ಹಾಗೂ ಆಡಳಿತ ವೈಫಲ್ಯದ ಬಗ್ಗೆ ಅಮೂಲಾಗ್ರ ತನಿಖೆಯಾಗಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಬಾಬಾಬುಡನ್ ಗಿರಿಯ ಸೌಹಾರ್ದ ಪರಂಪರೆ ರಕ್ಷಣೆ ಪ್ರಥಮ ಕರ್ತವ್ಯವಾಗಬೇಕು. ಅಲ್ಲಿನ ಆಚರಣೆ-ಪದ್ಧತಿಗಳಿಗೆ ಅಡೆ ತಡೆಯಾಗಬಾರದು. ಜನರ ಭಾವನೆಗಳಿಗೆ ಘಾಸಿ ತರಬಾರದು. ಶಾಖಾದ್ರಿಯೊಂದಿಗೆಸಮನ್ವಯಿರಬೇಕು. ನ್ಯಾಯಾಲಯದ ನಿರ್ದೇಶನ ಜಾರಿಯಾಗಿಯಾಗಬೇಕು. ಆದರೆ ಜಿಲ್ಲಾಡಳಿತದಿಂದ ಕೆಲವು ಉಲ್ಲಂಘನೆಗಳು ಆಗಿವೆ 'ಅದನ್ನು ಸರಿಪಡಿಸಬೇಕೆಂದು ಅವರು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೆಕ್ರೆಟರಿಯೇಟ್ ಸದಸ್ಯರಾದ ಎಸ್.ವೈ.ಗುರುಶಾಂತ್, ಬಿ.ಮಾಧವ, ಹೆಚ್ಚಿನ ವಿವರ ನೀಡಿದರು. ರಾಜ್ಯ ಸಮಿತಿ ಸದಸ್ಯರಾದ ವಿ.ಸುಕುಮಾರ್ ಉಪಸ್ಥಿತರಿದ್ದರು.

ಉದ್ಯೋಗ, ಭೂಮಿ ಮತ್ತು ಆಹಾರ ಚಳುವಳಿ

ಜನತೆಯ ಜ್ವಲಂತ ಮೂಲಭೂತ ಪ್ರಶ್ನೆಗಳು ಆಧಾರದಲ್ಲಿ ದೇಶವ್ಯಾಪಿ ಪ್ರಬಲ ಆಂದೋಲನ ರೂಪಿಸಲು ಸಿಪಿಐ(ಎಂ)ನ ಕೇಂದ್ರ ಸಮಿತಿಯು ನಿರ್ಧರಿಸಿದೆ ಹಾಗೂ ಭಾರತದ - ವಿಶ್ವದ ಇಂದಿನ ಪರಿಸ್ಥಿತಿಯನ್ನು ಮಾರ್ಕ್ಸ್‌ವಾದ - ಲೆನಿನ್ ವಾದದ ಕಣ್ಣೋಟದಲ್ಲಿ ಆಳವಾಗಿ ವಿಶ್ಲೇಷಿಸಿ ಕೈಗೊಳ್ಳಲಾದ ನಿರ್ಧಾರಗಳ ಸಂಕ್ಷಿಪ್ತ ವರದಿ ಇಲ್ಲಿದೆ.

ಜೂನ್ 3 ಮತ್ತು 4ರಂದು ಕಲ್ಕತ್ತದಲ್ಲಿ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸಭೆಯು ಅಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಉದ್ಯೋಗ, ಉಳಮೆಗಾಗಿ ಭೂಮಿ, ಮೂರು ಹೊತ್ತಿನ ಆಹಾರಕ್ಕಾಗಿ ದೇಶದಾದ್ಯಂತ ಚಳುವಳಿ ಹೂಡಬೇಕೆಂದು ಕರೆ ನೀಡಿದೆ. 18ನೇ ಮಹಾಧಿವೇಶನದಲ್ಲಿ ಪಕ್ಷವು ಅಂಗೀಕರಿಸಿದ ನಿರ್ಣಯಕ್ಕೆ ಅನುಗುಣವಾಗಿ ಈ ಚಳುವಳಿ ನಡೆಯುತ್ತಿದೆ.

ಸ್ವಾತಂತ್ರ್ಯ ಬಂದು 58 ವರ್ಷ ಕಳೆದರೂ ಇನ್ನೂ ಆಹಾರ ಚಳುವಳಿ ನಡೆಸಬೇಕೆಂದರೆ ಆಶ್ಚರ್ಯವಾಗುತ್ತದೆ. ಆದರೆ ಇದು ನಿಜ. ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ನಗರ ಪ್ರದೇಶಗಳ ಸ್ಲಮ್ಮುಗಳಲ್ಲಿ ಇಂದಿಗೂ ಕೋಟ್ಯಾಂತರ ಜನ ಮೂರು ಹೊತ್ತು ಉಣ್ಣಲಾಗದೆ ಉಪವಾಸ ಇರುವ ದಾರುಣ ಪರಿಸ್ತಿತಿ ನಮ್ಮ ಮುಂದಿದೆ. ಪೌಷ್ಟಿಕಾಂಶಗಳಾದ ಹಾಲು, ಹಣ್ಣು, ತರಕಾರಿ, ಮಾಂಸ ದೂರದ ಮಾತು. ಗಡ್ಡೆ ಗೆಣಸುಗಳೂ ಸಹ ಇಲ್ಲದೆ, ದಿನಕ್ಕೆ ಒಂದು ಹೊತ್ತು ಹೊಟ್ಟೆ ತುಂಬಾ ಗಂಜಿ ಕುಡಿಯದೆ ಬದುಕುವ ಪರಿಸ್ಥಿತಿ ಇಂದಿಗೂ ಇದೆ.

ಉದಾರೀಕರಣ ನೀತಿಯ ಭಾಗವಾಗಿ ಬಿಪಿಎಲ್ ಕಾರ್ಡುಗಳ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆ. ಅಂತ್ಯೋದಯ ಯೋಜನೆ ಕೆಲವೇ ಕೆಲವು ಜನರಿಗೆ ಮಾತ್ರ ಲಭ್ಯ. ಅದನ್ನು ವಿಸ್ತರಿಸಬೇಕಾಗಿದೆ. ಉದ್ಯೋಗವಿಲ್ಲದೆ, ಕೊಳ್ಳುವ ಶಕ್ತಿ ಕಡಿಮೆಯಾಗಿ ಕಾರ್ಡುಗಳಿದ್ದರೂ ರೇಶನ್ ತರಲಾಗದ ಪರಿಸ್ಥಿತಿ ಲಕ್ಷಾಂತರ ಕುಟುಂಬಗಳಲ್ಲಿದೆ.

ಸ್ವಂತ ಭೂಮಿಯನ್ನು ಹೊಂದಿ ದುಡಿದು ತಿನ್ನಬೇಕೆಂದು ಹಂಬಲಿಸಿದ ದಲಿತ ಜನರ ಕನಸು ಕಮರಿ ಹೋಗುತ್ತಿದೆ. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಗಳನ್ನು ಹೊರತು ಪಡಿಸಿ, ಉಳಿದ ಯಾವ ರಾಜ್ಯಗಳಲ್ಲೂ ಭೂಸುಧಾರಣೆ ಸಮರ್ಪಕವಾಗಿ ಜಾರಿಗೊಳ್ಳಲಿಲ್ಲ. ಅತ್ಯಂತ ಪ್ರಗತಿಪರವೆಂದು ಜಾಹೀರುಗೊಳ್ಳುತ್ತಿರುವ ದೇವರಾಜು ಅರಸುರವರ ಕಾಲದ ಭೂಸುಧಾರಣೆ ಕೂಡಾ ಚಳುವಳಿ ಬಲಿಷ್ಟವಾಗಿದ್ದ ಕೆಲವೇ ಜಿಲ್ಲೆಗಳಲ್ಲಿ ಜಾರಿಗೊಂಡಿತು. ದೇಶದೆಲ್ಲೆಡೆಯಂತೆ ಕರ್ನಾಟಕದ ಹಿಂದುಳಿದ ಪ್ರದೇಶಗಳಲ್ಲಿ ಭೂಮಿ ಕೆಲವೇ ಕೆಲವು ಭೂಮಾಲಕರ ಕೈಯಲ್ಲಿದ್ದು, ಬಹುಸಂಖ್ಯಾತರಿಗೆ, ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿಮತ್ತು ಪಂಗಡದ ಜನರು ಭೂಮಿಯಿಂದ ವಂಚಿತರಾಗಿದ್ದಾರೆ.

ಉದ್ಯೋಗದ ಕುರಿತು ಎಷ್ಟೇ ಹೇಳಿದರೂ ಕಡಿಮೆ. ನಗರ ಪ್ರದೇಶಗಳಲ್ಲಿ ಭವ್ಯ ಕಟ್ಟಡಗಳು ತಲೆ ಎತ್ತಿ ಅಭಿವೃದ್ಧಿಯ ನಿಶಾನೆ ಎಂಬಂತೆ ತೋರಿದರೂ, ಜನ ಸಾಮಾನ್ಯರ ಪರಿಸ್ತಿತಿ ಇನ್ನೂ ಉತ್ತಮಗೊಂಡಿಲ್ಲ. ಐಟಿ, ಬಿಟಿ ಕಂಪೆನಿಗಳಲ್ಲಿ ಕೆಲವೊಂದು ಸಾವಿರ ಜನರಿಗೆ ಸಾವಿರಾರು ರೂಪಾಯಿ ವೇತನ ದೊರೆಯುತ್ತಿದೆ ನಿಜ. ಆದರೆ ಬಹುಸಂಖ್ಯಾತ ಜನರ ಪಾಡೇನು? ಸರಕಾರದ ನೀತಿಗಳಿಂದಾಗಿ ಸಾರ್ವಜನಿಕ ಉದ್ದಿಮೆಗಳು ಮುಚ್ಚಿವೆ. ಇಲ್ಲವೆ ಕುಂಠಿತಗೊಂಡಿವೆ. ಇದರಿಂದಾಗಿ ಉದ್ಯೋಗಿಗಳ ಸಂಖ್ಯೆಯೂ ತೀವ್ರವಾಗಿ ಕಡಿಮೆ ಆಗಿದೆ. ಇಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗು ಹಿಂದುಳಿದ ವರ್ಗಗಳಿಗೆ ಸೇರಿದ ಜನರು ವಂಚಿತರು. ಹೊಸದಾಗಿ ತಲೆ ಎತ್ತುತ್ತಿರುವ ಖಾಸಗಿ ಸಂಸ್ಥೆಗಳಲ್ಲಿ ಇದುವರೆಗೆ ಮೀಸಲಾತಿಗೆ ಅವಕಾಶವೇ ಇಲ್ಲ.

ನಿರುದ್ಯೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ರೂ. 500 ನಿರುದ್ಯೋಗ ಭತ್ಯೆ ನೀಡಲಾಗುವುದು ಎಂಬ ಕರ್ನಾಟಕದ ಕಾಂಗ್ರೆಸ್ ಪಕ್ಷದ ಚುನಾವಣಾ ಘೋಷಣೆ ಜಾರಿಯಾಗಲಿಲ್ಲ. ಇಂತಹ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಉದ್ಯೋಗ, ವಭೂಮಿ ಮತ್ತು ಆಹಾರಕ್ಕಾಗಿ ಒತ್ತಾಯಿಸಿ, ಚಳುವಳಿ ನಡೆಸಲು ನೀಡಿರುವ ಕರೆ ಅತ್ಯಂತ ಸಮಯೋಚಿತವಾದದ್ದು. ವ್ಯಾಪಕವಾಗಿ ಜನರ ನಡುವೆ ಪ್ರಚಾರ ನಡೆಸಿ, ನಿರ್ದಿಷ್ಟ ಪ್ರದೇಶಗಳಲ್ಲಿ ಚಳುವಳಿಯನ್ನು ತೀವ್ರಗೊಳಿಸುವುದು ಅಗತ್ಯ ಎಮದು ಸಿಪಿಐ(ಎಂ) ಮನವಿ ಮಾಡಿದೆ.

ಪ್ರಮುಖ ಬೇಡಿಕೆಗಳು

ಇನ್ನೂ ಹಲವಾರು ಸಮಸ್ಯೆಗಳ ಕುರಿತು ಸರಕಾರದ ಗಮನ ಸೆಳೆದ ಕೇಂದ್ರ ಸಮಿತಿಯು ಈ ಕೆಳಗಿನವುಗಳ ಕುರಿತು ಜನರ ನಡುವೆ ವ್ಯಾಪಕ ಪ್ರಚಾರ ನಡೆಸಬೇಕೆಂದು ಕರೆ ನೀಡಿದೆ.

ಉಲ್ಬಣಗೊಳ್ಳುತ್ತಿರುವ ಕಾರ್ಷಿಕ ಬಿಕ್ಕಟ್ಟು : ಕಾರ್ಷಿಕ ಬಿಕ್ಕಟ್ಟು ದಿನೇ ದಿನೇ ಉಲ್ಬಣಗೊಳ್ಳುತ್ತಿದೆ. ರೈತರು ಬೆಳೆದ ಬೆಳೆಗಳಿಗೆ ದರ ಕುಸಿಯುತ್ತಿದೆ. ಇದರಲ್ಲಿ ಮೆಣಸು, ಟೀ, ಕೆಲವೊಂದು ತರಕಾರಿಗಳು ಪ್ರಮುಖವಾದವುಗಳು. ಇಲ್ಲಿ ಸರಕಾರದ ಮಧ್ಯಪ್ರವೇಶ ಅಗತ್ಯವಿದೆ.

ಇನ್ನೊಂದೆಡೆಯಲ್ಲಿ ದೇಶದಲ್ಲಿ 150 ಜಿಲ್ಲೆಗಳಲ್ಲಿ ಕೂಲಿಗಾಗಿ ಕಾಳು ಯೋಜನೆಯನ್ನು ಯುಪಿಎ ಸರಕಾರ ಜಾರಿಗೊಳಿಸಿದೆ. ಕರ್ನಾಟಕದಲ್ಲಿ ಚಿತ್ರದುರ್ಗ, ದಾವಣಗೆರೆ ಮತ್ತು ಬೀದರ್ ಜಿಲ್ಲೆಗಳಲ್ಲಿ ಮಾತ್ರ ಈ ಯೋಜನೆ ಜಾರಿಗೆ ಬರುತ್ತಿದೆ. ನವೆಂಬರ್ 2004ರಂದೇ ಈ ಯೋಜನೆಯ ರೂಪುರೇಷೆಗಳನ್ನು ಹಾಕಿದ್ದರೂ ಇದುವರೆಗೆ ಹಲವಾರು ರಾಜ್ಯಗಳಲ್ಲಿ ಅನುಷ್ಠಾನಕ್ಕೆ ಬರಲಿಲ್ಲ. ಅನುಷ್ಠಾನಗೊಂಡರೂ ಮಧ್ಯವರ್ತಿಗಳು, ಕಾಂಟ್ರಾಕ್ಟುದಾರರು ಹೇರಳ ಲಾಭ ಗಳಿಸುತ್ತಾ, ಜನರನ್ನು ವಂಚಿಸುತ್ತಿದ್ದಾರೆ. ಕಳಪೆ ಆಹಾರ ಸಾಮಗ್ರಿಯ ಪೂರೈಕೆ, ಕನಿಷ್ಠ ರೂ.20ನ್ನು ನಗದು ರೂಪದಲ್ಲಿ ನೀಡಬೇಕೆಂದು ಕಾನೂನನ್ನು ಉಲ್ಲಂಘಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಘಟಕಗಳು ಶ್ರಮಿಸಬೇಕೆಂದು ಕೇಂದ್ರ ಸಮಿತಿ ಕರೆ ನೀಡಿದೆ.

ಬಿಹೆಚ್‌ಇಎಲ್ ಮತ್ತು ಇತರೆ ಸಾರ್ವಜನಿಕ ಉದ್ದಿಮೆಗಳಲ್ಲಿ ಬಂಡವಾಳ ಹಿಂತೆಗೆತ

ಯುಪಿಎ ಸರಕಾರವು ಅಂಗೀಕರಿಸಿದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಬಂಡವಾಳ ಮಾರುಕಟ್ಟೆಯಿಂದ ಸಂಪನ್ಮೂಲಗಳನ್ನು ಸಂಗ್ರಹಿಸುವಾಗಲೇ ನವರತ್ನ ಕಂಪೆನಿಗಳನ್ನು ಸಾರ್ವಜನಿಕ ಉದ್ದಿಮೆಯಲ್ಲಿಯೇ ಉಳಿಸಿಕೊಳ್ಳಬೇಕು ಎಂದು ಹೇಳಿದೆ. ಅಂದರೆ ಅತಿ ಹೆಚ್ಚು ಲಾಭದಾಯಕವಾದ ಇಂಡಿಯನ್ ಆಯಿಲ್, ಬಿಹೆಚ್‌ಇಎಲ್, ಓಎನ್‌ಜಿಸಿ ಮೊದಲಾದ ಕಂಪೆನಿಗಳು ತಮಗೆ ಬೇಕಾದ ಬಂಡವಾಳವನ್ನು ಸಂಗ್ರಹಿಸಲು ತಮ್ಮ ಆಡಳಿತ ಮಂಡಳಿಗಳಲ್ಲಿ ನಿರ್ಧಾರ ಕೈಗೊಂಡು ಮಾರುಕಟ್ಟೆಗಳಿಂದ ಹಣವನ್ನು ಸಂಗ್ರಹಿಸುತ್ತವೆ. ಆಡಳಿತ ಮಂಡಳಿಗಳು ತಾವೇ ನಿರ್ಧಾರ ಕೈಗೊಂಡು ಹಣ ಸಂಗ್ರಹಿಸಿದಲ್ಲಿ ಅದು ಆಯಾ ಕಂಪೆನಿಗಳಲ್ಲೇ ಉಳಿದುಕೊಳ್ಳುತ್ತದೆ.

ಆದರೆ ಬಿಹೆಚ್‌ಇಎಲ್‌ನಲ್ಲಿ ಬಂಡವಾಳ ಹಿಂತೆಗೆದುಕೊಳ್ಳುವ ಸರಕಾರದ ನಿರ್ಧಾರದಿಂದಾಗಿ, ಆ ಹಣವು ಸರಕಾರದ ಪಾಲಾಗುತ್ತದೆ. ಅಂದರೆ ಬಿಹೆಚ್‌ಇಎಲ್‌ನ ಶೇ.10ರಷ್ಟು ಶೇರುಗಳನ್ನು ಮಾರಾಟ ಮಾಡಿ ಬಂದ ಹಣವನ್ನು ರಾಷ್ಟ್ರೀಯ ಹೂಡಿಕೆ ನಿಧಿ (National Investment Fund)ಗೆ ವರ್ಗಾಯಿಸಲಾಗುವುದು. ಆ ಮೂಲಕ ಸರಕಾರದ ವೆಚ್ಚಗಳಿಗೆ ಅದನ್ನು ಉಪಯೋಗಿಸಲಾಗುವುದು.

ಕೇಂದ್ರ ಸರಕಾರವು ಸದ್ಯಕ್ಕೆ ಬಿಹೆಚ್‌ಇಎಲ್‌ನಲ್ಲಿ ಶೇ.10ರಷ್ಟು ಶೇರುಗಳನ್ನು ಮಾರಾಟ ಮಾಡಬೇಕೆಂದು ನಿರ್ಧಾರ ಕೈಗೊಂಡಿದ್ದರೂ, ಮುಂದೆ ಇತರೆ ಲಾಭದಾಯಕ ಉದ್ದಿಮೆಗಳ ಶೇರುಗಳನ್ನು ಮಾರಾಟ ಮಾಡುವ ಯೋಜನೆ ಇಟ್ಟುಕೊಂಡಿದೆ. ಇದು ಮುಂದುವರಿದಲ್ಲಿ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳು ಖಾಸಗೀಕರಣಗೊಳ್ಳುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಈ ನಿರ್ಧಾರವನ್ನು ಖಂಡತುಂಡವಾಗಿ ವಿರೋಧಿಸಬೇಕಾಗಿದೆ.

ಈ ಹೋರಾಟದಲ್ಲಿ ಕಾರ್ಮಿಕರ ಸಂಘಟನೆಗಳು, ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರನ್ನು ಅಣಿನೆರೆಸಬೇಕೆಂದು ಕೇಂದ್ರ ಸಮಿತಿ ಕರೆ ನೀಡಿದೆ.

ಪೆಟ್ರೋಲಿಯಂ ದರ ಹೆಚ್ಚಳ : ಪೆಟ್ರೋಲಿಯಂ ದರ ಹೆಚ್ಚಳದ ವಿರುದ್ಧ, ಈಗಾಗಲೇ ಕೇಂದ್ರ ಸರಕಾರಕ್ಕೆ ಎಚ್ಚರಿಕೆ ನೀಡಿದ್ದು ಎಡಪಕ್ಷಗಳ ಒತ್ತಾಯವನ್ನು ಪರಿಗಣಿಸದೆ ದರ ಹೆಚ್ಚಿಸಿದರಲ್ಲಿ ದೇಶದಾದ್ಯಂತ ತೀವ್ರ ಪ್ರತಿಭಟನೆ ಹಮ್ಮಿಕೊಳ್ಳಬೇಕೆಂದು ಕರೆ ನೀಡಲಾಗಿದೆ. (ಈ ಕುರಿತು ಐಕ್ಯರಂಗದಲ್ಲಿ ಈಗಾಗಲೇ ಪ್ರಕಟವಾಗಿದೆ.)

ಸಿಪಿಐ(ಎಂ) ಕೇಂದ್ರ ಸಮಿತಿ ಕರೆ



ಕೋಮು ಶಕ್ತಿಗಳ ಚಟುವಟಿಕೆಗಳು : ದೇಶದ ವಿವಿಧೆಡೆಗಳಲ್ಲಿ ಸಂಘ ಪರಿವಾರದ ಚಟುವಟಿಕೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ಜಾತ್ಯತೀತ, ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಬೇಕಾಗಿದೆ. ವಿಶ್ವ ಹಿಂದೂ ಪರಿಷತ್, ಭಜರಂಗದಳದ ಚಟುವಟಿಕೆಗಳು ತೀವ್ರಗೊಳ್ಳುತ್ತಿದ್ದು ಅಲ್ಪಸಂಖ್ಯಾತರ ಮೇಲೆ ಮುಗಿ ಬೀಳುತ್ತಿದೆ.

2002ರಲ್ಲಿ ಗುಜರಾತಿನಲ್ಲಿ ನಡೆದ ಕೋಮುದಂಗೆಗಳಲ್ಲಿ ಪಾಲುಗೊಂಡ ಆಪಾದಿತರಿಗೆ ಶಿಕ್ಷೆ ಆಗಿಲ್ಲ. ಗೋಧ್ರಾ ಗಲಭೆಯಲ್ಲಿ ಬಂಧಿತರಾದವರ ಕುರಿತು 'ಪೋಟಾ ವಿಮರ್ಶಾ' ಸಮಿತಿಯು ನೀಡಿದ ವರದಿಯನ್ನು ಬಹಿರಂಗಗೊಳಿಸಬೇಕು ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸಿದ ಸಿಪಿಐ(ಎಂ), ಗುಜರಾತ್ ಗಲಭೆಯಲ್ಲಿನ ಪ್ರಮುಖ ಕೇಸುಗಳನ್ನು ಸಿಬಿಐಗೆ ವಹಿಸಬೇಕೆಂದು ಕೇಂದ್ರ ಸರಕಾರವನ್ನು ಆಗ್ರಹಿಸಿದೆ.

ಎನ್.ಡಿ.ಎ. ಸರಕಾರದ ಅವಧಿಯಲ್ಲಿ ಕಳಂಕಿತ ಮುಂಬೈನ ಸೆಂಟಾರ್ ಹೋಟೇಲ್ ಮಾರಾಟ ಮತ್ತುಕೇರಳದ ಕೋವಲಂನಲ್ಲಿರುವ ಐಟಿಡಿಸಿ ಹೋಟೆಲ್ ಮಾರಾಟದ ಹಿಂದಿರುವ ಭ್ರಷ್ಟಾಚಾರದ ಕುರಿತು ಸಿಬಿಐ ತನಿಖೆ ನಡೆಸಬೇಕೆಂದು ಆಗ್ರಹಿಸಿದೆ.

ಬಿಹಾರ ಚುನಾವಣೆ : ಅಕ್ಟೋಬರ್/ನವೆಂಬರ್ ತಿಂಗಳಲ್ಲಿ ನಡೆಸಬಹುದಾದ ಬಿಹಾರ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿ/ಜೆಡಿಯು ಕೂಟವನ್ನು ಸೋಲಿಸಲು ಜಾತ್ಯತೀತ ಶಕ್ತಿಗಳ ಮತಗಳು ಒಡೆಯದಂತೆ ಕಾರ್ಯತಂತ್ರ ರೂಪಿಸಲು ನಿರ್ಧರಿಸಿದ್ದು ಈ ಕುರಿತು ಪಾಲಿಟ್ ಬ್ಯೂರೋಗೆ ಅಧಿಕಾರ ನೀಡಿದೆ.

ವಿದೇಶಾಂಗ ನೀತಿ : ಚೀನಾ ಪ್ರಧಾನಿಯ ಭಾರತ ಭೇಟಿ, ಪಾಕಿಸ್ತಾನದೊಂದಿಗೆ ಸೌಹಾರ್ದ ಸಂಬಂಧಗಳಲ್ಲಿ ವೃದ್ಧಿಯನ್ನು ಸ್ವಾಗತಿಸಿದ ಕೇಂದ್ರ ಸಮಿತಿ, ಅಮೇರಿಕಾದೊಂದಿಗೆ ಯುದ್ಧ ವಿಮಾನ ಮಾರಾಟ ಒಪ್ಪಂದದ ಕುರಿತು ಎಚ್ಚರಿಕೆ ನೀಡಿದೆ. ಅಲ್ಲದೆ ಕ್ಷಿಪಣಿ ರಕ್ಷಣಾ ವ್ಯವಸ್ಥೆ (ಎಂ.ಡಿ.ಎಸ್.)ಯಲ್ಲಿ ಭಾರತ ಸರಕಾರ ಭಾಗಿಯಾಗುವುದನ್ನು ವಿರೋಧಿಸಿದೆ.

ನೆರೆಯ ಬಾಂಗ್ಲಾದೇಶದಲ್ಲಿ ಉಗ್ರಗಾಮಿ ಚಟುವಟಿಕೆಗಳಿಗೆ ಆಶ್ರಹ ನೀಡುತ್ತಿರುವುದಕ್ಕೆ, ಮೂಲಭೂತವಾದಿ ಚಟುವಟಿಕೆಗಳು ಹೆಚ್ಚುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸಿಪಿಐ(ಎಂ), ಕೇಂದ್ರ ಸರಕಾರವು ಮಧ್ಯಪ್ರವೇಶಿಸಿ ಕಟ್ಟು ನಿಟ್ಟಾದ ಕ್ರಮವಹಿಸಬೇಕೆಂದು ಆಗ್ರಹಿಸಿದೆ. ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕುಗೊಳಿಸಿರುವ ನೇಪಾಳಕ್ಕೆ ಮಿಲಿಟರಿ ಸಾಮಗ್ರಿಗಳನ್ನು ಪೂರೈಸುವುದನ್ನು ಸಹ ಅದು ವಿರೋಧಿಸಿದೆ.

ಸಂಘಟನಾ ನಿರ್ಧಾರಗಳು : 18ನೇ ಮಹಾಧಿವೇಶನದಲ್ಲಿ ರಾಜಕೀಯ - ಸಂಘಟನಾ ವರದಿಯ ಮೇಲೆ ನಡೆದ ಚರ್ಚೆಯ ಆಧಾರದಲ್ಲಿ ಕೆಲವು ತಿದ್ದುಪಡಿ, ಸಲಹೆಗಳನ್ನು ಸೇರಿಸಿ ವರದಿಯನ್ನು ಕೇಂದ್ರ ಸಮಿತಿಯು ಅಂತಿಮಗೊಳಿಸಿತು. ಇದರಲ್ಲಿ ಮಹಾಧಿವೇಶನವು ಚರ್ಚಿಸಿದ "ಕೆಲವು ನೀತಿಗಳ ಕುರಿತು" ವರದಿಯು ಸೇರಿದೆ.

ವಿವಿಧ ರಾಜ್ಯ ಸಮಿತಿಗಳ ಉಸ್ತುವಾರಿ ಜವಾಬ್ದಾರಿಯನ್ನು ನಿರ್ಧರಿಸಲಾಗಿದ್ದು, ಕಾಂ। ಕೆ.ವರದರಾಜನ್ ಪಿ.ಬಿ.ಸದಸ್ಯರು ಮತ್ತು ಪಿ.ಕರುಣಾಕರನ್ ಕೇಂದ್ರ ಸಮಿತಿ ಸದಸ್ಯರು ಕರ್ನಾಟಕ ರಾಜ್ಯ ಸಮಿತಿಯ ಉಸ್ತುವಾರಿಯಲ್ಲಿರುತ್ತಾರೆ.

ಪಾಲಿಟ್ ಬ್ಯೂರೋ ಮತ್ತು ಕೇಂದ್ರ ಕಾರ್ಯದರ್ಶಿ ಮಂಡಳಿಯ ಕೆಲಸದ ವಿಂಗಡಣೆಯನ್ನು ಅಂತಿಮಗೊಳಿಸಲಾಗಿದೆ. ಕೇಂದ್ರ ಕಾರ್ಯದರ್ಶಿ ಮಂಡಳಿಯಲ್ಲಿ 1. ಪ್ರಕಾಶ್ ಕಾರಟ್, 2. ಹನ್ನನ್‌ಮುಲ್ಲಾ, 3. ಹರಿಸಿಂಗ್ ಕಾಂಗ್, 4. ನಿಲೋತ್ಪಲ್ ಬಸು ಇದ್ದು ಇನ್ನೊಬ್ಬರನ್ನು 3 ತಿಂಗಳೊಳಗೆ ಆಯ್ದುಕೊಳ್ಳಲಾಗುವುದು.

ತುರ್ತು ಪ್ರಚಾರ : ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಈ ಕೆಳಗಿನ ಒತ್ತಾಯಗಳನ್ನು ಮುಂದಿರಿಸಿ ಜನರ ನಡುವೆ ತೀವ್ರ ಪ್ರಚಾರ ನಡೆಸಬೇಕೆಂದು ಕರೆ ನೀಡಿದೆ.

1. ಬಿಹೆಚ್‌ಇಎಲ್ ಮತ್ತು ಇತರೆ ಸಾರ್ವಜನಿಕ ಉದ್ದಿಮೆಗಳಲ್ಲಿ ಬಂಡವಾಳ ಹಿಂತೆಗೆತದ ವಿರುದ್ಧ
2. ದೇಶದಾದ್ಯಂತ 150 ಜಿಲ್ಲೆಗಳಲ್ಲಿ (ಕರ್ನಾಟಕದಲ್ಲಿ 3) ಕೂಲಿಗಾಗಿ ಕಾಳು ಯೋಜನೆಗಳ ಸಮರ್ಪಕ ಜಾರಿಗಾಗಿ, ವೇತನವನ್ನು ನಗದು ಮತ್ತು ವಸ್ತುಗಳ ರೂಪದಲ್ಲಿ ಸರಿಯಗಿ ನೀಡುವುದರ ಬಗ್ಗೆ ಪಕ್ಷದ ಘಟಕಗಳ ಗಮನ.
3. ಪೆಟ್ರೋಲ್ ದರ ಹೆಚ್ಚಿಸಿದಲ್ಲಿ ಕೂಡಲೇ ಪ್ರತಿಭಟನೆ.
4. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ (ಎನ್.ಆರ್.ಇ.ಜಿ. ಆಕ್ಟ್) ಮತ್ತು ಪರಿಶಿಷ್ಟ ಪಂಗಡ (ಅರಣ್ಯ ಹಕ್ಕು) ಕಾಯಿದೆಯ ಅಂಗೀಕಾರಕ್ಕಾಗಿ ವ್ಯಾಪಕ ಪ್ರಚಾರ.

ಒಟ್ಟಾರೆಯಾಗಿ, ಜನರನ್ನು ಬಾಧಿಸುವ ದೈನಂದಿನ ಸಮಸ್ಯೆಗಳ ಪರಿಹಾರಕ್ಕಾಗಿ ದೇಶದಾದ್ಯಂತ ಚಳುವಳಿಯನ್ನು ಹಮ್ಮಿಕೊಂಡಿರುವ ಸಿಪಿಐ(ಎಂ)ನ ನಿರ್ಧಾರ ಸ್ವಾಗತಾರ್ಹ. ಇಂದಿನ ಸನ್ನಿವೇಶದಲ್ಲಿ ಇದು ಅಗತ್ಯ ಕೂಡಾ.

ಶಿಕ್ಷಣ : ಯುಪಿಎ ಸರ್ಕಾರಕ್ಕೆ ಒಂದು ವರ್ಷ

ನಳಿನಿತನೇಜಾ

ಫ್ಯಾಸಿಸ್ಟ್ ಮಾದರಿಯ 'ಹಿಂದುತ್ವ'ದ ಅಜೆಂಡಾವನ್ನು ಶಿಕ್ಷಣ ರಂಗದಲ್ಲಿ ಜಾರಿಗೊಳಿಸುವ ನಿಷ್ಠಮಯಿಗೊಳಿಸಿದ್ದ ಎನ್‌ಡಿಎ ಸರ್ಕಾರದ ಕ್ರಮಗಳನ್ನು ಹಿಟಿಗೊಳಿಸಲು ಮುಂದಾಗಬೇಕಿರುವ ಯುಪಿಎ ಸರ್ಕಾರ ಈ ಒಂದು ವರ್ಷದಲ್ಲಿ ಏನು ಮಾಡಿದೆ? ಏನು ಮಾಡಬೇಕಾಗಿದೆ?


ಇತ್ತೀಚೆಗೆ ಯು.ಪಿ.ಎ ಸರ್ಕಾರ ರಚನೆಗೊಂಡ ಒಂದು ವರ್ಷದ ಸಂಭ್ರಮವನ್ನು ಆಚರಿಸಲಾಯಿತು. ದೇಶದ ಜನರ ಆಶೋತ್ತರವನ್ನು ಈಡೇರಿಸುವುದರಲ್ಲಿ, 2004ರ ಜನಾದೇಶವನ್ನು ಪಾಲುಸುವುದರಲ್ಲಿ ಯುಪಿಎ ಸರ್ಕಾರ ತೃಪ್ತಿಕರವಾಗಿ ಕೆಲಸ ಮಾಡುತ್ತಿದೆ ಎಂದು ಬೆನ್ನು ತಟ್ಟಿಕೊಳ್ಳಲಾಯಿತು. ಸಿಪಿಐ(ಎಂ) ಮತ್ತು ಎಡ ಪಕ್ಷಗಳು ನಿರಂತರವಾಗಿ ಎತ್ತುತ್ತಿರುವ ಆಕ್ಷೇಪಗಳನ್ನು ನಿರ್ಲಕ್ಷಿಸುತ್ತಾ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಸೀಮಾರೇಖೆ ಉಲ್ಲಂಘಿಸಿ ಎನ್.ಡಿ.ಎ ಸರ್ಕಾರ ಅದೇ ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಹಾದಿಯಲ್ಲಿ ಮುನ್ನುಗ್ಗಲು ಹವಣಿಸುತ್ತಿರುವುದನ್ನು ಜನತೆ ಗಮನಿಸುತ್ತಿದ್ದಾರೆ ಎಂಬ ಎಚ್ಚರವೂ ಆಳುವ ಕೇಂದ್ರಸರ್ಕಾರಕ್ಕೆ ಇಲ್ಲದಾಗಿದೆ.

ಶಿಕ್ಷಣ ನೀತಿಗಳು ಸಮಗ್ರ ಆರ್ಥಿಕ ನೀತಿಗಳ ಭಾಗ, ಶಿಕ್ಷಣ ನೀತಿ ಮಾತ್ರವೇ ಪ್ರತ್ಯೇಕವಾಗಿ ಪ್ರಗತಿಪರವಾಗಿರಲು ಸಾಧ್ಯವಿಲ್ಲವೆಂಬುದು ಯುಪಿಎ ಸರ್ಕಾರ ಒಂದು ವರ್ಷದ ಶಿಕ್ಷಣ ನೀತಿಯಿಂದಲೂ ಸಾಬೀತಾಗುತ್ತಿದೆ. ಅವೇ ಡಬ್ಲ್ಯು.ಟಿ.ಒ, ಗ್ಯಾಟ್ ಒಪ್ಪಂದ ಷರತ್ತುಗಳಿಂದ ಪ್ರೇರಿತವಾದ ನೀತಿಗಳನ್ನೇ ಮತ್ತಷ್ಟು ಮುಂದೊತ್ತಲು ಸರ್ಕಾರ ಪ್ರಯತ್ನಿಸುತ್ತಿದೆ.

ಮಾಧ್ಯಮಗಳಲ್ಲಿ ಬಹಳಷ್ಟು ಪ್ರಚಾರ ಪಡೆಯುತ್ತಿರುವ ಮತ್ತು ತಾನು ಬದ್ಧವೆಂದು ಯುಪಿಎ ಸರ್ಕಾರ ಘೋಷಿಸಿರುವ ಶಿಕ್ಷಣದ ಕೋಮುವಾದೀಕರಣವನ್ನು ನಿವಾರಿಸುವ 'ನಿರ್ವಿಷೀಕರಣ'ವನ್ನಾದರೂ ದೃಢವಾಗಿ ಕೈಗೆತ್ತಿಕೊಳ್ಳಲಾಗಿದೆಯೇ ಎಂದರೆ ಅದರಲ್ಲಿಯೂ ಚಂಚಲತೆ, ದೃಢತೆಯ ಕೊರತೆ ತೀವ್ರವಾಗಿ ಕಾಡುತ್ತಿದೆ. ಈ ಸಂಬಂಧದ ಕೆಲಸ ಆಗಬೇಕಾದಷ್ಟು ವೇಗವಾಗಿ ಆಗುತ್ತಿಲ್ಲ ಎಂಬುದಕ್ಕಿಂತಲ್ಲ. ಸರ್ಕಾರದ ಶಿಕ್ಷಣ ನೀತಿ ಹಿಡಿದಿರುವ ದಿಕ್ಕು ಆಕ್ಷೇಪಾರ್ಹವೂ ಆತಂಕಕಾರಿಕಾರಿಯೂ ಆಗಿದೆ.

ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಹ ಹೊಸ ಪಠ್ಯಗಳನ್ನು ರೂಪಿಸಲು ಸಮಯ ಬೇಕಾಗುತ್ತದೆ ಎಂಬ ಕಾರಣ ಒಡ್ಡಿ ಅದೇ ಆರ್‌ಎಸ್‌ಎಸ್ ಮತಾಂಧ ವಿಚಾರಧಾರೆಯ ಪಠ್ಯವನ್ನೇ ಒಂದು ವರ್ಷಕಾಲ ಮುಂದುವರಿಸ ಲಾಯಿತು.

ಎನ್‌ಡಿಎ ಸರ್ಕಾರಕ್ಕೂ ಹಿಂದೆ ಇದ್ದ ಪಠ್ಯಕ್ರಮವನ್ನೇ ಪುನರ್ ನಿಗದಿಗೊಳಿಸಿ, ವಿಷಪೂರಿತ ಪಠ್ಯಗಳನ್ನು ಕಿತ್ತೆಸೆಯಬೇಕೆಂಬ ತಜ್ಞರ ಶಿಫಾರಸ್ಸುಗಳನ್ನು ಲೆಕ್ಕಿಸಲಿಲ್ಲ. ಇದೀಗ 'ಕೇಸರಿಯೂ ಅಲ್ಲದ ಎಡಪಂಥೀಯವೂ ಅಲ್ಲದ' ಪಠ್ಯಕ್ರಮವನ್ನು ರೂಪಿಸುವುದಾಗಿ ಹೇಳಲಾಗುತ್ತಿದೆ. ಇದರ ಸಂಬಂಧ ಲೇಖಕರನ್ನು, ತಜ್ಞರನ್ನು ಎನ್.ಡಿ.ಎ ಸರ್ಕಾರಕ್ಕೂ ಹಿಂದಿದ್ದ ಪಠ್ಯಗಳನ್ನು ಸಹ ಪರಿಷ್ಕರಿಸಲು ಕೇಳಲಾಗುತ್ತಿದೆ. **ಬಿಜೆಪಿ ಪಠ್ಯನೀತಿಗೆ ಪರ್ಯಾಯವಾಗಿ ಕೇಂದ್ರ ಸರ್ಕಾರ ಹೊಸ ಪಠ್ಯ ನೀತಿಯನ್ನು ರೂಪಿಸಿರುವುದಾಗಿ ಹೇಳುತ್ತಿದ್ದರೂ, ಅದನ್ನು ಸಾರ್ವಜನಿಕ ಚರ್ಚೆಗಾಗಿ ಬಿಡುಗಡೆ ಮಾಡಲಾಗಿಲ್ಲ.** ಈ ವಿಚಾರದಲ್ಲಿ ಅದೇ ಬಜೆಪಿ ಪರಂಪರೆಯನ್ನು ಮುಂದುವರಿಸಲಾಗುತ್ತಿದೆ. 'ಇತಿಹಾಸದ ಭಾರವನ್ನು ಕಡಿತಗೊಳಿಸುವ ಹೆಸರಿನಲ್ಲಿ ವಿದ್ಯಾರ್ಥಿಗಳು ಕಲಿಯಲೇಬೇಕಾದ ಕೈಗಾರಿಕಾ ಕ್ರಾಂತಿ ಹಾಗೂ ಎರಡನೇ ಮಹಾಯುದ್ಧದ ನಡುವಿನ ಇತಿಹಾಸ ಭಾಗವನ್ನೇ ತರಗತಿ 11,12ನೇ ವಿದ್ಯಾರ್ಥಿಗಳಿಗೆ ಕಡಿತ ಮಾಡಲಾಗಿದೆ.



ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಏನು ನಡೆದಿದೆ ಎಂಬ ಬಗ್ಗೆಯೂ ಸೂಕ್ತ ಗಮನ ನೀಡಲಾಗಿಲ್ಲ. ಇಲ್ಲಿ ಆರ್‌ಎಸ್‌ಎಸ್ ನಿಯಂತ್ರಣದ ವಿದ್ಯಾಭಾರತಿ ಶಿಕ್ಷಣ ಸಂಸ್ಥೆಗಳಿಗೆ ಸ್ವೇಚ್ಛಾಚಾರಕ್ಕೆ ಅವಕಾಶ ಮುಂದುವರಿದಿದೆ. ಈ ಶಾಲೆಗಳ ಪಠ್ಯಕ್ರಮವೂ ಭಾರತದ ಸಂವಿಧಾನಕ್ಕೆ ವಿರುದ್ಧವಾಗಿದ್ದಾಗಲೂ ಅವು ಸರ್ಕಾರದ ಅನುದಾನವನ್ನು ಪಡೆಯುತ್ತಲೇ ಇವೆ. ದೇಶದ ವಿಶ್ವವಿದ್ಯಾಲಯಗಳಲ್ಲಿ ಜ್ಯೋತಿಷ್ಯಶಾಸ್ತ್ರ-ಕರ್ಮಗಳನ್ನು ಇನ್ನು ಕಲಿಸಲಾಗುತ್ತಿದೆ.

ಆರ್‌ಎಸ್‌ಎಸ್‌ನಂತಹ ಕೋಮುವಾದಿ ಸಂಘಟನೆಗಳ ದೌರ್ಬಲ್ಯವಿರುದ ಸಮಾಜದಲ್ಲಿ ಶಿಕ್ಷಣದ ಖಾಸಗೀಕರಣವು ಮತ್ತಷ್ಟು ಕೋಮುವಾದೀಕರಣಕ್ಕೆ ದಾರಿ ಮಾಡಿಕೊಡುತ್ತದೆ ಎಂಬ ಎಚ್ಚರವೂ ಸರ್ಕಾರಕ್ಕಿಲ್ಲ. ಶಿಕ್ಷಣದ ನಿರ್ಲಜ್ಜ ಖಾಸಗೀಕರಣಕ್ಕೆ ಸರ್ಕಾರ ಮುಂದಾಗಿದೆ.

ಶಿಕ್ಷಣ ಖಾಸಗೀಕರಣ : ಎಡಪಕ್ಷಗಳ ಒತ್ತಾಸೆಯಿಂದಾಗಿ ಸಂಗ್ರಹ ಮಾಡಲಾಗುತ್ತಿರುವ ಶೇ2ರ ಶಿಕ್ಷಣ ಕರವನ್ನು ಇನ್ನೂ ಸರಿಯಾದ ದಾರಿಯಲ್ಲಿ ಬಳಸುವ ವ್ಯವಸ್ಥೆಯಾಗಿಲ್ಲ.

ಎನ್.ಡಿ.ಎ ಸರ್ಕಾರವು ಅಂಗೀಕರಿಸಿದ 'ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ ಮಸೂದೆ'ಯಲ್ಲಿ ಶಿಕ್ಷಣ ನೀಡುವುದರಲ್ಲಿ ಸರ್ಕಾರಗಳ ಹೊಣೆಗೇಡಿತನಕ್ಕೆ ಶಾಸನಬದ್ಧ ಸಮರ್ಥನೆ ಅಂಶವನ್ನು ಬದಲಿಸಬೇಕೆಂಬ ಗಂಭೀರ ಒತ್ತಾಯಕ್ಕೂ ಸರ್ಕಾರ ಗಮನ ನೀಡುತ್ತಿಲ್ಲ. ಲಕ್ಷಾಂತರ ಹುದ್ದೆಗಳು ಶಿಕ್ಷಣರಂಗದಲ್ಲಿ ಖಾಲಿ ಇದ್ದರೂ ಅದನ್ನು ತುಂಬುವ ಯಾವುದೇ ಆಲೋಚನೆ ಸರ್ಕಾರಕ್ಕಿಲ್ಲ.

ಬಹಳಷ್ಟು ನಿರೀಕ್ಷೆ ಒತ್ತಾಯಗಳ ನಡುವೆಯೂ ಉನ್ನತ ಶಿಕ್ಷಣಕ್ಕೆ ಬಜೆಟ್‌ನಲ್ಲಿ ಯಾವುದೇ ಹೆಚ್ಚಳವಾಗಲಿಲ್ಲ. ಶಿಕ್ಷಣ ಖಾಸಗೀಕರಣ ಅದರಲ್ಲಿಯೂ ವೃತ್ತಿಶಿಕ್ಷಣದ ಖಾಸಗೀಕರಣಕ್ಕೆ ತಡೆಯೇ ಇಲ್ಲವಾಗಿದೆ.

ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಿ ಸಾಮಾಜಿಕ ನ್ಯಾಯ - ಪ್ರತಿಭೆಗಳನ್ನು ರಕ್ಷಿಸಬೇಕೆಂಬ ನಿಟ್ಟಿನಲ್ಲಿ ಸರ್ಕಾರ ಭರವಸೆ ನೀಡಿದಂತೆ ಇನ್ನೂ ಕೇಂದ್ರಿಯ ಶಾಸನವನ್ನು ರೂಪಿಸಲಿಲ್ಲ. ಉನ್ನತ ಶಿಕ್ಷಣದಲ್ಲಿ ಸಹ ಶಿಕ್ಷಕರ ನೇಮಕಾತಿ ಮೇಲಿನ ನಿರ್ಬಂಧ ಮುಂದುವರಿದಿದೆ. ಅನುದಾನ ಸ್ತಂಭನದ ನೀತಿಯನ್ನು ಅನುಸರಿಸಲಾಗುತ್ತಿದೆ.

ದೂರ ಶಿಕ್ಷಣ ಪಡೆಯುವ ದುರ್ಬಲ ವಿಭಾಗದ ವಿದ್ಯಾರ್ಥಿಗಳಿಗೆ ದುಬಾರಿ ಶಿಕ್ಷಣ ಶುಲ್ಕ ವಿಧಿಸಿ ಅದರ ಮೂಲಕ ಆದಾಯಗಳಿಸುವ ನೀತಿಗೆ ಸರ್ಕಾರ ಇಳಿದಿದೆ.

ಒಟ್ಟಾರೆಯಾಗಿ ನೋಡಿದಾಗ **ಹಿಂದಿನ ಎನ್‌ಡಿಎ ಸರ್ಕಾರವು ಅಂಗೀಕರಿಸಿದ್ದ 'ಬಿರ್ಲಾ-ಅಂಬಾನಿ' ವರದಿ ಆಧಾರಲ್ಲಿಯೇ ಯುಪಿಎ ಸರ್ಕಾರದ ಶಿಕ್ಷಣ ನೀತಿಯು ಶಿಕ್ಷಣ ರಂಗದ ಮೇಲೆ ಧಾಳಿ ನಡೆಸುತ್ತಿದೆ.**


ಶೈಕ್ಷಣಿಕ ವ್ಯವಸ್ಥೆಯ ಪ್ರಜಾಪ್ರಭುತ್ವೀಕರಣವಾಗಬೇಕೆಂಬ ಬೇಡಿಕೆಗೆ ಸರ್ಕಾರ ಯಾವುದೇ ಬೆಲೆ ನೀಡಿಲ್ಲ. ಶಿಕ್ಷಣ ವಿರೋಧಿ ದಿಕ್ಕಿನತ್ತ ಸಾಗುತ್ತಿರುವ ಯುಪಿಎ ಸರ್ಕಾರ ನೀತಿಗಳನ್ನು ಶಿಕ್ಷಣ ಪ್ರೇಮಿ ಬೃಹತ್ ಆಂದೋಲನ ಮಾತ್ರವೇ ಸರಿಯಾದ ದಾರಿಗೆ ಕನಿಷ್ಟ 'ಸಾಮಾನ್ಯ ಕನಿಷ್ಟ ಕಾರ್ಯಕ್ರಮ'ದ ದಾರಿಗಾದರೂ ತರಬಹುದು.

ಕನ್ನಡದ ಸಾರಸಂಗ್ರಹ - ಆರ್.ರಾಮಕೃಷ್ಣ

ಪುಸ್ತಕ

ಅಜ್ಞಾನ ಎಂದೆಂಬ ಕತ್ತಲೆಯ ತೊಡೆದು
ಹಾಕದೇ ಸಾಧನೆಯ ಮಾಡಲಿಕೆ ಬರದು
ವೈಜ್ಞಾನಿಕ ವೈಚಾರಿಕ ಪುಸ್ತಕವ ಓದು,
ತೋರುವುದು ನಮಗೆಲ್ಲ ಉನ್ನತಿ ಜಾಡು

ವಿಡಂಬಾರಿ



ಪೇಟೆಂಟ್ ಹುಸಿನಗೆ

ಉದಾರವಾದಿ ತೋಳನ ರೂಪ
ಬೆಸೆದಿದೆ ಸುಲಿಗೆಯ ಬಗೆ ಬಗೆ ರೂಪ,
ಮುಸುಕು ಮುಖವಾಡದ ದಶಾವತಾರ
ಹಗಲು ದರೋಡೆಯ ಹರಿಕಾರ.

ಕೈಕೋಳವ ಕಮಂಡಲದಲ್ಲಿಟ್ಟು
ಖಾವಿಯ ಧರಿಸಿ ರುದ್ರಾಕ್ಷಿ ಹಿಡಿದು,
ಮಣೆ ಮಣೆ ಎನ್ನುತಾ ಬಾಯ್ತುಂಬ
ಮಣ ಮಣ ಮಂತ್ರ ಜಪಿಸಿತು,
ಚಿಗುರಿದ ಆಶೆಯ ಗರಿಗೆದರಿಸಿತು.

ಹುಲ್ಲುಗಾವಲಲಿ ಮೇಯುವ ಕುರಿ
ಮೂಕ ಮಂತ್ರಕೆ ಬೆರಗಾಯ್ತು,
ಖಾವಿ ಕಮಂಡಲಕೆ ಶರಣಾಯ್ತು,
ಕುರಿಯ ಹಣೆಗೆ, ಕುಂಕುಮ ಹಚ್ಚಿ,
ವಿಭೂತಿ ಬಳಿದ ಖಾವಿಯ ಮಾಯೆಗೆ
ಕೊರಳಲಿ ರಕ್ತವ ಸುರಿಸುತಾ
ಜೋಳಿಗೆಯೊಳಗೆ ಬಲಿಯಾಯ್ತು.

ಕುರಿಯನು ಹುಡುಕುತ ಬಂದನು ಒಡೆಯ
ಹುಡುಕಿ ನೋಡಿದ ಕುರಿಯ ಎಡೆಯ
ಮುಂಗಾಣದೆ ಶಾಸ್ತ್ರವ ಕೇಳಲು
ಖಾವಿಯ ಬಳಿಯಲಿ ನಿಂದ,
ಮಣೆ ಮಣೆ ಎನ್ನುವ ಮಂತ್ರವ ಖಾವಿ
ತೊಡಿಸಿತು ಕೋಳವ ಒಡೆಯನಿಗೆ,
ದಿಗ್ಭ್ರಮೆಯ ಹಾಡು ಬಿರುಗಾಳಿಯ ತುಂಬಾ.

ತೇಲುತ ತೇಲುತ ಪುಷ್ಪಕವು
ಮಾಯ ಲೋಕದಿ ಇಳಿಯಿತು ಧರೆಗೆ,
ತೋಳ ಕೈ ಕೋಳವ ಬೆಸೆದು
ಚಂಗನೆ ನೆಗೆಯಿತು ಪುಷ್ಪಕದೊಳಗೆ,
ಮುಂದಿನ ಸೀಟಿನಲಿ ಎಡಬಲದಿ
IMF, World Bank
ಪಕ್ಕದ ಮೆತ್ತನೆ ಪೀಠದಲಿ
'ಹುಸಿನಗೆ' ಸೂಸಿತು ಪೇಟೆಂಟ್
ಒಂದಕ್ಕೊಂದು ಕೈಯನು ಕುಲುಕಿ
ಆಳ್ಕೆ ಬಿರಿವಂದದಿ ನಕ್ಕಿದವು.

ಹಸಿದ ಮೂವರು ಸ್ನೇಹಿತರು
ಜೋಳಿಗೆ ಕುರಿಯನು ಸಿಗಿದು
ರಕ್ತ ದೋಕುಳಿ ಹಾಡಿದರು.
ತಣ ತಣ ಮಾಂಸವ ಹುರಿದರು,
ಹೆಂಡದ ಸವಿಯನು ಸವಿಯುತ
ತಲೆಯೋಡಿನ ಭೋಜನ ಮುಗಿಸಿದರು.

(W)ವೇಷವ ಮರೆಸುತ
(T)ಪಾಶವ ಹಾಕಲು
(O)ಮುಂದಿನ ದೇಶಕೆ ಹಾರಿದರು.

ಎನ್.ಎಸ್.ಶಂಕರೇಗೌಡ, ಮಳವಳ್ಳಿ
(ಇವರ ಚೊಚ್ಚಲ ಕಾವ್ಯಾಕೃತಿ
'ನೋವೆತ್ತವರ..' ದಿಂದ)

RBDECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ದ್ರಣ: ಹಸು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
nted & Published by Communist Party of India(Marxist), Karnataka State Committee. Editor : S.Y.GURUSHANTH